ಸಂಪುಟ: 21, ಸಂಚಿಕೆ: 138, ಪುಟಗಳು: 8, ಸೋಮವಾರ, 26 ಫೆಬ್ರವರಿ 2024 RNI NO. KARKAN/2002/08054
epaper: www.sanjemugilu.com




ಸುದ್ದಿಗಳ ಹೊನಲು
# ಸಂಜೆ ಮುಗಿಲು
ಕನ್ನಡ ಪ್ರಾದೇಶಿಕ ಸಂಜೆ ದಿನಪತ್ರಿಕೆ
ಬೆಂಗಳೂರು। ಬೆಂಗಳೂರು ಗ್ರಾಮಾಂತರ। ಕೋಲಾರ। ಚಿಕ್ಕಬಳ್ಳಾಪುರ। ರಾಮನಗರ। ಮಂಡ್ಯ। ಮೈಸೂರು। ಚಾಮರಾಜನಗರ

**ಸುಭಾಷಿತ**

ಸ್ವಲ್ಪ ಉಳ್ಳವನು ಬಡವನಲ್ಲ;
ಇನ್ನೂ ಬೇಕೆನ್ನುವವನು ಬಡವ

। ಸೆಬೇಕಾ

**ಪಂಚಾಂಗ**

(ಸೋಮವಾರ 26, ಫೆಬ್ರವರಿ -2024)

- ಸಂವತ್ಸರ- ಶೋಭಕೃತ್, ಋತು-ಶಿಶಿರ
- ಅಯನ-ಉತ್ತರಾಯಣ, ಮಾಸ- ಮಾಘ
- ಪಕ್ಷ- ಕೃಷ್ಣ, ತಿಥಿ- ಷಷ್ಠಿ
- ನಕ್ಷತ್ರ- ಹುಬ್ಬಾ
- ರಾಹುಕಾಲ: 04:59 PM 06 : 30 PM
- ಗುಳಿಕಕಾಲ: 03:28 PM04 : 59 PM
- ಯಮಗಂಡಕಾಲ: 12:27 PM 01 : 58 PM

# ಜೀವ ಪಣಕ್ಕಿಟ್ಟು ಮೆಟ್ಟಿಲಿಲ್ಲದ ಬಾವಿಗೆ ಇಳಿದು ನೀರು ತರುವ ಸ್ಥಿತಿ

**ಚಿಕ್ಕೋಡಿ:** ಬೇಸಿಗೆ ಆರಂಭಕ್ಕೂ ಮುನ್ನವೇ ರಾಜ್ಯದಲ್ಲಿ ನೀರಿಗಾಗಿ ಹಾಹಾಕಾರ ಎದ್ದಿದೆ. ರಾಜ್ಯದ ಬಹುತೇಕ ಕಡೆಗಳಲ್ಲಿ ನೀರಿಗಾಗಿ ಪರದಾಡುವಂತಹ ಸ್ಥಿತಿ ನಿರ್ಮಾಣವಾಗಿದೆ. ಕೃಷ್ಣಾ ನದಿ ಕೂಗಳತೆ ದೂರದಲ್ಲಿ ನೀರಿಗಾಗಿ ಹಾಹಾಕಾರ ಶುರುವಾಗಿದೆ. ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಗೌಡೇನವಾಡಿ ವಸತಿ ತೋಟದಲ್ಲಿ ನೀರಿನ ಸಮಸ್ಯೆ ಎದುರಾಗಿದೆ. ಜೀವ ಜಲಕ್ಕಾಗಿ ಜೀವ ಕೈಯಲ್ಲಿ ಹಿಡಿದು ನೀರು ತುಂಬಿಸೋ ಸ್ಥಿತಿ ಇಲ್ಲಿದೆ.

ಇನ್ನೂರಕ್ಕೂ ಅಧಿಕ ಮನೆಗಳಿರುವ ಈ ತೋಟದಲ್ಲಿ ನೀರಿಲ್ಲದೇ ಜನ ಪರಿತಪ್ಪಿಸುತ್ತಿದ್ದಾರೆ. ಬೋರ್ ವೆಲ್ ಗಳು ಬತ್ತಿ ಹೋಗಿವೆ, ಹೀಗಾಗಿ ಜನರು ಬಾವಿ ನೀರಿನ ಮೇಲೆ ಅವಲಂಬಿಸಿದ್ದಾರೆ. ಆದರೆ ಬಾವಿಯಿಂದ ನೀರು ತೆಗೆಯಬೇಕು ಎಂದರೆ ಜನರು ತಮ್ಮ ಜೀವವನ್ನೇ ಪಣಕ್ಕಿಡಬೇಕಿದೆ.







ಮೆಟ್ಟಿಲಿಲ್ಲದ ಮೂವತ್ತು ಅಡಿ ಬಾವಿಗಿಳಿದು ನೀರು ತುಂಬಬೇಕಿದೆ. ಮಹಿಳೆಯರು ಸೇರಿದಂತೆ ಎಲ್ಲರೂ ಜೀವ ಕೈಯಲ್ಲಿ ಹಿಡಿದು ಬಾವಿಗೆ ಇಳಿದು ನೀರು ತುಂಬುತ್ತಾರೆ. ಸ್ವಲ್ಪ ಯಾಮಾರಿದ್ರೂ, ಕಾಲು ಜಾರಿ ಪಾತಾಳಕ್ಕೆ ಬೀಳುವ ಭಯ ಇರುತ್ತೆ. ಆದರೂ ಜೀವ ಜಲಕ್ಕಾಗಿ ಜೀವವನ್ನೇ ಪಣಕ್ಕಿಡುತ್ತಿದ್ದಾರೆ.

ಬಾವಿಯ ನೀರು ಕಲುಷಿತವಾದ್ರೂ, ಗಾಲೀಜಾಗಿದ್ದರೂ ಅನಿವಾರ್ಯವೆಂಬಂತೆ ಅದೇ ನೀರನ್ನು ಕುಡಿದು ಜನ ಬದುಕುತ್ತಿದ್ದಾರೆ. ಹೀಗೆ ಬಾವಿಯಿಂದ ನೀರು ತುಂಬಿ ಎರಡು ಕಿ.ಮೀ. ದೂರ ನಡೆದುಕೊಂಡು ಬಂದು ಮನೆ ಸೇರಬೇಕಿದೆ. ಕೆಲಸ ಕಾರ್ಯ ಬಿಟ್ಟು ನಿತ್ಯ ನೀರು ಪುಟ 2

## ಸಂಕ್ಷಿಪ್ತ ಸುದ್ದಿ

### ಮಂಗಳೂರಿನಲ್ಲಿ ಯುವತಿ ನಾಪತ್ತೆ ಪ್ರಕರಣ: ಬಜರಂಗದಳ ದಾಳಿಗೆ ಹೆದರಿ ನಾಪತ್ತೆಯಾಗಿರುವ ಅನುಮಾನ




**ಮಂಗಳೂರು:** ಪಿಹೆಚ್ ಡಿ ವಿದ್ಯಾರ್ಥಿನಿ ಚೈತ್ರಾ, ಹೆಬ್ಬಾರ್ ನಾಪತ್ತೆ ಪ್ರಕರಣಇದೀಗ ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಬಜರಂಗದಳದ ದಾಳಿಗೆ ಹೆದರಿ ವಿದ್ಯಾರ್ಥಿನಿ ದಿಢೀರ್ ನಾಪತ್ತೆಯಾದರೇ ಎಂಬ ಅನುಮಾನ ಇದೀಗ ಕಾಡತೊಡಗಿದೆ. ಶಾರೂಖ್ ಜೊತೆ ಸಂಪರ್ಕದಲ್ಲಿರುವ ವಿಷಯ ಬಹಿರಂಗವಾಯಿತು ಎಂಬ ಕಾರಣಕ್ಕೆ ಫೆಬ್ರವರಿ 17ರ ಬೆಳಿಗ್ಗೆಯೇ ವಿದ್ಯಾರ್ಥಿನಿ ಪರಾರಿಯಾಗಿರಬಹುದು ಎಂಬ ಕುರಿತು ಪೊಲೀಸರು ಕಲೆಹಾಕಿರುವ ಮಾಹಿತಿಯಿಂದ ತಿಳಿದುಬಂದಿದೆ. ಪುಟ 2

### ಕೈ ನಾಯಕರ ಮಧ್ಯೆ ಲೋಕಸಭಾ ಟಿಕೆಟ್ ಫೈಟ್ ಹೈಕಮಾಂಡ್ ವಿರುದ್ಧ ಉಗ್ರಪ್ಪ ಅಸಮಾಧಾನ

**ಬಳ್ಳಾರಿ:** ರಾಜ್ಯ ರಾಜಕೀಯದಲ್ಲಿ ಗಮನ ಸೆಳೆದಿರುವ ಬಳ್ಳಾರಿ ಜಿಲ್ಲೆಯಲ್ಲಿ ಲೋಕಸಭಾ ಚುನಾವಣೆ ಕಾವು ರಂಗೇರುತ್ತಿದೆ. ಚುನಾವಣೆ ಘೋಷಣೆಗೂ ಮುನ್ನವೇ ಪಕ್ಷಗಳ ಸಾಧನೆ ಪಟ್ಟಿ ಹಿಡಿದು ಆಯಾ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಲು ನಾಯಕರು, ಮುಖಂಡರು ತೆರೆಮರೆಯಲ್ಲಿ ಸಿದ್ಧತೆ ನಡೆಸುತ್ತಿದ್ದಾರೆ.



ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಿಂದ ಆಕಾಂಕ್ಷಿಗಳ ಸಂಖ್ಯೆ ಹೆಚ್ಚಾಗಿದ್ದು, ಶಾಸಕರ ಪುತ್ರಿ, ಸಚಿವರ ಸಹೋದರ, ಮಾಜಿ ಸಂಸದರು, ಕಾಂಗ್ರೆಸ್ ನಾಯಕರು ಸೇರಿ ಅನೇಕರು ಟಿಕೆಟ್‌ಗಾಗಿ ರಾಜ್ಯ, ಹಾಗೂ ರಾಷ್ಟ್ರಮಟ್ಟದಲ್ಲಿ ಇನ್ನಿಲ್ಲದ ಲಾಬಿಯಲ್ಲಿ ನಿರತರಾಗಿದ್ದಾರೆ. ಕಳೆದ ಎರಡು ದಿನಗಳ ಹಿಂದೆ ಹಾಲಿ ಶಾಸಕ ಈ ತುಕಾರಾಂ ಅವರು ಹೊಸ ದಾಳ ಉರುಳಿಸಿದ್ದು, ನನಗೆ ಹೈಕಮಾಂಡ್ ಟಿಕೆಟ್ ಕೊಡುವುದಾಗಿ ಹೇಳಿದೆ. ಆದರೆ ನಾನು, ನನಗೆ ಬೇಡ ನನ್ನ ಮಗಳಿಗೆ ಟಿಕೆಟ್ ನೀಡಿ ಎಂದು ಮನವಿ ಮಾಡಿರುವೆ. ಪುಟ 2

## ಗೋ ಬ್ಯಾಕ್ ಶೋಭಾ ಕರಂದ್ಲಾಜೆ ಅಭಿಯಾನಕ್ಕೆ ಪೋಸ್ಟರ್

# ಯುವಕರ ವಿರುದ್ಧ ಎಫ್ಐಆರ್

**ಚಿಕ್ಕಮಗಳೂರು:** ಕೇಂದ್ರ, ಸಚಿವೆ ಶೋಭಾ ಕರಂದ್ಲಾಜೆ ವರ್ಸಸ್ ಮಾಜಿ ಶಾಸಕ ಸಿ.ಟಿ ರವಿ ನಡುವೆ ಚಿಕ್ಕಮಗಳೂರು-ಉಡುಪಿ ಲೋಕಸಭಾ ಕ್ಷೇತ್ರದ ಟಿಕೆಟ್ ಫೈಟ್ ಜೋರಾಗಿದೆ. ಗೋ ಬ್ಯಾಕ್, ಶೋಭಾ ಹಾಠಾವೋ ಎಂದು ಸಿ,ಟಿ. ರವಿ ಬೆಂಬಲಿಗರು ಅಭಿಯಾನ ನಡೆಸಿದ್ದಾರೆ. ಸದ್ಯ ಗೋ ಬ್ಯಾಕ್ ಶೋಭಾ ಕರಂದ್ಲಾಜೆ ಅಭಿಯಾನ ವಿಚಾರ ಸಂಬಂಧ ಪೋಸ್ಟರ್ ಅಂಟಿಸಿದ್ದ ನಾಲ್ವರು ಯುವಕರ ವಿರುದ್ಧ ಎಫ್ಐಆರ್ ದಾಖಲಾಗಿದೆ.

ಕಳೆದ ಜನವರಿ 01ರಿಂದ ಚಿಕ್ಕಮಗಳೂರು ಉಡುಪಿ ಲೋಕಸಭಾ ಕ್ಷೇತ್ರದ ಸಂಸದೆ ಕೇಂದ್ರ, ಸಚಿವೆ ಶೋಭಾ ಕರಂದ್ಲಾಜೆ ವಿರುದ್ಧ ಚಿಕ್ಕಮಗಳೂರು ಕ್ಷೇತ್ರದ ಬಿಜೆಪಿ ಕಾರ್ಯಕರ್ತರು ದಂಗಲ್ ಆರಂಭ ಮಾಡಿದ್ದಾರೆ. ಶೋಭಾ ವಿರುದ್ಧ ಗೋ ಬ್ಯಾಕ್ ಶೋಭಾ ,ಶೋಭಾ ಹಠಾವೋ ಬಿಜೆಪಿ ಬಚಾವೋ ಅಭಿಯಾನ ನಡೆಯುತ್ತಿದೆ. ಟಿಕೆಟ್ ನೀಡದಂತೆ ಕ್ಯಾಂಪೇನ್ ನಡೆಸಲಾಗಿದೆ. ಇದು ಬಿಜೆಪಿ ಹೈ ಕಮಾಂಡ್ ಕೋಪಕ್ಕೂ ಕಾರಣವಾಗಿದೆ. ಇದೆಲ್ಲದರ ನಡುವೆ ಗೋ ಬ್ಯಾಕ್ ಶೋಭಾ ಕರಂದ್ಲಾಜೆ ಅಭಿಯಾನ ವಿಚಾರ ಸಂಬಂಧ ಪೋಸ್ಟರ್ ಅಂಟಿಸಿದ್ದ ನಾಲ್ವರು ಯುವಕರ ವಿರುದ್ಧ ಈಐಖ ದಾಖಲಾಗಿದೆ. ಬಸವನಹಳ್ಳಿ ಪೊಲೀಸರಿಂದ ಪೋಸ್ಟರ್ ಸಂಬಂಧ ತನಿಖೆ ನಡೆಸುತ್ತಿದ್ದಾರೆ.

ಶೋಭಕ್ಕ ಎಲ್ಲಿದ್ದೀರ , ಶೋಭಕ್ಕ ಕಾಣೆ ಎಂದು ತರೀಕೆರೆಯಿಂದ ಚಿಕ್ಕಮಗಳೂರುವರೆಗೂ ರಾತ್ರೋರಾತ್ರಿ ಪೋಸ್ಟರ್ ಗಳನ್ನು ಅಂಟಿಸಿದ್ದ ನಾಲ್ವರು ಯುವಕರಾದ ಸಂಜು, ಸಂಜಯ್,




ವಿಷ್ಣು, ಚಂದ್ರಶೇಖರ್ ವಿರುದ್ಧ ಎಫ್ ಐಆರ್ ದಾಖಲಾಗಿದೆ. ಈ ಯುವಕರು ತರೀಕೆರೆ ಮೂಲದವರು. ತರೀಕೆರೆ ಪಟ್ಟಣದಿಂದ ಚಿಕ್ಕಮಗಳೂರು ನಗರದ ವರೆಗೂ ಪೋಸ್ಟರ್ ಅಂಟಿಸಿದ್ದರು. ನಗರ ಸಭೆ ಪೌರ ಕಾರ್ಮಿಕ ನೀಡಿದ ದೂರಿನ ಮೇರೆಗೆ ಎಫ್ ಐಆರ್ ದಾಖಲಾಗಿದೆ. ಇನ್ನು ಯುವಕರು ಹಣ ನೀಡಿ ಪೋಸ್ಟರ್ ಅಂಟಿಸಲು ಹೇಳಿದ್ರು, ಎಂದು ಹೇಳಿಕೆ ನೀಡಿದ್ದಾರೆ. ಹೀಗಾಗಿ ಬಸವನಹಳ್ಳಿ ಪೊಲೀಸರು ಪೋಸ್ಟರ್ ಸಂಬಂಧ ತನಿಖೆ ನಡೆಸುತ್ತಿದ್ದಾರೆ.

**ಗೋ ಬ್ಯಾಕ್ ಅಭಿಯಾನಕ್ಕೆ ಶೋಭಾ ಕರಂದ್ಲಾಜೆ ಗರಂ:** ಕಳೆದ ಚುನಾವಣೆಯಲ್ಲಿ ಗೋ ಬ್ಯಾಕ್ ಅಭಿಯಾನ ಮಾಡಿದ್ರು. ಇವತ್ತು ಅದನ್ನೇ ಮಾಡಲು ಹೊರಟಿದ್ದಾರೆ. ಕೆಲವರು ದುಡ್ಡಿನ ಮದದಿಂದ ಇಂತಹ ಕೆಲಸ ಮಾಡುತ್ತಿದ್ದಾರೆ. ಕೆಲವು ಗಂಡಸರಿಗೆ ಅಧಿಕಾರ ನಮ್ಮ ಬಳಿಯೇ ಇರಬೇಕು ಎಂಬ ಭಾವನೆ ಇರುತ್ತೆ. ದರ್ಪದಿಂದ ಇಂತಹ ಕೆಲಸವನ್ನ ಮಾಡಿಸುತ್ತಿದ್ದಾರೆ. ನಾನು ಯಡಿಯೂರಪ್ಪ, ಪ್ರಧಾನಿ ಮೋದಿ ಅವರ ಸಂಪುಟದಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೇನೆ. ಇದಕ್ಕೆಲ್ಲ ಉತ್ತರ ನಾನು ಕೊಡಲ್ಲ, ನಮ್ಮ ಹೈ ಕಮಾಂಡ್ ಕೊಡುತ್ತೆ ಎಂದು ಶೋಭಾ ಕರಂದ್ಲಾಜೆ ತಿರುಗೇಟು ನೀಡಿದ್ದಾರೆ.

ಎಲ್ಲವನ್ನೂ ಹೈ ಕಮಾಂಡ್ ಗಮನಿಸಿದೆ. ಸರಿಯಾದ ಉತ್ತರ ನನ್ನ ಹಿರಿಯರು ಕೊಡುತ್ತಾರೆ. ಪುಟ 2

# ನಗದು ಹಣದ ಹರಿವು ಬಹಳ ಇಳಿಕೆ

**ನವದೆಹಲಿ:** ವಹಿವಾಟಿನಲ್ಲಿರುವ ನಗದು ಹಣ ಅಥವಾ ಕರೆನ್ಸಿಯ ಪ್ರಮಾಣ ಕಳೆದ ಒಂದು ವರ್ಷದ ಅವಧಿಯಲ್ಲಿ ಗಮನಾರ್ಹವಾಗಿ ಇಳಿಕೆ ಆಗಿದೆ. ಆರ್ ಬಿಐ ನಿನ್ನೆ ಭಾನುವಾರ ಬಿಡುಗಡೆ ಮಾಡಿದ ಮಾಹಿತಿ ಪ್ರಕಾರ ಫೆಬ್ರುವರಿ 9ರಂದು ಅಂತ್ಯಗೊಂಡ ವಾರದಲ್ಲಿ ಚಲಾವಣೆಯಲ್ಲಿರುವ ಕರೆನ್ಸಿ ಪ್ರಮಾಣ ಶೇ. 3.7ಕ್ಕೆ ಇಳಿದಿದೆ. ಒಂದು ವರ್ಷದ ಹಿಂದಿನ ಇದೇ ವಾರದಲ್ಲಿ ಕರೆನ್ಸಿ ಸರ್ಕುಲೇಶನ್ ನಲ್ಲಿ ಇದ್ದದ್ದು ಶೇ 8.2ರಷ್ಟು. ಒಂದು ವರ್ಷದ ಅಂತರದಲ್ಲಿ ಬಹಳಷ್ಟು ಕರೆನ್ಸಿ ಚಲಾವಣೆ ಕಡಿಮೆ ಆಗಿದೆ. ಅಷ್ಟೇ ಅಲ್ಲ, ಜನವರಿಯಲ್ಲಿ ಕಮರ್ಷಿಯಲ್ ಬ್ಯಾಂಕುಗಳಲ್ಲಿ ಠೇವಣಿಗಳಾಗಿ ಇಡಲಾಗುತ್ತಿರುವ ಹಣದ ಮೊತ್ತ ಗಣನೀಯವಾಗಿ ಹೆಚ್ಚಾಗಿರುವುದು ತಿಳಿದು ಬಂದಿದೆ.

ಚಲಾವಣೆಯಲ್ಲಿರುವ ಕರೆನ್ಸಿಗಳ ಪ್ರಮಾಣ ಕಡಿಮೆ ಆಗಿರುವುದು ಮತ್ತು ವಾಣಿಜ್ಯ ಬ್ಯಾಂಕುಗಳಲ್ಲಿ ಠೇವಣಿಗಳ ಪ್ರಮಾಣ ಹೆಚ್ಚಾಗಿರುವುದು ಯಾಕಾಗಿರಬಹುದು ಎಂಬ ಕುತೂಹಲ ಇದೆ. ಕಳೆದ ವರ್ಷ 2023ರ ಮೇ 19ರಂದು ಆರ್ ಬಿಐ



2,000 ರೂ ಕರೆನ್ಸಿಯನ್ನು ಚಲಾವಣೆಯಿಂದ ಹಿಂಪಡೆದುಕೊಂಡಿತ್ತು. ಕಾಕತಾಳೀಯವಾಗಿಯೋ, ಅಥವಾ ಅದರ ಪರಿಣಾಮವಾಗಿಯೋ ಕರೆನ್ಸಿ ಚಲಾವಣೆ ಕಡಿಮೆ ಆಗಿದೆ.

ಇನ್ನು, ಆರ್ ಬಿಐ ಬಿಡುಗಡೆ ಮಾಡಿದ ದತ್ತಾಂಶದ ಪ್ರಕಾರ ರಿಸರ್ವ್ ಮನಿ ಅಥವಾ ಮೀಸಲು ಹಣ (ಆರ್ ಎಂ) ಶೇ. 5.8ಕ್ಕೆ ಇಳಿದಿದೆ. ಹಿಂದಿನ ವರ್ಷದ ಫೆಬ್ರುವರಿ 9ರಲ್ಲಿ ಈ ರಿಸರ್ವ್ ಹಣ ಶೇ. 11.2ರಷ್ಟು ಇತ್ತು. ಚಲಾವಣೆಯಲ್ಲಿರುವ ಕರೆನ್ಸಿ ಹಣದ ಮೊತ್ತ, ಆರ್ ಬಿಐನಲ್ಲಿ ಬ್ಯಾಂಕುಗಳು ಇರಿಸಿರುವ ಪುಟ 2

# ಮಂಗನ ಕಾಯಿಲೆಗೆ 2ನೇ ಬಲಿ



**ಕಾರವಾರ:** ಉತ್ತರ ಕನ್ನಡ ಜಿಲ್ಲೆಯಲ್ಲಿ ಮಂಗನ ಕಾಯಿಲೆಗೆ 2ನೇ ಬಲಿಯಾಗಿದೆ. ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಕೋರ್ಲಕೈ ಗ್ರಾಮದ 60 ವರ್ಷದ ವೃದ್ಧೆ ಮಂಗನ ಕಾಯಿಲೆಗೆ ಬಲಿಯಾಗಿದ್ದಾರೆ. 20 ದಿನದಿಂದ ಮಂಗನ ಕಾಯಿಲೆಯಿಂದ ಬಳಲುತ್ತಿದ್ದ ವೃದ್ಧೆ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಚಿಕಿತ್ಸೆ ಫಲಿಸದೇ ಕೊನೆಯುಸಿರೆಳೆದಿದ್ದಾರೆ. ಸಿದ್ದಾಪುರ ತಾಲೂಕಿನಲ್ಲಿ KFD ಪ್ರಕರಣಗಳ ಸಂಖ್ಯೆ 43ಕ್ಕೇರಿದೆ. ಪುಟ 2

## ಲೋಕಸಭಾ ಚುನಾವಣೆ: ಬಿಜೆಪಿ ಬಗ್ಗೆ ಅಚ್ಚರಿಯ ಕಾರ್ಣಿಕ ನುಡಿದ ಜೆಗಣೆಹಳ್ಳಿ

# ಮೈಲಾರಲಿಂಗೇಶ್ವರ ಸ್ವಾಮಿ

**ಚಿಕ್ಕಮಗಳೂರು:** ಲೋಕಸಭೆ ಚುನಾವಣೆಗೆ ಇನ್ನೇನು ಕೆಲವೇ ತಿಂಗಳು ಬಾಕಿ ಇದೆ ಎನ್ನುವಾಗಲೇ, ಮತ್ತೆ ಕೇಂದ್ರದಲ್ಲಿ ಬಿಜೆಪಿಯೇ ಅಧಿಕಾರದ ಗದ್ದುಗೆ ಹಿಡಿಯಲಿದೆ ಎಂಬರ್ಥದಲ್ಲಿ ಜೆಗಣೆಹಳ್ಳಿ ಮೈಲಾರಲಿಂಗೇಶ್ವರ ಸ್ವಾಮಿ ಕಾರ್ಣಿಕ ನುಡಿದಿದ್ದಾರೆ. ಜತೆಗೆ, ಮಳೆ-ಬೆಳೆ ಚೆನ್ನಾಗಿ ಆಗಲಿದೆ ಎಂಬ ಆಶಾವಾದದ ನುಡಿಯನ್ನೂ ಮೈಲಾರಲಿಂಗೇಶ್ವರ ಸ್ವಾಮಿ ಕಾರ್ಣಿಕ ನುಡಿಯಲ್ಲಿ ಹೇಳಲಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ಜೆಗಣೆಹಳ್ಳಿ ಮೈಲಾರಲಿಂಗೇಶ್ವರ ಸ್ವಾಮಿ ಕಾರ್ಣಿಕ ಈ ಭಾಗದಲ್ಲಿ ಬಹಳ ಪ್ರಸಿದ್ಧಿ ಪಡೆದಿದೆ.



'ಹುಟ್ಟಿದ ಕಮಲ ಆಕಾಶ ಮೆಟ್ಟಿತು, ಮಳೆ ಬೆಳೆ ಸಂಪಾಯಿತಲೇ ಪರಾಕ್' ಎಂದು ಮೈಲಾರಲಿಂಗೇಶ್ವರ ಸ್ವಾಮಿ ಕಾರ್ಣಿಕ ನುಡಿದಿದ್ದಾರೆ. ಈ ವರ್ಷ ಮಳೆ ಬೆಳೆ ಸಮೃದ್ಧವಾಗಿ ಆಗುತ್ತದೆ. ಮತ್ತೆ ಕಮಲ ಪಕ್ಷ ಅರಳುವುದು ನಿಶ್ಚಿತ ಎಂಬುದೇ ಇದರ ಅರ್ಥವೆಂದು ಭಕ್ತರು ವ್ಯಾಖ್ಯಾನಿಸಿದ್ದಾರೆ. ಕಾರ್ಣಿಕ ನುಡಿಗೆ ಸಾವಿರಾರು ಭಕ್ತರು ಸಾಕ್ಷಿಯಾದರು.

ಮಾರ್ಚ್ ಮೊದಲ ವಾರ ಲೋಕಸಭೆ ಚುನಾವಣೆ ದಿನಾಂಕ ಪ್ರಕಟವಾಗುವ ನಿರೀಕ್ಷೆ ಇದೆ. ಲೋಕಸಭೆ ಚುನಾವಣೆ ಸಿದ್ಧತೆ ಸಂಬಂಧ ಕೇಂದ್ರ ಚುನಾವಣಾ ಆಯೋಗ ಈಗಾಗಲೇ ರಾಜ್ಯ ಘಟಕಗಳಿಂದ ಮಾಹಿತಿ ಕೇಳಿದೆ. ಏಪ್ರಿಲ್ ತಿಂಗಳಲ್ಲಿ ಲೋಕಸಭೆ ಚುನಾವಣೆ ನಡೆಯುವ ಸಾಧ್ಯತೆ ಇದ್ದು, ಮೇ ಮೊದಲ ವಾರ ಅಥವಾ ಎರಡನೇ ವಾರ ಫಲಿತಾಂಶ ಪ್ರಕಟವಾಗಲಿದೆ.

## ವಾರಾಣಸಿಯ ಜ್ಞಾನವಾಪಿ ಮಸೀದಿಯಲ್ಲಿ ಪೂಜೆ

# ಮುಸ್ಲಿಮರಿಗೆ ಹಿನ್ನಡೆ



**ಅಲಹಾಬಾದ್:** ವಾರಾಣಸಿಯ ಜ್ಞಾನವಾಪಿ ಮಸೀದಿಯ ದಕ್ಷಿಣ ನೆಲಮಾಳಿಗೆಯಲ್ಲಿ ಪೂಜೆಗೆ ಅನುಮತಿ ನೀಡಿರುವ ವಿಚಾರದಲ್ಲಿ ಅಲಹಾಬಾದ್ ಹೈಕೋರ್ಟ್‌ನಲ್ಲಿ ಮುಸ್ಲಿಂ ಅರ್ಜಿದಾರರಿಗೆ ದೊಡ್ಡ ಹಿನ್ನಡೆಯಾಗಿದೆ. ಪೂಜೆಗೆ ಅನುಮತಿ ನೀಡಿರುವುದನ್ನು ಪ್ರಶ್ನಿಸಿ ಮುಸ್ಲಿಂ ಅರ್ಜಿದಾರರು ಸಲ್ಲಿಸಿರುವ ಅರ್ಜಿಯನ್ನು ಹೈಕೋರ್ಟ್ ತಿರಸ್ಕರಿಸಿದೆ. ಇದರೊಂದಿಗೆ ನೆಲಮಾಳಿಗೆಯಲ್ಲಿ ಹಿಂದೂಗಳ ಪೂಜೆ, ವ್ಯಾಸ ಜಿ ಆರಾಧನೆ ಮುಂದುವರಿಯಲಿದೆ. ನ್ಯಾಯಮೂರ್ತಿ ರೋಹಿತ್ ರಂಜನ್ ಅಗರ್ವಾಲ್ ಅವರಿದ್ದ ಏಕಸದಸ್ಯ ಪೀಠ ಈ ತೀರ್ಪು ನೀಡಿದೆ. ಪುಟ 2

# ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿ ಕೆಲಸಕ್ಕೆ ತೊಂದರೆ ಆಗುತ್ತಿದೆ: ಶಾಸಕ

**ಕಲಬುರಗಿ:** ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿ ಕೆಲಸಕ್ಕೆ ತೊಂದರೆ ಆಗುತ್ತಿದೆ ಎಂದು ಕಲಬುರಗಿ ದಕ್ಷಿಣ ಕ್ಷೇತ್ರದ ಕಾಂಗ್ರೆಸ್ ಶಾಸಕ ಅಲ್ಲಮಪ್ರಭು ಪಾಟೀಲ್ ಹೇಳಿದ್ದಾರೆ. ರವಿವಾರ (ಫೆಬ್ರವರಿ 25) ರಂದು ಕಲಬುರಗಿಯಲ್ಲಿ ನಡೆದ ಖಾಸಗಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗಳಿಗೆ 65 ಸಾವಿರ ಕೋಟಿ ಹಣ ಖರ್ಚಾಗುತ್ತಿದೆ. ಎಲ್ಲ ಹೆಣ್ಣು ಮಕ್ಕಳು ಸರ್ಕಾರಿ ಬಸ್ ನಲ್ಲಿ ಉಚಿತವಾಗಿ ಪ್ರಯಾಣಿಸುತ್ತಿದ್ದಾರೆ. ಉಚಿತ ಅಕ್ಕಿ, ತಲಾ ಎರಡು ಸಾವಿರ ಹಣ ಮಹಿಳೆಯರ ಖಾತೆ ಹಾಕುತ್ತಿದ್ದೇವೆ. ಇದರಿಂದ ಬಹಳಷ್ಟು ಖರ್ಚು ಆಗುತ್ತಿದೆ, ಇದರಿಂದ ಅಭಿವೃದ್ಧಿ ಕೆಲಸ ಆಗುತ್ತಿಲ್ಲ ಎಂದರು.

ಆದರೂ ನಿಮ್ಮ ನಿರೀಕ್ಷೆ ಹುಸಿಗೊಳಿಸದಂತೆ ಕೆಲಸ ಮಾಡುತ್ತಿದ್ದೇವೆ. ಐದು ವರ್ಷದಲ್ಲಿ ಎಲ್ಲ



ಅಭಿವೃದ್ಧಿ ಕೆಲಸಗಳನ್ನು ಮಾಡುತ್ತೇವೆ. ಈ ವರ್ಷ ನಮ್ಮ ಕ್ಷೇತ್ರಕ್ಕೆ 9 ಕೋಟಿ ರೂ. ಅನುದಾನ ಬಂದಿದೆ. 38 ಹಳ್ಳಿ ಮತ್ತು 23 ವಾರ್ಡ್‌ಗಳಿಗೆ ಹಂಚಬೇಕು. ಒಂದೊಂದು ಹಳ್ಳಿ, ವಾರ್ಡ್ ಗೆ 20 ಲಕ್ಷ ರೂ. ಬರುತ್ತೆ. ಈಗಾಗಲೆ ಕಾಮಕಾರಿಗಳಿಗೆ ಟೆಂಡರ್ ಕರೆಯಾಲಿಗೆ. ಕಾಮಗಾರಿಗಳಿಗೆ ಹಣ ನೀಡಬೇಕು. ನಾಲ್ಕು ಕೋಟಿ ರೂ. ನಲ್ಲಿ ಚರಂಡಿ ಕಾಮಗಾರಿ ನಡೆಯುತ್ತಿದೆ.

ಅಧಿಕಾರಕ್ಕೆ ಬಂದ ಕೆಲವೆ ದಿನಗಳಲ್ಲಿ ಕಾಂಗ್ರೆಸ್ ಸರ್ಕಾರ ಗ್ಯಾರೆಂಟಿ ಯೋಜನೆಗಳನ್ನು ಜಾರಿಗೊಳಿಸಿತ್ತು. ಈ ಗ್ಯಾರೆಂಟಿ ಯೋಜನೆಗಳನ್ನು ಜಾರಿಗೊಳಿಸಿದ ಕೆಲವೆ ದಿನಗಳಲ್ಲಿ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅಚ್ಚರಿ ಹೇಳಿಕೆಯೊಂದು ನೀಡಿದ್ದರು. ಅದು '' ಈ ವರ್ಷ (2023) ಅಭಿವೃದ್ಧಿ ಯೋಜನೆಗಳಿಗೆ ಅನುದಾನ ನೀಡಲು ಸಾಧ್ಯವಿಲ್ಲ ಎಂದು ಹೇಳಿದ್ದರು. ಪುಟ 2

# ನಿಷೇಧವಿದ್ದರೂ ಅಧಿಕಾರಿಯ ಶಿಫಾರಸ್ಸು ಬಳಸಿ ಚಾರಣಕ್ಕೆ ಹೋಗಿದ್ದ ಡಿವೈಎಸ್‌ಪಿ ಸಂಬಂಧಿ ಪತ್ತೆ

**ಮಂಗಳೂರು:** ಚಾರ್ಮಾಡಿ ಅರಣ್ಯದಲ್ಲಿ ನಾಪತ್ತೆಯಾಗಿದ್ದ ಡಿವೈಎಸ್‌ಪಿ ಸಂಬಂಧಿ ಬಾಳೂರು ಪೊಲೀಸ್ ಠಾಣಾ ವ್ಯಾಪ್ತಿಯ ಬಲ್ಲಾಳರಾಯದುರ್ಗ ಬಳಿ ಪತ್ತೆಯಾಗಿದ್ದಾರೆ. ಯುವಕ ಧನುಷ್ ನಾಪತ್ತೆಯಾಗಿದ್ದ ಡಿವೈಎಸ್ ಪಿ ಸಂಬಂಧಿ. ಡಿವೈಎಸ್ ಪಿ ಶಿಫಾರಸ್ಸು ಬಳಸಿ ಬೆಂಗಳೂರು ಮೂಲದ 10 ಜನ ವಿದ್ಯಾರ್ಥಿಗಳು ರವಿವಾರ (ಫೆ.25) ರ ಸಂಜೆ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಚಾರ್ಮಾಡಿ ಅರಣ್ಯದಲ್ಲಿ ಚಾರಣಕ್ಕೆ ತೆರಳಿದ್ದರು. ಈ ತಂಡದಲ್ಲಿದ್ದ ಡಿವೈಎಸ್ ಪಿ ಸಂಬಂಧಿ ಧನುಷ್ ನಾಪತ್ತೆಯಾಗಿದ್ದನು. ಧನುಷ್ ದಟ್ಟಾರಣ್ಯದ ಮಧ್ಯೆ 700 ಅಡಿ ಕೆಳಗಿದ್ದನು. ಧನುಷ್ ನಾಪತ್ತೆಯಾಗುತ್ತಿದ್ದಂತೆ ಈ ತಂಡದಲ್ಲಿದ್ದ ಓರ್ವ ಯುವಕ ಧರ್ಮಸ್ಥಳ ಮತ್ತು ಬೆಳ್ತಂಗಡಿ ಪೊಲೀಸರಿಗೆ ಮಾಹಿತಿ ನೀಡಿದ್ದಾನೆ.

ಬಳಿಕ ಧರ್ಮಸ್ಥಳ ಮತ್ತು ಬೆಳ್ತಂಗಡಿ ಪೊಲೀಸರು ಮತ್ತು ಅರಣ್ಯಾಧಿಕಾರಿಗಳು ಜಂಟಿಯಾಗಿ ಹುಡುಕಾಟ ನಡೆಸಿದ್ದಾರೆ. ಈ ವೇಳೆ ನಾಪತ್ತೆಯಾದ ಯುವಕರ ಮೊಬೈಲ್ ನೆಟ್ ವರ್ಕ್ ಪತ್ತೆಯಾಗಿ ಮತ್ತೆ ಸಂಪರ್ಕ ಕಡಿತವಾಗಿತ್ತು.



ಕೊನೆಗೆ ಧನುಷ್ ಮಧ್ಯರಾತ್ರಿ ಪತ್ತೆಯಾಗಿದ್ದಾನೆ.

**ಟ್ರೆಕ್ಕಿಂಗ್ ಗೆ ತಾತ್ಕಾಲಿಕ ಬ್ರೇಕ್ ಹಾಕಿದ ರಾಜ್ಯ ಸರ್ಕಾರ:** ಹೊಸ ಪ್ರಮಾಣಿತ ಕಾರ್ಯ ವಿಧಾನ ಜಾರಿಯಾಗುವವರೆಗೂ ಚಾರಣ ಕ್ಕೆ ತಾತ್ಕಾಲಿಕವಾಗಿ ನಿರ್ಬಂಧಿಸಿದೆ. ರಾಜ್ಯದ ಯುವಜನರಲ್ಲಿ ಇತ್ತೀಚೆಗೆ ಅರಣ್ಯವ್ಯಾಪ್ತಿಯ ಗಿರಿ ಶಿಖರಗಳಲ್ಲಿ ಚಾರಣ ಮಾಡುವ ಹವ್ಯಾಸ ಅಧಿಕವಾಗಿದ್ದು, ಇದು ವಾರಾಂತ್ಯದಲ್ಲಿ ಜನದಟ್ಟಣೆಗೆ ಕಾರಣವಾಗಿದೆ. ಪುಟ 2

# ವಿನೂತನ ಯಂತ್ರೋಪಕರಣಗಳ ಸಹಾಯದಿಂದ ಶಸ್ತ್ರಚಿಕಿತ್ಸೆ ಅಗತ್ಯ



**ತುಮಕೂರು:** ಇತ್ತೀಚಿನ ದಿನಗಳಲ್ಲಿ ಉತ್ತಮ ಗುಣಮಟ್ಟದ ಉತ್ತಮ ವಿನೂತನ ಯಂತ್ರೋಪಕರಣಗಳ ಸಹಾಯದಿಂದ ಶಸ್ತ್ರಚಿಕಿತ್ಸೆ ಸರಳ ಹಾಗೂ ಸುಲಲಿತವಾಗಿದೆ. ನೇತ್ರ ಶಾಸ್ತ್ರ ಚಿಕಿತ್ಸಾ ವಿಧಾನದ ಬಗ್ಗೆ ನಿರಂತರ ವೈದ್ಯಕೀಯ ಕಾರ್ಯಾಗಾರವು ಸಾರ್ವಜನಿಕ ಆರೋಗ್ಯ ಮತ್ತು ಆರೋಗ್ಯ ಶಿಕ್ಷಣದ ಬಗ್ಗೆ ಮಹತ್ವ ನೀಡಬೇಕು ಹಾಗೂ ತುಮಕೂರು ನೇತ್ರವಿಜ್ಞಾನ ಸೊಸೈಟಿಯ ಅಸೋಸಿಯೇಷನ್ ವೆಬ್‌ಸೈಟ್‌ನ್ನು ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್‌ರವರು ಉದ್ಘಾಟಿಸಿದರು.

ನಗರದ ಶಿರಾ ರಸ್ತೆಯ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ನೇತ್ರ ತಜ್ಞ ವಿಭಾಗದ ವತಿಯಿಂದ ತುಮಕೂರು ನೇತ್ರವಿಜ್ಞಾನ ಸೊಸೈಟಿಯ ಅಸೋಸಿಯೇಷನ್ ಸಂಯುಕ್ತಾಶ್ರಯದಲ್ಲಿ ಕರ್ನಾಟಕ ನೇತ್ರ ವಿಜ್ಞಾನ ಸಂಘದ ವತಿಯಿಂದ ''ನೇತ್ರ ಕಲ್ಪ-2024 ಕತ್ತಲಿನಿಂದ ಬೆಳಕಿನೆಡೆಗೆ'' ಬಗ್ಗೆ ಸಿ.ಎಂ.ಇ. ಕಾರ್ಯಾಗಾರವನ್ನು ಫೆ.25 ರಂದು ಭಾನುವಾರ ಬೆಳಿಗ್ಗೆ 8:30 ರಿಂದ 5 ಗಂಟೆಯವರೆಗೆ ಶ್ರೀದೇವಿ ವೈದ್ಯಕೀಯ ಆಸ್ಪತ್ರೆಯ ಆಡಿಟೋರಿಯಂ ಸಭಾಂಗಣದಲ್ಲಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವು ಭರತನಾಟ್ಯ ಮತ್ತು ಜ್ಯೋತಿ ಬೆಳಗಿಸುವ ಮುಖಾಂತರ ಕಾರ್ಯಾಗಾರಕ್ಕೆ ಚಾಲನೆ ನೀಡಲಾಗಿತ್ತು.

ಕಾರ್ಯಕ್ರಮದ ಮುಖ್ಯಅತಿಥಿಗಳಾಗಿ ಭಾಗವಹಿಸಿದ್ದ ಬೆಂಗಳೂರಿನ ಕರ್ನಾಟಕ ನೇತ್ರ ಸಂಸ್ಥೆಯ ಅಧ್ಯಕ್ಷರಾದ ಡಾ.ಕೃಷ್ಣ ಪ್ರಸಾದ್ ಕೂಡ್ಲುರವರು ಟಿ.ಓ.ಎಸ್. ಲೋಗೋ ಅನಾವರಣ ಮಾಡಿ ಹಾಗೂ ಸನ್ಮಾನ ಸ್ವೀಕರಿಸಿ ಮಾತನಾಡುತ್ತಾ ಅವರು ಕೆ.ಓ.ಎಸ್. ಸಂಸ್ಥೆಯು ರಾಷ್ಟ್ರದಲ್ಲೇ ಅತಿ ಹೆಚ್ಚು ದೊಡ್ಡ ಸಂಸ್ಥೆಯಾಗಿ ಬೆಳೆದಿದ್ದು ಹಾಗೂ ಅತಿ ಹೆಚ್ಚು ಸದಸ್ಯರನ್ನು ಹೊಂದಿರುವ ಏಕೈಕ ಸಂಸ್ಥೆಯಾಗಿದೆ. ಈ ಸಂಸ್ಥೆಯಲ್ಲಿ 3300 ಸದಸ್ಯರನ್ನು ಒಳಗೊಂಡಿದ್ದು, ಅದೇ ರೀತಿ ತುಮಕೂರಿನ ತುಮಕೂರು ನೇತ್ರವಿಜ್ಞಾನ ಸೊಸೈಟಿಯ ಅಸೋಸಿಯೇಷನ್ ಸಂಸ್ಥೆಯು ಅತಿ ಉತ್ಸಾಹಕತೆಯಿಂದ ಪಾಲ್ಗೊಂಡು ಈ ಕಾರ್ಯಾಗಾರವನ್ನು ಯಶಸ್ವಿಗೊಳಿಸಿದರು.

ಬೆಂಗಳೂರಿನ ಮಿಂಟೋ ಪ್ರಾದೇಶಿಕ ನೇತ್ರ ವಿಜ್ಞಾನ ಸಂಸ್ಥೆಯ ನಿರ್ದೇಶಕರಾದ ಡಾ.ಜಿ.ನಾಗರಾಜು, ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ವೈದ್ಯಕೀಯ ನಿರ್ದೇಶಕರಾದ ಡಾ. ರಮಣ್ ಎಂ. ಹುಲಿನಾಯ್ಕರ್, ಶ್ರೀದೇವಿ ಆಸ್ಪತ್ರೆಯ ನೇತ್ರ ತಜ್ಞ ವಿಭಾಗದ ಮುಖ್ಯಸ್ಥರಾದ ಡಾ.ಡಿ.ರವಿಪ್ರಕಾಶ್, ಸಂಘಟನಾ ಅಧ್ಯಕ್ಷರಾದ ಡಾ. ಸಂಜಯ್ ಎಂ, ಸಂಘಟನಾ ಕಾರ್ಯದರ್ಶಿಯಾಗಿ ಡಾ.ದಿನೇಶ್ ಕುಮಾರ್, ಖಜಾಂಚಿಯಾಗಿ ಡಾ.ಎಂ.ಜಿ.ಗಂಗಾಧರ್, ವೈಜ್ಞಾನಿಕ ಸಮಿತಿಯಲ್ಲಿ ಡಾ.ಎಸ್.ಮಂಜುನಾಥ್, ಡಾ.ಜಿ.ಭಾನುಶ್ರೀ, ಡಾ.ಕೆ,ಆರ್,ಮಂಜುನಾಥ್, ಸಂಘಟನಾ ಸಮಿತಿಯಲ್ಲಿ ಡಾ.ಲಾವಣ್ಯ ರಮಣ್ ಹುಲಿನಾಯ್ಕರ್, ಡಾ.ರವೀಂದ್ರ, ಡಾ.ಮಹಾದೇವಪ್ಪ, ಡಾ.ಕೆ.ಪಿ.ಕಲ್ಲೇಶ್ವರ್, ಡಾ.ಜಿ.ಎಸ್ .ಪ್ರವೀಣ್ ಕುಮಾರ್, ಡಾ.ಸಂದೀಪ್ ಶೆಣೈ ಹಾಗೂ ತುಮಕೂರು ನೇತ್ರ ವಿಜ್ಞಾನ ಸಂಘದ ಸದಸ್ಯರುಗಳು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

## ದಲಿತರ ಹಣ ಅನ್ಯ ಬಳಕೆಗೆ ಖಂಡನೀಯ

**ಮೈಸೂರು:** ಸಂವಿಧಾನ ಜಾಗೃತಿ ಜಾಥಾ ಆಂದೋಲನ ರಾಜ್ಯ ಸರ್ಕಾರ ಹಮ್ಮಿಕೊಂಡಿರುವುದು ಸ್ವಾಗತಾರ್ಹ. ಆದರೆ ಇದೇ ವೇಳೆ ದಲಿತರಿಗಾಗಿ ಬಜೆಟ್‌ನಲ್ಲಿ ಮೀಸಲಿಟ್ಟಿದ್ದ ಹಣವನ್ನು ಗ್ಯಾರೆಂಟಿ ಯೋಜನೆಗಳಿಗೆ ಬಳಸಿಕೊಂಡಿರುವುದು ಖಂಡನಾರ್ಹ ಎಂದು ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ರಾಜ್ಯ ಪ್ರಧಾನ ಕಾರ್ಯದರ್ಶಿ ಜೆ.ಸಿ. ವೆಂಕಟರಮಣಪ್ಪ ತಿಳಿಸಿದರು. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗಾರರೊಡನೆ ಮಾತನಾಡಿ, 2023-24 ರ ಸಾಲಿನಲ್ಲಿ ದಲಿತರಿಗೆ ಬಳಸಬೇಕಾಗಿದ್ದ ಹಣದಲ್ಲಿನ 11 ಸಾವಿರ ಕೋಟಿ ರೂ.ಗಳನ್ನು ಗ್ಯಾರೆಂಟಿ ಯೋಜನೆಗಳಿಗೆ ಬಳಸಲಾಗಿದೆ. ಹೀಗಾಗಿ ಇದನ್ನು ಕೂಡಲೇ ಹಿಂದಿರುಗಿಸಬೇಕು. ಇನ್ನು, ನೂತನ ಬಜೆಟ್‌ನಲ್ಲಿ ಮೀಸಲಿರಿಸಿರುವ ಹಣವನ್ನೂ ಗ್ಯಾರೆಂಟಿ ಯೋಜನೆಗಳಿಗೆ ಬಳಸುವ ಶಂಕೆಯಿದೆ. ಆದ್ದರಿಂದ ಈ ರೀತಿ ಮಾಡುವುದಿಲ್ಲ ಎಂದು ಅಧಿಕೃತವಾಗಿ ಘೋಷಿಸಬೇಕು,. ಜೊತೆಗೆ ಈ ಹಿಂದೆ ಬಳಸಿಕೊಂಡ ಹಣವನ್ನು ಹಂತ ಹಂತವಾಗಿ ಸಮಾಜ ಕಲ್ಯಾಣ ಇಲಾಖೆಗೆ ವಾಪಸು ಮಾಡಬೇಕು. ಇಲ್ಲದಿದ್ದಲ್ಲಿ ಉಗ್ರ ಹೋರಾಟ ನಡೆಸಲಾಗುವುದೆಂದರು. ಇನ್ನಿತರ ಪದಾಧಿಕಾರಿಗಳಾದ ಕಂದೇಗಾಲ ಶಿವಣ್ಣ, ಅನುಷಾ, ಸುರೇಶ್, ಶಿವಮಾದು, ಶಿವನಂಜು ಇದ್ದರು.



## ಕವನ ಸಂಕಲನ ಬಿಡುಗಡೆ

**ಮೈಸೂರು:** ಕರ್ನಾಟಕ ಸರ್ಕಾರ ಶಾಲಾ ಶಿಕ್ಷಣ (ಪದವಿಪೂರ್ವ) ಇಲಾಖೆ ಮೈಸೂರುಜಿಲ್ಲಾ ಪದವಿಪೂರ್ವಕಾಲೇಜುಕನ್ನಡಉಪನ್ಯಾಸಕರ ವೇದಿಕೆ ವತಿಯಿಂದಫೆ.24ರ ಶನಿವಾರ ಮಧ್ಯಾಹ್ನ 3-30ಕ್ಕೆ ನಂಜುಮಳಿಗೆ ಹತ್ತಿರವಿರುವ ಗೋಪಾಲಸ್ವಾಮಿ ಶಿಶು ಶಿಕ್ಷಣ ಸಂಸ್ಥೆಯಆವರಣದಲ್ಲಿ ಕವಿ ಡಾ.ಸಂತೋಷ್‌ಚೊಕ್ಕಾಡಿಅವರ''ಅರ್ಥವಿದೆಯೆ ವಿದಾಯಕ್ಕೆ'' ಕವನ ಸಂಕಲನ ಬಿಡುಗಡೆ ಮಾಡಲಾಯಿತು. ಕೃತಿ ಬಿಡುಗಡೆ ಮಾಡಿದ ಕವಿ ವಿಮರ್ಶಕಖ್ಯಾತಅಂಕಣಕಾರರಾದ ಬಾಲಸುಬ್ರಮಣ್ಯಕಂಜರ್ಪಣೆರವರು ಮಾತನಾಡುತ್ತಕವಿಯಾದವನಿಗೆ ಸಹೃದಯರ ಮನಸ್ಸನ್ನುಗೆಲ್ಲುವಶಕ್ತಿಯಿರಬೇಕು. ಹಳೆಯ ತಲೆಮಾರಿನ ಸಾಹಿತಿಗಳನ್ನು ನೆನಪಿಸಿಕೊಳ್ಳಬೇಕು.ಹಿಂದೆ ಪಂಪ, ಜನ್ನ, ರನ್ನ ರವರುಗಳು ಯಾವುದೇ ವೃತ್ತಿಯನ್ನು ಅವಲಂಭಿಸಿರಲಿಲ್ಲ. ಅವರಜೀವನದಅನುಭವ ಹಾಗೂ ನಿತ್ಯದ ಬದುಕಿನಒಡನಾಟವನ್ನೆ ಸಾಹಿತ್ಯವನ್ನಾಗಿಸಿದರು ಎಂದರು.ಕಲಿಯುವುದಕ್ಕೆ ವಯಸ್ಸು ಮುಖ್ಯವಲ್ಲ. ಶ್ರದ್ಧೆ ಮತ್ತು ತಾಳ್ಮೆ ಆಸಕ್ತಿ ಇದ್ದಲ್ಲಿ ಬರವಣಿಗೆಯನ್ನು ಮುಂದುವರಿಸಬಹುದು.''ಇತ್ತೀಚಿನ ದಿನಗಳಲ್ಲಿ ಬರೆಯುವವರ ಸಂಖ್ಯೆ ಜಾಸ್ತಿಯಾಗಿದೆ. ಆದರೆಓದುವವರ ಸಂಖ್ಯೆ ದಿನದಿಂದ ದಿನಕ್ಕೆಕ್ಷೀಣಿಸುತ್ತಿದೆ.ಇದು ಬೇಸರದ ಸಂಗತಿಯೆಂದು ವಿಷಾದ ವ್ಯಕ್ತಪಡಿಸಿ'' ವಿದ್ಯಾರ್ಥಿಗಳನ್ನು ತಯಾರು ಮಾಡುವ ಹೊಣೆಗಾರಿಕೆ ಬೋಧಕರ ಮೇಲಿದೆ.ಆದ್ದರಿಂದ ಶಿಕ್ಷಕವರ್ಗ ಸದಾ ಕ್ರಿಯಾಶೀಲರಾಗಿ ಓದಿನಲ್ಲಿತೊಡಗಬೇಕೆಂದರು. ಅರ್ಥ ವಿದೆಯೆ ವಿದಾಯಕ್ಕೆ ಪುಸ್ತಕ ಕುರಿತು ಮಾತನಾಡಿದ ಮಹಾರಾಜಕಾಲೇಜಿನಪ್ರಾಧ್ಯಾಪಕರಾದಡಾ.ವಿಜಯಲಕ್ಷ್ಮಿರವರು ಮಾತನಾಡಿ ಸಂತೋಷ್‌ಚೊಕ್ಕಾಡಿರವರ ಕವಿತೆಗಳಲ್ಲಿ ಪ್ರಕೃತಿಯನ್ನುಗಾಢವಾಗಿ ಪ್ರೀತಿಸಿದ ಅನುಭವವನ್ನುಕಾಣಬಹುದುಜೊತೆಗೆ ಬುದ್ಧನ ನಗು, ಮಾತು, ಧ್ಯಾನದ ಸ್ಥಿತಿಗಳನ್ನು ಕವನದಲ್ಲಿ ವಾಸ್ತವ ಪ್ರಪಂಚಕ್ಕೆ ಹತ್ತಿರವಾಗುವಂತೆ ಸರಳ ವಾಕ್ಯಗಳಲ್ಲಿ ಭಾವಸಂವೇದನೆಯೊಂದಿಗೆ ವ್ಯಕ್ತಪಡಿಸಿದ್ದಾರೆಂದು ಅಭಿಪ್ರಾಯಿಸಿದರು.ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನುವಹಿಸಿ ವಿಮರ್ಶಕ ವಿಕ್ರಂಚದುರಂಗರವರು ಮಾತನಾಡಿದರು. ಗೋಪಾಲಸ್ವಾಮಿ ಶಿಕ್ಷಣ ಸಂಸ್ಥೆಯಕರೆಸ್ಪಾಂಡೆಂಟ್ ಎನ್.ಆರ್.ಮಂಜುನಾಥ್, ಕವಿ ಡಾ.ಸಂತೋಷ್‌ಚೊಕ್ಕಾಡಿ, ಕನ್ನಡಉಪನ್ಯಾಸಕ ವೇದಿಕೆಯಅಧ್ಯಕ್ಷರಾದಡಾ.ನೀ.ಗೂ.ರಮೇಶ್, ಪ್ರಾಂಶುಪಾಲರಾದ ಬಾಲಸುಬ್ರಮಣ್ಯಂ, ಡಾ.ಚಿಕ್ಕಮಾದು, ಕೆಂಪಯ್ಯ, ವಿಮರ್ಶಕರೇಣುಕಾರಾಧ್ಯ, ಡಾ.ಮಾಲತಿ, ಮಹೇಶ್ ಉಪಸ್ಥಿತರಿದ್ದರು.ಕಾರ್ಯಕ್ರಮಕ್ಕೆಉಪನ್ಯಾಸಕಿ ಡಾ.ಕೆ. ಮಾಲತಿ ಸ್ವಾಗತಿಸಿದರೆ, ಮಹೇಶ್ ವಂದಿಸಿದರು ವೇದಿಕೆ ಕಾರ್ಯಕ್ರಮದ ನಂತರ ಕವಿ ಡಾ.ಸಂತೋಷ್‌ಚೊಕ್ಕಾಡಿರವರ ಕವನಗಳ ವಾಚನ ಹಾಗೂ ಗಾಯನಕಾರ್ಯಕ್ರಮಅತ್ಯಂತ ಯಶಸ್ವಿಯಾಗಿ ನೆರವೇರಿತು.



### ಹಿರಿಯ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್ ಅಸಮಾಧಾನ

## ಸಾಹಿತಿಗಳಿಂದಲೂ ರಾಜಕಾರಣ ದುರಂತ

**ಮೈಸೂರು:** ಸಾಹಿತಿಗಳಲ್ಲಿ ಅನೇಕರು ರಾಜಕಾರಣಿ ಆಗಿಬಿಟ್ಟಿದ್ದಾರೆ. ವೃತ್ತಿಪರ ರಾಜಕಾರಣಿಗಳನ್ನು ಮೀರಿಸುವಂತೆ ಸಾಹಿತಿಗಳು ರಾಜಕಾರಣ ಮಾಡುತ್ತಿರುವುದು ದುರಂತದ ಸಂಗತಿ ಎಂದು ಹಿರಿಯ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್ ವಿಷಾದಿಸಿದರು.

ಮೈಸೂರು ವಿವಿ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ತಾರಾ ಪ್ರಕಾಶನ ಮತ್ತು ಶಫರ್ಡ್ ಇಂಡಿಯಾ ಇಂಟರ್ ನ್ಯಾಷನಲ್ ಸಹಯೋಗದೊಂದಿಗೆ ಶನಿವಾರ ಆಯೋಜಿಸಿದ್ದ ಡಾ.ಎನ್. ವಾಸಯ್ಯ ರಚಿಸಿರುವ 'ಹಳ್ಳಿ ಹಕ್ಕಿ ಅಡಗೂರು ವಿಶ್ವನಾಥ್ ಅವರ ಸಾಹಿತ್ಯ ಮತ್ತು ರಾಜಕಾರಣ' ಕೃತಿಯನ್ನು ಅವರು ಬಿಡುಗಡೆಗೊಳಿಸಿ ಮಾತನಾಡಿದರು.

ರಾಜಕೀಯ ಕ್ಷೇತ್ರ ಪವಿತ್ರವಾದ ಕ್ಷೇತ್ರವಲ್ಲ. ಪ್ರಸ್ತುತ ಅಂತೂ ರಾಜಕೀಯ ಕ್ಷೇತ್ರವೂ ಸಂಪೂರ್ಣ ಕಲುಷಿತಗೊಂಡಿದೆ. ನಾನಾ ಕಾರಣಗಳಿಂದ ದೇಶ ಹೊತ್ತಿ ಉರಿಯುತ್ತಿದೆ. ರೆಸಾರ್ಟ್ ರಾಜಕೀಯ ಈಗಿನ ವಿದ್ಯಾಮಾನವಾಗಿದೆ ಎಂದು ಅವರು ತಿಳಿಸಿದರು.

ಎಚ್. ವಿಶ್ವನಾಥ್ ಅವರ ಸಾಹಿತಿ ಆಗಿದ್ದು, ದಾರಿತಪ್ಪಿ ರಾಜಕೀಯಕ್ಕೆ ಬಂದಿದ್ದಾರೆ ಅನಿಸುತ್ತದೆ. ಅವರು ಕೇವಲ ರಾಜಕಾರಣಿ ಮಾತ್ರವಲ್ಲ ಸ್ಟೇಟ್ಸ್ ಮ್ಯಾನ್. ವಾಸ್ತವಾಗಿ ವಿಶ್ವನಾಥ್ ಅವರು ಸಾಹಿತಿ ರಾಜಕಾರಣಿ. ಮೂಲಭೂತವಾಗಿ ಸಾಹಿತಿ ಆಗಿದ್ದು, 7 ಕೃತಿಗಳನ್ನು ರಚಿಸಿದ್ದಾರೆ. ಅವು ನಮನ ಯೋಗ್ಯ ಆಗಿರದಿದ್ದರೂ ಮನನ ಯೋಗ್ಯ ಕೃತಿಗಳಾಗಿವೆ ಎಂದು ಅವರು ಹೇಳಿದರು.

ಈ ಕೃತಿ ವಿಶ್ವನಾಥ್ ಅವರ ಬದುಕಿನ ಸಂಕೇತವಾಗಿದೆ. ವಿಶ್ವನಾಥ್ ಹಳ್ಳಿಯೊ ಅಥವಾ ನಗರದ್ದೊ ಹಕ್ಕಿ ಆಗಿರಬಹುದು. ಆದರೆ, ಇದು ಹಕ್ಕಿ ಮಾತ್ರವಾಗಿದ್ದು, ಹದ್ದಲ್ಲ, ರಣಹದ್ದಲ್ಲ. ಗುಬ್ಬಚ್ಚಿಯಂತಹ ಹಕ್ಕಿ ಆಗಿದೆ. ಸದ್ದಿಲ್ಲದೇ ಕೆಲಸ ಮಾಡುವ ಚೇತನವಾಗಿರುವ ವಿಶ್ವನಾಥ್ ಅವರು ಅಭಿವೃದ್ಧಿಪರ ರಾಜಕಾರಣಿಎಂದು ಅವರು ಬಣ್ಣಿಸಿದರು.



ಅಧ್ಯಕ್ಷತೆ ವಹಿಸಿದ್ದ ಸಾಹಿತಿ ಡಾ. ಬಂಜಗೆರೆ ಜಯಪ್ರಕಾಶ್‌ಮಾತನಾಡಿ,2000ನೇಇಸವಿಯನಂತರ ರಾಜಕೀಯ ನಿರೂಪಣೆಯನ್ನು ಧರ್ಮೋರಾಜಕಾರಣ ಸಂಘಟನೆಗಳು ಮಾಡತೊಡಗಿವೆ. ಆದ್ಯತೆಗಳಲ್ಲದ ವಿಷಯಗಳನ್ನು ವೈಭವೀಕರಿಸುತ್ತಾ, ಗತಕಾಲದಲ್ಲೇ ಮೈಮರೆಯುವಂತಹ ಸ್ಥಿತಿ ನಿರ್ಮಾಣವಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಮಿಲಿಯನ್ ಗಟ್ಟಲೆ ದುಡ್ಡು ಇರುವವರು, ಕಪ್ಪು ಹಣ ಉಳ್ಳವರು ರಾಜಕೀಯ ಪ್ರವೇಶ ಮಾಡಿದ್ದಾರೆ. ಹಣ ಬಲ- ತೋಳ್ಬಲಗಳ ಮಧ್ಯದಲ್ಲಿ ಪ್ರಜಾಪ್ರಭುತ್ವದ ಸೌಂದರ್ಯತೆ ಅವನತಿ ಹೊಂದುತ್ತಿದೆ. ಎದುರಿಗೆ ಇರುವವರನ್ನು ಟೀಕೆ ಮಾಡುವಾಗ ಜನನಾಯಕರು ಯೋಗ್ಯವಲ್ಲದ ಭಾಷೆಯನ್ನು ಬಳಸುತ್ತಿದ್ದಾರೆ. ಇದರಿಂದ ನಮ್ಮ ದೇಶದ ರಾಜಕೀಯ ಸಂಸ್ಕೃತಿ ನಾಶವಾಗುವತ್ತ ಹೊರಟಿದೆ ಎಂದು ಅವರು ವಿಷಾದಿಸಿದರು.

ದೇಶದಲ್ಲಿ ಮಾದರಿ ರಾಜಕಾರಣ ಮಾಡಿದಂತಹ ವ್ಯಕ್ತಿಗಳನ್ನು ಕುರಿತು ಅಧ್ಯಯನಾತ್ಮಕ ಪುಸ್ತಕಗಳು ಪ್ರಕಟವಾಗಬೇಕು. ಇದರಿಂದ ಮುಂದಿನ ಪೀಳಿಗೆಯ ರಾಜಕಾರಣಿಗಳಿಗೆ ರಾಜಕೀಯ ಕಲಿಕೆಗೆ ಹಾಗೂ ಶಿಕ್ಷಣಕ್ಕೆ ಅನುಕೂಲವಾಗುತ್ತದೆ ಎಂದು ಅವರು ತಿಳಿಸಿದರು.

ಅಡಗೂರು ಎಚ್.ವಿಶ್ವನಾಥ್ ಮಾತನಾಡಿ,15ನೇ ಶತಮಾನದಲ್ಲಿಯೇ ಕುಮಾರವ್ಯಾಸನು ರಾಜಕಾರಣವನ್ನು ರಣಹದ್ದುಗಳಿಗೆ ಹೋಲಿಕೆ ಮಾಡಿದ್ದನು. ಈಗಲೂ ಆತನ ಹೇಳಿಕೆ ಪ್ರಸ್ತುತವಾಗಿದೆ. ನಮ್ಮ ದೇಶದ ಇಂದಿನ ಸ್ಥಿತಿಯು ಹೀಗೆ ಮುಂದುವರೆದರೇ ಚುನಾವಣೆ, ಪ್ರಜಾಪ್ರಭುತ್ವ ಮರೆಯಾಗಿ ಸರ್ವಾಧಿಕಾರಿ ಆಡಳಿತ ಬರಬಹುದು. ಪಕ್ಷ ರಾಜಕಾರಣ ಮರೆಯಾಗುತ್ತಿದೆ. ವ್ಯಕ್ತಿ-ವ್ಯಕ್ತಿಗತ ರಾಜಕಾರಣ ವೈಭವೀಕರಿಸುತ್ತಿದೆ ಎಂದು ಮಾರ್ಮಿಕವಾಗಿ ನುಡಿದರು.

ಹಿರಿಯ ಪತ್ರಕರ್ತ ಬಿ.ಎಂ. ಹನೀಫ್ ಮಾತನಾಡಿ, ದೃಷ್ಟಿಕೋನರಹಿತವಾಗುತ್ತಿರುವ ಇಂದಿನ ರಾಜಕಾರಣದಲ್ಲಿ ವಿಶ್ವನಾಥ್ ಅವರು ಸಚಿವರಾಗಿದ್ದ ಸಮಯದಲ್ಲಿ ಸಮಾಜಕ್ಕೆ ಬೇಕಾಗಿದ್ದ ಮೌಲ್ಯಯುತ ಯೋಜನೆಗಳನ್ನು ಜಾರಿಗೆ ತಂದರು ಎಂದು ನೆನಪು ಮಾಡಿದರು.

ಕೃತಿ ಕುರಿತು ಸಾಹಿತಿ ಶುಭದಾ ಪ್ರಸಾದ್ ಮಾತನಾಡಿದರು. ಕೃತಿಯ ಕರ್ತೃ ಡಾ.ಎನ್. ವಾಸಯ್ಯ ಇದ್ದರು. ಕನ್ನಡ ಸಾಹಿತ್ಯ ಪರಿಷತ್ತು ಮಾಜಿ ಜಿಲ್ಲಾಧ್ಯಕ್ಷ ಎಂ. ಚಂದ್ರಶೇಖರ್ ಸ್ವಾಗತಿಸಿದರು.

## ನಾಳೆ ಗ್ರಾಮೀಣ ಬಂದ್‌ಗೆ ಕರೆ

**ಮೈಸೂರು:** ಈ ಬಾರಿಯ ಡಬ್ಲ್ಯು?ಯಟಿಒ ಸಮಾವೇಶದಲ್ಲಿ ಅದರ ಒಪ್ಪಂದದಿಂದ ಭಾರತ ಹೊರ ಬರಬೇಕೆಂದು ಆಗ್ರಹಿಸಿ ಇದೇ ಫೆ. 27 ರಂದು ಗ್ರಾಮೀಣ ಬಂದ್‌ಗೆ ಕರೆ ನೀಡಲಾಗಿದೆ ಎಂದು ಸಾಮೂಹಿಕ ನಾಯಕತ್ವದ ರೈತ ಸಂಘ ತಿಳಿಸಿದೆ. ಈ ಕುರಿತು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮುಖಂಡ ವಿದ್ಯಾಸಾಗರ ರಾಮೇಗೌಡ ಮಾತನಾಡಿ, ಡಬ್ಲ್ಯು?ಯಟಿಒ ಒಪ್ಪಂದದಿಂದಾಗಿ ಮುಂದುವರಿದ ರಾಷ್ಟ್ರಗಳು ತಮ್ಮಲ್ಲಿನ ಕೃಷಿ ಉತ್ಪನ್ನ ತಂದು ಸುರಿಯುತ್ತವೆ. ಇದರಿಂದಾಗಿ ಇಲ್ಲಿನ ರೈತರಿಗೆ ಅನಾನುಕೂಲವಾಗಲಿದೆ. ಜೊತೆಗೆ ಕಡಿಮೆ ದರದಲ್ಲಿ ಪಡಿತರ ನೀಡುವ ವ್ಯವಸ್ಥೆಗೂ ಅಡ್ಡಿಯುಂಟಾಗುತ್ತದೆ. ಹೀಗಾಗಿ ಅದರ ಒಪ್ಪಂದದಿಂದ ಹೊರಬರಬೇಕು ಎಂದು ಗ್ರಾಮೀಣ ಬಂದ್‌ಗೆ ಕರೆ ನೀಡಲಾಗಿದೆ. ಈ ವೇಳೆ ಗ್ರಾಮೀಣ ಪ್ರದೇಶದಲ್ಲಿ ಹೈನುಗಾರಿಕೆ ಹೊರತು ಪಡಿಸಿ ಎಲ್ಲ ವಾಣಿಜ್ಯ ಚಟುವಟಿಕೆ ಬಂದ್ ಆಗಲಿದೆ ಎಂದು ವಿವರಿಸಿದರು. ಬಳಿಕ, ಕೃಷಿ ಉತ್ಪನ್ನಗಳ ಕನಿಷ್ಠ ಬೆಂಬಲ ಬೆಲೆ ಶಾಸನಬದ್ಧವಾಗಬೇಕು, ದೆಹಲಿ ಚಲೋ ರೈತರ ಮೇಲಿನ ದೌರ್ಜನ್ಯ ನಿಲ್ಲಿಸಬೇಕು, ಪ್ರಾಕೃತಿಕ ವಿಕೋಪದ ಕಾರಣ ರೈತರು ಸಾಲ ಮರುಪಾವತಿ ಕಷ್ಟವಾಗಿರುವ ಕಾರಣ ರಾಜ್ಯದ ಎಲ್ಲಾ ರೈತರ ಸಾಲ ಮನ್ನಾ ಮಾಡಬೇಕು, ರಾಜ್ಯ ಮಟ್ಟದಲ್ಲಿ ಎಂಎಸ್‌ಪಿ ಕಾಯ್ದೆ ಜಾರಿಗೆ ತರಬೇಕು, ಕೇಂದ್ರ, ಸರ್ಕಾರ ಘೋಷಣೆ ಮಾಡಿರುವ ಬೆಂಬಲ ಬೆಲೆಗೆ ರಾಜ್ಯ ಸರ್ಕಾರ ಬೋನಸ್ ರೂಪದಲ್ಲಿ ಸಹಾಯಧನ ಸೇರಿಸಿ ಬೆಂಬಲ ಬೆಲೆ ಘೋಷಿಸಬೇಕೆಂದು ಒತ್ತಾಯಿಸಿದರು. ಇನ್ನಿತರ ಪದಾಧಿಕಾರಿಗಳಾದ ಮಂಜುಕಿರಣ್, ಸತೀಶ್‌ರಾವ್, ಇಮ್ಮಾವು ರಘು, ಶ್ವೇತಾ ಹಾಜರಿದ್ದರು.



## ಆರ್ಯವೈಶ್ಯ ಶ್ರೀ ಕನ್ನಿಕಾ ಪರಮೇಶ್ವರಿ ಸಹಕಾರ ಸಂಘಕ್ಕೆ ಆಯ್ಕೆ

**ಹುಳಿಯಾರು:** ಹುಳಿಯಾರಿನ ಶ್ರೀಆರ್ಯವೈಶ್ಯ ಕನ್ಯಕಾಪರಮೇಶ್ವರಿ ಸಹಕಾರ ಸಂಘದ ಆಡಳಿತ ಮಂಡಳಿಯ (2024 ರಿಂದ 2029) ಐದು ವರ್ಷಗಳ ಅವಧಿಯ ನಿರ್ದೇಶಕರ ಸ್ಥಾನಕ್ಕೆ ಶನಿವಾರದಂದು ಹುಳಿಯಾರಿನ ಗಾಂಧಿಪೇಟೆಯಲ್ಲಿರುವ ವಾಸವಿ ಕಲ್ಯಾಣ ಮಂಟಪದಲ್ಲಿ ಚುನಾವಣೆ ನಡೆಯಿತು.

ಶೃತಿ ಬಿ.ಜಿ. ಪೂಜಿತ ದರ್ಶನ್ ಹೆಚ್.ಯು, ಲೋಕನಾಥ್.ಟಿ.ಎನ್, ಚೇತನ್. ಎನ್, ಹೇಮಂತ ಕುಮಾರ್ ಟಿ.ವಿ, ಕಾರ್ತಿಕ್ ಮಿನ್ನಾ ಎನ್, ಅಜಯ್ ಟಿ.ಕೆ, ಗುರುನಾಥ್ ಟಿ.ಎನ್, ಅರವಿಂದ.ಎಂ.ಎ ಅವರು ಆಯ್ಕೆಯಾಗಿದ್ದಾರೆ.

ಒಟ್ಟು 13 ಸ್ಥಾನಗಳ ಪೈಕಿ 4 ಸ್ಥಾನಗಳು ಖಾಲಿ ಇದ್ದು 9 ಸ್ಥಾನಗಳಿಗೆ ಚುನಾವಣೆ ನಡೆದಿದೆ. 9 ನಿರ್ದೇಶಕರುಗಳ ಸ್ಥಾನಕ್ಕೆ 18 ಅಭ್ಯರ್ಥಿಗಳು ಸ್ಪರ್ಧಿಸಿದ್ದರು. 7 ಸಾಮಾನ್ಯ ಸ್ಥಾನಕ್ಕೆ ಒಟ್ಟು 15 ಜನ ಅಭ್ಯರ್ಥಿಗಳು ಸ್ಪರ್ಧಿಸಿದ್ದು, 2 ಮಹಿಳಾ ಮೀಸಲು ಸ್ಥಾನಕ್ಕೆ ಒಟ್ಟು 3 ಮಹಿಳಾ ಅಭ್ಯರ್ಥಿಗಳು ಸ್ಪರ್ಧಿಸಿದ್ದರು.



ಹುಳಿಯಾರಿನ ಶ್ರೀ ಆರ್ಯವೈಶ್ಯ ಕನ್ಯಕಾಪರಮೇಶ್ವರಿ ಸಹಕಾರ ಸಂಘದ ಆಡಳಿತ ಮಂಡಳಿಯ ನೂತನ ನಿರ್ದೇಶಕರುಗಳು.

## ಶ್ರೀನಿವಾಸ್ ಪ್ರಸಾದ್ ಅವರಿಂದ ಮುಖ್ಯಮಂತ್ರಿ ಟೀಕೆ ಹಾಸ್ಯಾಸ್ಪದ

**ಮೈಸೂರು:** ಸಂಸದ ವಿ. ಶ್ರೀನಿವಾಸಪ್ರಸಾದ್ ಅವರು ಸಿಎಂ ಸಿದ್ದರಾಮಯ್ಯ ಅವರ ವಿರುದ್ಧ ಹಾಸ್ಯಾಸ್ಪದವಾದ ಟೀಕೆ ಮಾಡುತ್ತಿದ್ದಾರೆ ಎಂದು ನಗರ ಜಿಲ್ಲಾ ಕಾಂಗ್ರೆಸ್ ವಕ್ತಾರ ಎಸ್. ರಾಜೇಶ್ ವಾಗ್ದಾಳಿ ನಡೆಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಪ್ರಧಾನಿ ಮೋದಿ ಹಿಟ್ಲರ್ ಸಂಸ್ಕೃತಿಯ ಸರ್ವಾದಿಕಾರಿಯಾಗಿದ್ದಾರೆ. ಸಿದ್ದರಾಮಯ್ಯ ಅವರು ಸಮಾಜವಾದಿ ಅಂಬೇಡ್ಕರ್ ಅನುಯಾಯಿಯಾಗಿದ್ದಾರೆ. ಈ ವ್ಯತ್ಯಾಸವನ್ನು ಪ್ರಸಾದ್ ರವರು ಅರಿಯಬೇಕಾಗಿದೆ ಎಂದರು.

ಅಲ್ಲದೆ, ಮುಂದಿನ ಲೋಕಸಭಾ ಚುನಾವಣೆಯಲ್ಲಿ ತಮ್ಮ ಅಳಿಯನಿಗೆ ಬಿಜೆಪಿಯ ಟಿಕೇಟ್ ದೊರಕಿಸಿಕೊಡಲು ಓಲೈಸುವ ಕೆಲಸ ಶ್ರೀನಿವಾಸ ಪ್ರಸಾದ್ ಮಾಡುತ್ತಿದ್ದಾರೆ. ಇದೇ ವೇಳೆ ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು ಜನಪರ ರೈತಪರ ಪದವೀಧರರ, ಮಹಿಳೆಯರ ಪರವಾಗಿದೆ. ಹೀಗಾಗಿ ರಾಜ್ಯದಲ್ಲಿ ಬಿಜೆಪಿ ಅಭ್ಯರ್ಥಿಗಳು ಸೋಲುತ್ತಾರೆಂದರು.

ಇನ್ನಿ, 2023-24ನೇ ಸಾಲಿನ ಬಜೆಟ್‌ನಲ್ಲಿ ಚಾಮರಾಜನಗರ ಕ್ಷೇತ್ರಕ್ಕೆ ಕೇಂದ್ರದಿಂದ ಆದ ಯೋಜನೆಗಳೇನು, ಮಹದೇಶ್ವರ ಬೆಟ್ಟ, ಬಿಳಿಗಿರಿ ರಂಗನಬೆಟ್ಟ, ಹಿಮವದ್ ಗೋಪಾಲಸ್ವಾಮಿ ಬೆಟ್ಟ, ದಕ್ಷಿಣ ಕಾಶಿ ನಂಜನಗೂಡಿಗೆ ಎಷ್ಟು ಹಣ ಬಿಡುಗಡೆ ಮಾಡಿಸಲಾಗಿದೆ ಎಂಬ ಬಗ್ಗೆ ಪ್ರಸಾದ್ ತಿಳಿಸಲೆಂದು ತಾಕೀತು ಮಾಡಿದರು. ಬಳಿಕ, ದೆಹಲಿಯಲ್ಲಿ ನಮ್ಮ ತೆರಿಗೆ ನಮ್ಮ ಹಕ್ಕು ಎಂದು ಕಾಂಗ್ರೆಸ್ ನಡೆಸಿದ ಪ್ರತಿಭಟನೆಯನ್ನು ಪ್ರಸಾದ್ ವಿರೋಧಿಸಿರುವುದು ಕರ್ನಾಟಕ ಜನತೆಗೆ ಮಾಡಿದ ದ್ರೋಹವಾಗಿದೆ ಎಂದು ದೂರಿದರು. ಕಾಂಗ್ರೆಸ್ ಮುಖಂಡರಾದ ಸತ್ಯನಾರಾಯಣ, ರಹೀಮ್ ಪಾಷ, ಖಿಮ್ರಾನ್ ಪಾಷ, ಇನ್ನಿತರರು ಇದ್ದರು.





ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿಜಯಪುರ ಪಟ್ಟಣದಲ್ಲಿ ಅನಾದಿಕಾಲದಿಂದಲೂ ನೆಲೆಸಿರುವ ಶ್ರೀ ಧರ್ಮರಾಯಸ್ವಾಮಿ ದ್ರೌಪತಮ್ಮ ದೇವಾಲಯದಲ್ಲಿ 17 ನೆಯ ವರ್ಷದ ಭಾರತ ಹುಣ್ಣಿಮೆ ಪ್ರಯುಕ್ತ ಅಮ್ಮನವರಿಗೆ ವಿಶೇಷ ಪೂಜಾ ಕೈಂಕರ್ಯಗಳೊಂದಿಗೆ ವಿಶೇಷ ಅಲಂಕಾರ ಏರ್ಪಡಿಸಲಾಗಿತ್ತು.

## ದಾಸಪ್ಪ ಸಂಸ್ಥೆ ಭವನ ಉದ್ಘಾಟನೆ

**ಮೈಸೂರು:** ನಗರದ ಗಂಗೋತ್ರಿ, ಬಡಾವಣೆಯ ಮಾರುತಿ ದೇವಸ್ಥಾನದ ರಸ್ತೆಯಲ್ಲಿ ಎಚ್.ಸಿ. ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ ವತಿಯಿಂದ ಮೈಸೂರಿನ ಗಾಂಧಿವಾದಿ ಎಂದೇ ಖ್ಯಾತರಾಗಿದ್ದ ಎಚ್.ಸಿ. ದಾಸಪ್ಪ ಅವರ ಹೆಸರಿನಲ್ಲಿ ನಿರ್ಮಿಸಲಿರುವ ಭವನದ ಕಾಮಗಾರಿಗೆ ಇದೇ ಫೆ. 26 ರ ಸೋಮವಾರ ಬೆಳಗ್ಗೆ 9.30ಕ್ಕೆ ಭೂಮಿಪೂಜೆ ನಡೆಯಲಿದೆ ಎಂದು ಮಾಜಿ ಮೇಯರ್ ಪಿ. ವಿಶ್ವನಾಥ್ ತಿಳಿಸಿದರು. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಇದು ಸುಮಾರು ಹತ್ತು ಕೋಟಿ ರೂ., ವೆಚ್ಚದ ಯೋಜನೆಯಾಗಿದೆ. ಇದಕ್ಕಾಗಿ ದಾಸಪ್ಪನವರ ಅಭಿಮಾನಿಗಳು ಹಾಗೂ ಇನ್ನಿತರರು ದೇಣಿಗೆ ನೀಡಿದ್ದಾರೆ. ಉನ್ನತ ಶಿಕ್ಷಣ ಮತ್ತು ತರಬೇತಿ, ಪ್ರಜಾಪ್ರಭುತ್ವದ ಮೌಲ್ಯಗಳು ಮತ್ತು ಮಾನವ ಹಕ್ಕುಗಳ ರಕ್ಷಣೆ, ದುರ್ಬಲ ವರ್ಗಗಳ ಉನ್ನತೀಕರಣ, ಸಾರ್ವಜನಿಕ ಹಿತಾಸಕ್ತಿಗಳ ಉತ್ತೇಜನ ಸಂಸ್ಥೆಯ ಮೂಲ ಉದ್ದೇಶವಾಗಿದೆ. ಭೂಮಿಪೂಜೆ ಕಾರ್ಯಕ್ರಮದ ವೇಳೆ ಶಿವರಾತ್ರಿ, ದೇಶಿಕೇಂದ್ರ ಸ್ವಾಮೀಜಿ, ಡಾ. ನಿರ್ಮಲಾನಂದನಾಥ ಸ್ವಾಮೀಜಿ, ಶಾಸಕ ಹರಿಶ್‌ಗೌಡ, ಪಾಲಿಕೆ ಸದಸ್ಯರಾದ ವೇದಾವತಿ ಉಪಸ್ಥಿತರಿರುವರೆಂದರು. ಕೆಂಪರಾಜೇಗೌಡ, ಸರೋಜಾ ತುಳಸಿದಾಸಪ್ಪ, ಬೂಕನಕೆರೆ ವಿಜೇಂದ್ರ, ಹಾಜರಿದ್ದರು.



## ಹಳೆಯ ವಿದ್ಯಾರ್ಥಿಗಳ ಪುನರ್ಮಿಲನ, ಗುರುವಂದನ ಸಮಾರಂಭ

**ಬೆಂಗಳೂರು:** ಶಿವಾಜಿನಗರದ ಸರಕಾರಿ ಬಾಲಕ ಮತ್ತು ಬಾಲಕಿಯರ ಪ್ರಾಥಮಿಕ ಶಾಲೆ ಹಾಗೂ ಸರ್ಕಾರಿ ತೆಲುಗು ಪ್ರಾಥಮಿಕ ಶಾಲೆಯ 1981 ರಿಂದ 1985 ನೇ ಸಾಲಿನ ವಿದ್ಯಾರ್ಥಿಗಳಿಂದ ಹಳೆಯ ಶಾಲಾ ಸ್ನೇಹಿತರ ಪುನರ್ಮಿಲನ ಹಾಗೂ ಗುರುವಂದನ ಸಮಾರಂಭವನ್ನು ಖಾಸಗಿ ಹೋಟೆಲ್ ಒಂದರಲ್ಲಿ ಆಯೋಜಿಸಲಾಗಿತ್ತು. ಈ ವೇಳೆ ಸರ್ಕಾರಿ ತೆಲುಗು ಪ್ರಾಥಮಿಕ ಶಾಲೆ ಶಿಕ್ಷಕರಾದ ಕೆ ಎಸ್ ವಸಂತ ಕುಮಾರಿ ಹಾಗೂ ಸರಕಾರಿ ಬಾಲಕ ಮತ್ತು ಬಾಲಕಿಯರ ಪ್ರಾಥಮಿಕ ಶಾಲೆಯ ಶಿಕ್ಷಕರಾದ ಎಸ್ ಪ್ರಮೀಳಾ ರವರನ್ನು ಹಳೆಯ ವಿದ್ಯಾರ್ಥಿಗಳು ಸನ್ಮಾನಿಸಿ ಗೌರವಿಸಿದರು. ಕಾರ್ಯಕ್ರಮದಲ್ಲಿ ಹಳೆಯ ವಿದ್ಯಾರ್ಥಿಗಳು ಮಾತನಾಡುತ್ತಾ ಈ ಸುಂದರ ಶಾಲೆಗೆ ನಾವು ವಿದಾಯ ಹೇಳಿ ಮೂವತ್ತು ವರ್ಷಗಳಾಯಿತು. ಆದರೆ, ಕತ್ತಲಿನಿಂದ ಬೆಳಕಿನೆಡೆಗೆ, ಜ್ಞಾನದಿಂದ ಅಜ್ಞಾನದೆಡೆಗೆ ನಮ್ಮನ್ನು ನಡೆಸಿದ ಗುರುಗಳನ್ನು ನಾವ್ಯಾರೂ ಮರೆತಿಲ್ಲ. ಮಾತು ಕಲಿಸಿದ, ಬರಹ ತಿದ್ದಿದ, ಬುದ್ಧಿ ಹೇಳಿದ, ವ್ಯಕ್ತಿತ್ವ ರೂಪಿಸಿದ ನೀವೆಲ್ಲಾ ನಮ್ಮ ಜೀವನದ ಪ್ರತೀ ಹೆಜ್ಜೆಯನ್ನೂ ಪ್ರಭಾವಿಸಿದ್ದೀರಿ. ಒಂದಕ್ಷರ ಕಲಿಸಿದವರೂ ಕೂಡ ಗುರುವಿನ ಸಮಾನ ಎನ್ನುತ್ತಾರೆ. ಅಂದ ಮೇಲೆ, ಅಳುತ್ತಾ, ಹಿಂಜರಿಯುತ್ತಾ ಪ್ರಾಥಮಿಕ ಶಾಲೆಯ ಮೆಟ್ಟಿಲು ಹತ್ತಿದ ಕ್ಷಣದಿಂದ ಹಿಡಿದು, ಹದಿಹರೆಯದ ಗರಿಗೆದರಿದ ಕನಸುಗಳೊಂದಿಗೆ ಹತ್ತನೇ ತರಗತಿಯ ಹೊಸ್ತಿಲ ದಾಟುವವರೆಗೂ, ವರುಷಗಳ ಕಾಲ ನಮ್ಮ ಕೈ ಹಿಡಿದು ನಡೆಸಿದ ನೀವೆಲ್ಲಾ ಮಹಾ ಗುರುಗಳು. ನಮ್ಮ ತುಂಟಾಟ ಸಹಿಸಿದ, ದಾರಿ ತೋರಿದ, ನಮ್ಮ ಭವಿಷ್ಯವನ್ನು ಬೆಳಗಲು ಶ್ರಮಿಸಿದ ನಿಮಗೆಲ್ಲಾ ಹೃದಯ ತುಂಬಿದ, ಭಕ್ತಿಪೂರ್ವಕ ನಮನಗಳನ್ನು ಸಲ್ಲಿಸಿದರು ಹಾಗೂ ಈ ಅದ್ಭುತ ಕಾರ್ಯಕ್ರಮವನ್ನು ಆಯೋಜಿಸಲು ಶ್ರಮಪಟ್ಟ ವಿ.ರವಣಮ್ಮ ಮತ್ತು ಜಿ.ಎಚ್.ಶ್ರೀನಿವಾಸುಲು ಎಸ್. ಕೆ.ನಾಗಲು. ಎಸ್ ಎನ್ ಲಕ್ಷ್ಮಣ್ ರವರನ್ನು ಶ್ಲಾಘಿಸಿದರು.

## ಅಭಿನಂದನೆ ಸಲ್ಲಿಕೆ

**ವಿಜಯಪುರ:** ಶನಿವಾರದಂದು ಯಲ್ಲಮ್ಮ ತಾಯಿ ದೇವಾಲಯಲ್ಲಿ ವಿಜಯಪುರ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ನೂತನವಾಗಿ ನಿರ್ದೇಶಕರಾಗಿ ಆಯ್ಕೆಯಾದ ಕೆ.ವಿ.ಮುನಿರಾಜ್ ಕೆ.ವೆಂಕಟೇಶ್ ಕೆ.ನಾಗರಾಜ್ ಎಂ.ಕೆ.ಅನಿಲ್ ಕುಮಾರ್, ಲಕ್ಷ್ಮೀ ನಾಗರಾಜ್‌ರವರನ್ನು ಯಲ್ಲಮ್ಮ ತಾಯಿ ದೇವಾಲಯ ಅಧ್ಯಕ್ಷರಾದ ಎಂ.ಚಿನ್ನಯ್ಯ ರವರು ಸನ್ಮಾನಿಸಿ, ಗೌರವಿಸಿದರು. ಈ ಕಾರ್ಯಕ್ರಮದಲ್ಲಿ ಕುಂಬಳಹಳ್ಳಿ ಅಶ್ವಥ್,ಮಂಜುನಾಥ್, ಕೆ.ರಮೇಶ್ (ಮಟನ್) ಜೆ.ಆರ್. ಮುನಿವೀರಣ್ಣ ಜೆ ಟಿ.ವಿ.ನಾರಾಯಣಸ್ವಾಮಿ, ಹೂವಿನ ತೋಟದ ಎಂ.ನಾಗರಾಜು,(ಎಲೆಕ್ಟ್ರಿಕ್) ಡಾ.ಎಂ.ಚಂದ್ರಕಾಂತ್ ಮತ್ತು ಡಾ.ಪುಷ್ಪ, ಎನ್.ಸಿ.ಮುನಿವೆಂಕಟರಮಣಪ್ಪ, ಹಾಗೂ ದೇವಾಲಯ ಕಾರ್ಯಕಾರಿ ಸಮಿತಿಯ ಸದಸ್ಯರು ಕುಲಸ್ಥರು ಮುಖಂಡರು ಉಪಸ್ಥಿತರಿದ್ದರು.



## ಶೌರ್ಯಕ್ಕೆ ಹೆಸರಾದ ಛತ್ರಪತಿ ಶಿವಾಜಿ



**ವಿಜಯಪುರ:** ಧೈರ್ಯ ಮತ್ತು ಶೌರ್ಯಕ್ಕೆ ಹೆಸರಾದ ಶ್ರೇಷ್ಠ ನಾಯಕ ಛತ್ರಪತಿ ಶಿವಾಜಿಯವರು ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಶಿವಾಜಿಯವರ ಸಾಹಸಗಾಥೆ ಒಂದು ಪ್ರೇರಣೆಯಾಗಿತ್ತು ಎಂದು ವಿಶ್ವ ವಿಜೇತ ಸ್ವಾಮಿ ವಿವೇಕಾನಂದ ಬಳಗದ ಮುಖ್ಯಸ್ಥ ಲಕ್ಷ್ಮಣ್ ಹೇಳಿದರು.

ಪಟ್ಟಣದ ಅಂಕತಟ್ಟಿ ನಂಜುಂಡಪ್ಪ ವೃತ್ತದ ಬಳಿ ವಿಶ್ವ ಹಿಂದೂ ಪರಿಷತ್ ಹಾಗೂ ಬಜರಂಗ ದಳದ ವತಿಯಿಂದ ಆಯೋಜಿದ್ದ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಕಾರ್ಯಕ್ರಮದಲ್ಲಿ ಅವರ ಪುತ್ಥಳಿಗೆ ಪುಷ್ಪನಮನ ಸಲ್ಲಿಸಿ ಮಾತನಾಡಿದರು. ಯುವ ಸಮೂಹವು ದುಶ್ಚಟಗಳಿಗೆ ಒಳಗಾಗದೇ, ಇಂತಹ ಮಹಾನ್ ವ್ಯಕ್ತಿಗಳ ಜಯಂತಿಗಳು ಫೋಟೋಗೆ ಸೀಮಿತವಾಗದೆ. ಪ್ರತಿನಿತ್ಯವು ಜಯಂತೋತ್ಸವವಾಗಲಿ ಎಂದರು.

ಭಾರತ ದೇಶವನ್ನು ಗುಲಾಮಗಿರಿಗೆ ಒಡ್ಡುವ ಸಂದರ್ಭದಲ್ಲಿ ಪ್ರಬಲ ತಡೆ ಒಡ್ಡಿ ನಮ್ಮ ಸಂಸ್ಕೃತಿ, ಪರಂಪರೆಯನ್ನು ಉಳಿಸಿ, ಮರುಸ್ಥಾಪಿಸಿದವರು ಛತ್ರಪತಿ ಶಿವಾಜಿ ಮಹಾರಾಜರಾಗಿದ್ದರು ಎಂದರು.

ಹಿಂದೂ ಸಮಾಜದ ಮೇಲೆ ನಡೆದ ದಾಳಿಯನ್ನು ತಡೆಗಟ್ಟುವಲ್ಲಿ ಯಶಸ್ವಿಯಾದರು. ಅವರು ಚರಿತ್ರೆ ಮಾತ್ರ ಬದಲಾಯಿಸಲಿಲ್ಲ. ಹೊಸ ಚರಿತ್ರೆಯನ್ನು ರಚಿಸಿದರು. ಚಾರಿತ್ರ್ಯವಂತ ಸಮಾಜದ ನಿರ್ಮಾಣಕ್ಕೆ ಶ್ರಮಿಸಿದ ಅವರು ಪ್ರಜೆಗಳನ್ನು ಸುಭಿಕ್ಷವಾಗಿಟ್ಟಿದ್ದರು. ಅಪ್ರತಿಮ ದೇಶಭಕ್ತನ, ಜೀವನಚರಿತ್ರೆಯನ್ನು ಸ್ಮರಿಸಬೇಕು. ಶಿವಾಜಿಯವರ ಕುಲಕ್ಕೆ ಸೇರಿದ ಕ್ಷತ್ರಿಯರು ಅವರ ಜಯಂತಿ ಆಚರಿಸಿರುವುದು ಶ್ಲಾಘನೀಯ ಎಂದರು.

ಪುರಸಭಾ ಮಾಜಿ ಸದಸ್ಯ ಆರ್.ಸಿ.ಮಂಜುನಾಥ್ ಮಾತನಾಡಿ, ರಾಷ್ಟ್ರವನ್ನು ಪರಕೀಯರ ಆಡಳಿತದಿಂದ ಮುಕ್ತಗೊಳಿಸಿ ರಕ್ಷಿಸುವಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಕೊಡುಗೆ ಅಪಾರವಾದದ್ದಾಗಿದೆ. ಇಂತಹ ಮಹಾನ್ ವ್ಯಕ್ತಿಯು ಯಾವುದೇ ಒಂದು ಜನಾಂಗಕ್ಕೆ ಮಾತ್ರ ಸೀಮಿತಗೊಳ್ಳದೆ, ರಾಷ್ಟ್ರನಾಯಕರಾಗಿ ಧರ್ಮ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸಿ, ಅವರ ತ್ಯಾಗ, ಬಲಿದಾನದ ಪರಿಣಾಮವಾಗಿ ಇಂದು ಸಮಾಜದಲ್ಲಿ ಜನರು ಶಾಂತಿ, ನೆಮ್ಮದಿಯಿಂದ ಜೀವನ ಸಾಗಿಸಲು ಸಾಧ್ಯವಾಗಿದೆ ಎಂದರು. ಪುರಸಭಾ ಅಧ್ಯಕ್ಷರಾದವಿಮಲ ಬಸವರಾಜ್, ಉಪಾಧ್ಯಕ್ಷ ಕೇಶವಪ್ಪ, ಮುಖಂಡರಾದ ಎಸ್,ಆರ್, ಎಸ್, ಬಸವರಾಜ್, ಕನಕರಾಜ್, ಭಗವನ್ ರಾಮು, ರವಿಕುಮಾರ್, ಪ್ರಭು, ಉಮೇಶ್, ಮುನಿವೀರಣ್ಣ, ಬಾಬು, ಚಂದನ್, ಮೌನಿ, ವಿಶ್ವನಾಥ, ವಿಶ್ವ ಹಿಂದೂ ಪರಿಷದ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರವಿ, ಬಜರಂಗದಳ ಜಿಲ್ಲಾ ಸಹ ಸಂಚಾಲಕ ಕೃಷ್ಣಮೂರ್ತಿ, ವಿಶ್ವ ಹಿಂದೂ ಪರಿಷತ್ ತಾಲೂಕು ಅಧ್ಯಕ್ಷ ರಮೇಶ್ ಬಾಬು, ತಾಲೂಕು ಪ್ರಧಾನ ಕಾರ್ಯದರ್ಶಿ ಮಹೇಶ್ ಬಾಬು, ತಾಲೂಕು ಬಜರಂಗದಳ ಸಂಚಾಲಕ ಶಿವಾಜಿ ಮಣಿ, ಸಹ ಸಂಚಾಲಕ ನವೀನ್, ಬಜರಂಗದಳ ಪದಾಧಿಕಾರಿಗಳಾದ ಬಲರಾಮ್, ಅಕ್ಷಯ್, ಮುನಿ ಕೃಷ್ಣ, ನರಸಿಂಹ, ದರ್ಶನ, ನಿರಂಜನ್, ರಾಹುಲ್, ಗೌತಮ್,ರವಿ ಇದ್ದರು.

## ವೆಂಕಟಯ್ಯನಛತ್ರದ ವಿಜ್ಞಾನ ಪ್ರಯೋಗಾಲಯಕ್ಕೆ ಸಾಮಾಗ್ರಿಗಳು ವಿತರಣೆ

**ಚಾಮರಾಜನಗರ:** ರೋಟರಿ ಸಂಸ್ಥೆ, ರೋಟರಿ ಸಿಲ್ಕ್ ಸಿಟಿ ವತಿಯಿಂದ ತಾಲೂಕಿನ ವೆಂಕಟಯ್ಯನಛತ್ರದ ಸರ್ಕಾರಿ ಪ್ರೌಢಶಾಲಾ ವಿಜ್ಞಾನ ಪ್ರಯೋಗಾಲಯಕ್ಕೆ ಸಾಮಾಗ್ರಿಗಳು, ಸ್ಮಾರ್ಟ್ ಬೋರ್ಡ್, ಕುಡಿಯುವ ನೀರಿನ ಘಟಕ, ಕ್ರೀಡಾ ಸಾಮಾಗ್ರಿಗಳನ್ನು ರೋಟರಿ ಜಿಲ್ಲಾ ಗವರ್ನರ್ ಹೆಚ್.ಆರ್. ಕೇಶವ ವಿತರಿಸಿದರು. ಈ ಸಂದರ್ಭದಲ್ಲಿ ರೋಟರಿ ಸಂಸ್ಥೆ ಸಹಾಯಕ ಗವರ್ನರ್ ಆರ್.ಪ್ರಕಾಶ್, ವಲಯ ಪ್ರತಿನಿಧಿ ಚೈತನ್ಯ ಹೆಗ್ಗಡೆ, ಅಧ್ಯಕ್ಷ ಸಿ.ಎನ್.ಚಂದ್ರಪ್ರಭಜೈನ್, ಕಾರ್ಯದರ್ಶಿ ಅಬ್ದುಲ್‌ಅಜೀಜ್ ದೀನಾ, ರೋಟರಿ ಸಂಸ್ಥಾಪಕ ಸದಸ್ಯ ಶ್ರೀನಿವಾಶೆಟ್ಟಿ, ರೋಟರಿ ಸಿಲ್ಕ್ ಸಿಟಿ ಅಧ್ಯಕ್ಷ ಅಕ್ಷಯ್, ಕಾರ್ಯದರ್ಶಿ ಮಾಲಿಕ್‌ಚಂದ್ರ, ಸರ?ವಿ, ಮುಖಂಡ ಶಮಿತ್‌ಕುಮಾರ್, ಉಪಪ್ರಾಂಶುಪಾಲೆ ನಾಗರತ್ನ, ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಿರಣ್‌ರಾಜ್, ಸಹ ಕಾರ್ಯದರ್ಶಿ ಮಲ್ಲೇಶ್, ಶಿಕ್ಷಕರಾದ ವೆಂಕಟಾಚಲ, ಸುಧಾಕರ್, ಶೈಲಜಾ, ನಟರಾಜ್ ಹಾಜರಿದ್ದರು.



## ಭಗವಂತ ಕಾಣಬೇಕಾದರೆ ಸತ್ಸಂಗ ಕಾರ್ಯಕ್ರಮ ಸಹಕಾರಿ: ಜೆ.ಎಸ್.ರಾಮಚಂದ್ರಪ್ಪ.

**ವಿಜಯಪುರ:** ಪ್ರತಿಯೊಬ್ಬರ ಮನಸ್ಸಿನಲ್ಲಿ ಭಗವಂತ ಕಾಣಬೇಕಾದರೆ ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಜನ್ಮಸಾರ್ಥಕ ಮಾಡಿಕೊಳ್ಳಲು ಸತ್ಸಂಗ ಸಹಕಾರಿ ಎಂದು ಶ್ರೀ ಕೃಷ್ಣ ಸತ್ಸಂಗದ ಅಧ್ಯಕ್ಷ ಜೆ.ಎಸ್ ರಾಮಚಂದ್ರಪ್ಪ ತಿಳಿಸಿದರು. ಇವರು ಪಟ್ಟಣದ 14 ನೇ ವಾರ್ಡಿನ ತೋಟದ ಮನೆಗಳ ಬಳಿವಿರುವ ಶ್ರೀ ಮಹೇಶ್ವರಮ್ಮದೇವಿ ಸೇವಾ ಅಭಿವೃದ್ದಿ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಬಾಲ ಹುಣ್ಣಿಮೆ ಪೂಜಾ ಕಾರ್ಯದಲ್ಲಿ ಸಂತರ ಜ್ಞಾನಾಮೃತ ಬಾಳಿಗೊಂದು ಬೆಳಕು ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡಿದರು. ಭಕ್ತರಲ್ಲಿ ನೆಮ್ಮದಿ, ಉತ್ತಮ ಜೀವನ ಸಾಗುವುದು ಎಂಬುದು ಸತ್ಸಂಗ ಎಂಬ ಕಾರ್ಯಕ್ರಮ ಗದ್ದಲ ಮಾಡುವುದಲ್ಲ. ಬದಲಿಗೆ ಭಗವಂತನನ್ನು ಆರಾಧಿಸುವ ಮೂಲಕ ಸಂಸ್ಕಾರ ಪಡೆದು ಪರಮಾತ್ಮನಲ್ಲಿ ಲೀನವಾಗುವುದು. ಎಲ್ಲರೂ ಸತ್ಸಂಗ ಕಾರ್ಯಕ್ರಮದಲ್ಲಿ ಭಾಗವಹಿಸಿ ಆಧ್ಯಾತ್ಮಿಕತೆ ಬೆಳಸಿಕೊಳ್ಳಬೇಕು ಎಂದು ಹೇಳಿದರು. ಶ್ರೀ ಕೃಷ್ಣ ಸತ್ಸಂಗದ ಸಂಚಾಲಕರಾದ ವಿ.ಎನ್. ವೆಂಕಟೇಶ್ ಮಾತನಾಡಿ, ವರ್ಷಕ್ಕೆ ಒಂದು ಬಾರಿ ಬರುವ ಈ ಬಾಲ ಹುಣ್ಣಿಮೆಯಲ್ಲಿ ಭಾಗವಹಿಸುತ್ತಿರುವುದು ಎಲ್ಲಾರ ಸೌಭಗ್ಯವಾಗಿದೆ. ಭಕ್ತರಲ್ಲಿ ನೆಮ್ಮದಿ, ಉತ್ತಮ ಜೀವನ ಮನಸ್ಸಿಗೆ ನೆಮ್ಮದಿ ಎಲ್ಲವನ್ನು ಭಗವಂತನು ನೀಡುತ್ತಾನೆ ಎಂದರು. ಈ ಪೂಜಾ ಕಾರ್ಯಕ್ರಮವನ್ನು ಮುನಿವೆಂಕಟಪ್ಪನವರ ಸ್ಮರಣಾರ್ಥ ಕುವಣ್ಣ ಹಾಗೂ ಚಂದ್ರಕಲಾ ಮತ್ತು ರಾಂಬಾಬು ನಡೆಸಿಕೊಟ್ಟರು. ಈ ಪೂಜಾ ಕಾರ್ಯದಲ್ಲಿ ಪ್ರತಿ ಮಾಸವು ಐದು ಜನ ಮುತ್ತೈದೆಯರಿಗೆ ಸೀರೆ ಸೇವೆ, ಬಡ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕಗಳ ವಿತರಿಸಿ ಸೇವೆಯನ್ನು ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಉದ್ಘಾಟನೆಯನ್ನು ಪುರಸಭಾ ಸದಸ್ಯೆ ರಾಧಮ್ಮ ಪಿ ಪ್ರಕಾಶ್ ನಡೆಸಿಕೊಟ್ಟರು. ಎಸ್.ರಮೇಶಸ್ವಾಮಿ, ಶ್ರೀ ಮಹೇಶ್ವರಮ್ಮ ದೇವಿ ಸೇವಾ ಅಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಆರ್.ನಾಗರಾಜು, ವಿ.ಎನ್.ಪ್ರಕಾಶ್, ಆರ್ ಗೋವಿಂದರಾಜು, ಆರ್.ನಾಗರಾಜು, ಬಲಿಜ ಸಂಘದ ಅಧ್ಯಕ್ಷ ಆರ್.ಮುನಿರಾಜು, ವಿ.ಕೃಷ್ಣಪ್ಪ, ರಾಮರಾಜು ಮೇಸ್ತ್ರಿ ರಾಮಪ್ಪ, ವಿ.ಮುನಿರಾಜಪ್ಪ, ಎಂ.ಅನಿಲ್ ಕುಮಾರ್, ಜಿ.ವೆಂಕಟೇಶ್, ಮಹಾತ್ಮ ಆಂಜನೇಯ್ಯ, ಜಗನ್ನಾಥ್, ಮಂಜುನಾಥ್, ಮುನಿರಾಜು ಹಾಗೂ ಭಕ್ತವೃಂದ ಹಾಜರಿದ್ದರು.



## ಅಪಘಾತದಲ್ಲಿ ಮೂವರ ಸಾವು

**ದಾವಣಗೆರೆ:** ಟೈರ್ ಸ್ಫೋಟಗೊಂಡು ಬೋಲೆರೋ ವಾಹನ ಪಲ್ಟಿಯಾದ ಪರಿಣಾಮ ಮೂವರು ಸಾವನ್ನಪ್ಪಿ, 6 ಮಂದಿ ಗಂಭೀರವಾಗಿ ಗಾಯಗೊಂಡಿರುವ ಘಟನೆಯೊಂದು ದಾವಣಗೆರೆ ಹೊರವಲಯದ ಪುಣೆ- ಬೆಂಗಳೂರು ರಾಷ್ಟ್ರೀಯ ಹೆದ್ದಾರಿ 48 ರಲ್ಲಿ ಭಾನುವಾರ ತಡರಾತ್ರಿ ನಡೆದಿದೆ. ಮೃತಪಟ್ಟವರೆಲ್ಲರೂ ಆಂಧ್ರ ಮೂಲದವರಾಗಿದ್ದಾರೆಂದು ಹೇಳಲಾಗುತ್ತಿದ್ದು, ಗಾಯಾಳುಗಳನ್ನು ದಾವಣಗೆರೆ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಓರ್ವನ ಸ್ಥಿತಿ ಗಂಭೀರವಾಗಿದ್ದು, ಆತನನ್ನು ಹುಬ್ಬಳ್ಳಿಗೆ ರವಾನಿಸಲಾಗಿದೆ ಎಂದು ತಿಳಿದುಬಂದಿದೆ. ಮೃತಪಟ್ಟವರು ಆಂಧ್ರ ಮೂಲದ ಕರ್ನೂಲ್ ಜಿಲ್ಲೆಯ ಮಂತ್ರಾಲಯ ತಾಲೂಕಿನ ಸಿಂಗರಾಜನಹಳ್ಳಿ ನಿವಾಸಿಗಳು ಎಂದು ಹೇಳಲಾಗುತ್ತಿದೆ. ಹಾವೇರಿ ಜಿಲ್ಲೆ ಬ್ಯಾಡಿಗೆಯಿಂದ ಮೆಣಸಿನಕಾಯಿ ಖರೀದಿಗೆ ತೆರಳಿ ವಾಪಸ್ ಬರುವ ಸಂದರ್ಭದಲ್ಲಿ ಈ ಅಪಘಾತ ಸಂಭವಿಸಿದೆ ಎಂದು ವರದಿಗಳು ತಿಳಿಸಿವೆ.

# ಬಂಡೂರು ಅಗ್ರಹಾರದ ಶ್ರೀ ಮಾತಾರೇಣುಕಾ ಯಲ್ಲಮ್ಮನ ಜಾತ್ರೆ

**ಮಾಲೂರು :** ಸತತ 26 ವರ್ಷಗಳಿಂದ ಯಾರಿಂದಲೂ ಯಾವುದೇ ದೇಣಿಗೆಯನ್ನು ಪಡೆಯದೆ ನನ್ನ ಸ್ವಂತಖರ್ಚಿನಿಂದ ಮಾತಾರೇಣುಕಾಯಲ್ಲಮ್ಮನ ಜಾತ್ರಾ ಮಹೋತ್ಸವ ಮಾಡುತ್ತಿದ್ದು ಜನರಿಗೆ ನನ್ನಕೈಲಾದ ಸಹಾಯ ಹಸ್ತ ನೀಡುತ್ತಿರುವುದಾಗಿ ಬಂಡೂರು ಅಗ್ರಹಾರದ ಕೋಲಾರ ಜಿಲ್ಲಾ ರೇಣುಕಾಯಲ್ಲಮ್ಮ ಬಳಗದ ಅಭಿವೃದ್ಧಿ ಸಂಘದಜಿಲ್ಲಾಧ್ಯಕ್ಷ ಡಾ: ಪಿ ನಾರಾಯಣಸ್ವಾಮಿ ತಿಳಿಸಿದರು.

ಟೇಕಲ್ ನ ಬಂಡೂರಅಗ್ರಹಾರದಲ್ಲಿ 26ನೇ ವರ್ಷದ ರೇಣುಕಾ ಯಲ್ಲಮ್ಮನವರ ವಿಶೇಷಜಾತ್ರಾ ಮಹೋತ್ಸವನ್ನು ಉದ್ಘಾಟಿಸಿ ಮಾತನಾಡಿದರು.

ಭಕ್ತಾದಿಗಳಿಗೆ ಎಲ್ಲಾರೀತಿಯ ಮೂಲಭೂತ ಸೌಕರ್ಯಗಳನ್ನು ಮಾಡಿದ್ದು ಬಹಳ ದೂರದಿಂದಲೂ ಬಂದುಅಮ್ಮನವರಿಗೆ ವಿಶೇಷಅಭಿಷೇಕ ಪೂಜೆ ಕೈಂಕರ್ಯಗಳನ್ನು ನೆರವೇರಿಸುತ್ತಾತಮ್ಮ ಹರಕೆಯನ್ನುತೀರಿಸುತ್ತಾರೆ ಹಲವಾರುಜನರಿಗೆ ಬೇಡಿದವರ ನೀಡುವಕಾಮಧೆ ೀನುವೇರೇಣುಕಾಯಲ್ಲಮ್ಮ ಎಂದರು.

ನಾನು ಅಂದುಕೊಂಡಂತೆ ಕುಗ್ರಾಮವಾಗಿದ್ದ ಬಂಡೂರು ಅಗ್ರಹಾರ ಇಂದು ರಾಜ್ಯದಲ್ಲಿ ತನ್ನದೇ ಆದ ಮಹತ್ವದ ಹೆಸರು ಪಡೆದುಕೊಂಡಿದೆಇದು ನನ್ನ ಪರಿಶ್ರಮದ ಭಾಗವಾಗಿದೆ ಈ ಹಿಂದೆಇಲ್ಲಿ ನಡೆದಜಾತ್ರಾ ಮಹೋತ್ಸವದಲ್ಲಿ ಮಾಜಿ ಪ್ರಧಾನಿಗಳಾದ ಎಚ್.ಡಿ.ದೇವೇಗೌಡರು ಬಂದುಅಮ್ಮನ ಪೂಜೆಯಲ್ಲಿ ಪಾಲ್ಗೊಂಡಿದ್ದನ್ನು ನೆನೆದರೂ. ಗ್ರಾಮದಲ್ಲಿಅಂಬೇಡ್ಕರ್ ಪ್ರತಿಮೆಯನ್ನು ಸ್ವಂತಖರ್ಚಿನಿಂದ ಸ್ಥಾಪನೆ ಮಾಡಿದ್ದು ಮುಂದಿನ ದಿನಗಳಲ್ಲಿ ನನ್ನಗ್ರಾಮಕ್ಕೆ ನನ್ನದೇಆದಕೊಡುಗೆಯಂತೆ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಾಗಿ ತಿಳಿಸಿದರು.



ಈ ಬಾರಿಯಜಾತ್ರೆ ವಿಭಿನ್ನವಾಗಿ ಮಾಡಿದ್ದು ಯಾವುದೇರಾಜಕೀಯ ಪ್ರತಿನಿಧಿಗಳನ್ನು ಕರೆದು ಸಭಾಕಾರ್ಯಕ್ರಮ ಮಾಡುವುದನ್ನು ನಿಲ್ಲಿಸಿದ್ದು, ಭಕ್ತಾದಿಗಳೆ ಎಲ್ಲಾ ನಮಗೆ ಪ್ರೇರಣೆಅದ್ದರಿಂದ ನೀವೇ ನಮ್ಮ ಪಾಲಿನ ದೇವರುಗಳು ಎಂದರು. ಅಮ್ಮನವರಿಗೆ ವಿಶೇಷ ಅಭಿಷೇಕ: ಇದಕ್ಕು ಮುಂಚೆ ರೇಣುಕಾಎಲ್ಲಮ್ಮನವರಿಗೆ ವಿಶೇಷವಾಗಿ ಭಾರತಲ್ ಹುಣ್ಣಿಮೆಯದರಿಂದಜಾತ್ರೆಯ ಂಧರ್ಮಾಧಿಕಾರಿ ಹಾಗೂ ವ್ಯವಸ್ಥಾಪಕರು ವೆಂಕಟಲಕ್ಷ್ಮಮ್ಮಡಾ:ಪಿ.ನಾರಾಯಣ ಸ್ವಾಮಿ ದಂಪತಿಗಳು ಮಾತಾಯಲ್ಲಮ್ಮ ನವರಿಗೆ ವಿಶೇಷ ಅಭಿಷೇಕ ಮಾಡಿ ನಂತರ ಹೂವಿನ ಅಲಂಕಾರವನ್ನು ಮಾಡಲಾಯಿತು . ಕೆಲವು ಸಾಂಸ್ಕೃತಿಕಕಾರ್ಯಕ್ರಮರಸಮಂಜರಿ,ತಮಟೆ ವಾದ್ಯಗಳು ನೆರವೇರಿತು.

### ವಿಜೃಂಭಣೆ ಕರಗ

ಭಾನುವಾರ ಮುಂಜಾನೆ 4ಗಂಟೆಗೆ ಅಂಧ್ರ ಪ್ರದೇಶದಕುಪ್ಪಂನಕೊ ೀನೆರುಕುಪ್ಪದಕರಗದ ಪೂಜಾರಿ ಸತ್ಯನಾರಾಯಣರವರಿಂದ ವಿಶೇಷ ಕರಗ ಮಹೋತ್ಸವ ನೇರವೇರಿಸಿದರು ನಂತರಅಗ್ನಿಕುಂಡ, ಅಮ್ಮನವರಿಗೆತಂಬಿಟ್ಟು ದೀಪಾರಾಧನೆ ಸುಮಂಗಲಿ ಯರು ನೆರವೇರಿಸಿದರು. ಒಟ್ಟಾರೆ ಎರಡು ದಿನಗಳ ಪೂಜಾ ಕೈಂಕರ್ಯಗಳು ಪ್ರಧಾನಅರ್ಚಕರಾದ ಮಂಜುನಾಥ ಶಾಸ್ತ್ರೀಗಳು ನೇರವೇರಿಸಿದರು. ಜಾತ್ರಾ ಮಹೋತ್ಸವದಲ್ಲಿ ಬಂಗಾರಪೇಟೆಕನ್ನಡ ಸಂಘದಅಧ್ಯಕ್ಷರಾದ ಪಲ್ಲವಿ ಮಣಿ, ಉಪಾಧ್ಯಕ್ಷ ಮುರಳಿ, ಸಮುದಾಯದ ಮುಖಂಡರು ವೆಂಕಟೇಶಣ್ಣ,ಶಿವಣ್ಣ, ಸುಬ್ರಮಣಿ,ಆನಂದ್,ಯಲ್ಲಪ್ಪ, ದೇವರಾಜ್‌ಇನ್ನೂ ಹಲವಾರು ಮುಖಂಡರು ಉಪಸ್ಥಿತರಿದ್ದರು.

### ಪಶುಸಂಗೋಪನೆ ಮತ್ತು ರೇಷ್ಮೆ ಖಾತೆ ಸಚಿವ ಕೆ.ವೆಂಕಟೇಶ್ ಸಲಹೆ

# ಉಪಕಸುಬುಗಳಿಂದ ಆರ್ಥಿಕ ಅಭಿವೃದ್ಧಿ



**ಪಿರಿಯಾಪಟ್ಟಣ:** ಗ್ರಾಮೀಣ ಭಾಗದ ಮಹಿಳೆಯರು ಕೃಷಿಯ ಜೊತೆಗೆ ಹೈನುಗಾರಿಕೆಯನ್ನು ಅವಲಂಬಿಸಿರುವುದರಿಂದ ಆರ್ಥಿಕವಾಗಿ ಸಧೃಡರಾಗಲು ಸಾಧ್ಯವೆಂದು ಪಶುಸಂಗೋಪನೆ ಮತ್ತು ರೇಷ್ಮೆ ಖಾತೆ ಸಚಿವ ಕೆ.ವೆಂಕಟೇಶ್ ತಿಳಿಸಿದರು.

ಪಟ್ಟಣದ ಎಪಿಎಂಸಿ ಆವರಣದಲ್ಲಿ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಹಾಗೂ ಕರ್ನಾಟಕ ಸಹಕಾರ ಕುಕ್ಕುಟ ಮಹಾ ಮಂಡಳಿ ವತಿಯಿಂದ ಏರ್ಪಡಿಸಿದ್ದ ಗ್ರಾಮೀಣ ಮಹಿಳೆಯರಿಗೆ ನಾಟಿ ಕೋಳಿ ವಿತರಣಾ ಕಾರ್ಯಕ್ರಮದಲ್ಲಿ ನಾಟಿ ಕೋಳಿ ವಿತರಿಸಿ ಮಾತನಾಡಿದ ಅವರು ಬಡ ಜನರಿಗೆ ಆರ್ಥಿಕವಾಗಿ ಸಹಾಯವಾಗಲಿ ಎಂಬ ಉದ್ದೇಶದಿಂದ ನಮ್ಮ ಸರ್ಕಾರವೂ ಹಲವು ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಚುನಾವಣೆ ಪೂರ್ವಕ್ಕೂ ಮುಂಚೆ ರಾಜ್ಯದಲ್ಲಿ ವಿಪಕ್ಷಗಳು ಟೀಕೆ ಮಾಡುತ್ತಿದ್ದವು ನಾವು ನೀಡಿದ್ದ ಭರವಸೆಯಂತೆ ಗ್ಯಾರಂಟಿಗಳನ್ನೂ ಜಾರಿ ಮಾಡಿದ್ದೇವೆ. ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಕ್ಕೆ ತಂದರೆ ಆರ್ಥಿಕವಾಗಿ ಸಂಕಷ್ಟವಾಗುತ್ತದೆಯೆಂದು ಟೀಕೆ ಮಾಡುತ್ತಿದರು ದೇಶದ ಪ್ರಧಾನಮಂತ್ರಿ ಸೇರಿದಂತೆ ಸಚಿವರುಗಳು ಸಹ ಪ್ರಚಾರ ಮಾಡಿದರು ಸಹ ಜನರು ತಲೆಕೆಡಿಸಿಕೊಳ್ಳದೆ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿದರು. ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷ ಒಂದಾಗಿ ನಮ್ಮನು ಸೋಲಿಸಲು ಹವಣಿಸುತ್ತಿವೆ. ಮಧ್ಯವರ್ತಿಗಳಿಲ್ಲದೆ ನೇರವಾಗಿ ಗ್ಯಾರಂಟಿ ಯೋಜನೆಗಳನ್ನು ಭ್ರಷ್ಟಾಚಾರವಿಲದೇ ತಲುಪಿಸಲಾಗುತ್ತಿದೆ ಇವು ಬಡ ಜನರ ಅನುಕೂಲಕ್ಕಾಗಿ ಕಾಂಗ್ರೆಸ್ ಸರಕಾರವು ಜಾರಿಗೆ ತಂದ ಕಾರ್ಯಕ್ರಮಗಳು. ಹಿಂದೆ ಆಡಳಿತ ನಡೆಸಿದ ಬಿಜೆಪಿ ಪಕ್ಷ ಏಕೆ ಇಂತಹ ಕಾರ್ಯಕ್ರಮಗಳನ್ನು ಜಾರಿ ಮಾಡಲಿಲ್ಲವೆಂದರು .ಆರ್ಥಿಕ ಸ್ವಾವಲಂಬನೆ, ಪೌಷ್ಟಿಕ ಆಹಾರ ಮತ್ತು ಉತ್ತಮ ಆರೋಗ್ಯಕ್ಕೆ ನಾಟಿಕೋಳಿ ಉತ್ತಮ ಆಹಾರವಾಗಿದ್ದು, ಕೇವಲ ಗ್ರಾಮೀಣ ಪ್ರದೇಶದ ಆಹಾರದ ಒಂದು ಭಾಗವಾಗಿದ್ದ ನಾಟಿ ಕೋಳಿ ಸಾಕಾಣಿಕೆ, ಈಗ ಒಂದು ಉದ್ಯಮವಾಗಿ ಬೆಳೆದಿದೆ, ಗ್ರಾಮೀಣ ಪ್ರದೇಶದ ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸಲು ಇದು ಸಹಕಾರಿಯಾಗಿದೆ. ನಾಟಿಕೋಳಿ ಸಾಕಣೆ ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಆದಾಯವನ್ನು ಪಡೆಯಬಹುದು. ಹಾಗೆಯೇ ನಾಟಿ ಕೋಳಿ ಮೊಟ್ಟೆಯಿಂದ ಮನುಷ್ಯನ ಆರೋಗ್ಯವನ್ನು ವೃದ್ಧಿಸಿಕೊಳ್ಳಬಹುದು. ನಾಟಿ ಕೋಳಿ ಸಾಕಾಣಿಕೆಯಿಂದ ಗ್ರಾಮೀಣ ಭಾಗದ ಜನರಿಗೆ ಆರ್ಥಿಕವಾಗಿ ಮತ್ತು ಆರೋಗ್ಯ ದೃಷ್ಟಿಯಿಂದ ಹೆಚ್ಚು ಪ್ರಯೋಜನಕಾರಿಯಾಗಿದ್ದು ಈ ಉದ್ಯಮಕ್ಕೆ ಸರ್ಕಾರ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದೆ ಎಂದರು.

ಗ್ರಾಮೀಣ ಭಾಗದ ರೈತರು ಉಪಕಸುಬಾದ ಹೈನುಗಾರಿಕೆಯ ಜೊತೆಗೆ ಕುಕ್ಕುಟ ಉದ್ಯಮವನ್ನು ಪ್ರಾರಂಭಿಸುವುದರಿಂದ ತನ್ನ ದೈನಂದಿನ ಖರ್ಚನ್ನು ಸರಿದೂಗಿಸುವ ಕೆಲಸವಾಗುತ್ತದೆ. ಮುಂದಿನ ದಿನಗಳಲ್ಲಿ ಕುಕ್ಕುಟ ಉದ್ಯಮ ದೊಡ್ಡ ಉದ್ಯಮವಾಗಿ ಬೆಳೆಯುವುದರಲ್ಲಿ ಯಾವುದೇ ಸಂಶಯವಿಲ್ಲ. ಈ ಕಾರ್ಯಕ್ರಮದ ಮೂಲಕ ಹಳ್ಳಿಯ ಕೆಲವು ಆಯ್ದ ರೈತರಿಗೆ 20 ನಾಟಿ ಕೋಳಿ ಮರಿಗಳನ್ನು ನೀಡುತ್ತಿದ್ದು, ಅವುಗಳನ್ನು ಸಾಕಿ ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸುವ ಜೊತೆಗೆ ಮನುಷ್ಯನಿಗೆ ಅವಶ್ಯಕತೆ ಇರುವ ಪ್ರೋಟೀನ್ ಯುಕ್ತ ಮೊಟ್ಟೆಯನ್ನು ಉಪಯೋಗಿಸಿ ಎಂದರು.

ಕಾರ್ಯಕ್ರಮದಲ್ಲಿ 500 ಫಲಾನುಭವಿಗಳಿಗೆ ತಲಾ 20 ಕೋಳಿಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಕರ್ನಾಟಕ ಸಹಕಾರ ಕುಕ್ಕುಟ ಮಂಡಳಿಯ ಅಧ್ಯಕ್ಷ ಚಂದ್ರಶೇಖರ್, ವ್ಯವಸ್ಥಾಪಕ ಪ್ರಕಾಶ್ , ಉಪ ನಿರ್ದೇಶಕ ನಾಗರಾಜ್ , ನಿರ್ದೇಶಕ ಸಿದ್ದೇಗೌಡ, ದೇವರಾಜು, ತಹಶೀಲ್ದಾರ್ ಕುಂಞಿ ಅಹಮದ್, ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಸುನಿಲ್ ಕುಮಾರ್, ತಾಲೂಕು ಆಶ್ರಯ ಸಮಿತಿಯ ಅಧ್ಯಕ್ಷ ನಿತಿನ್ ವೆಂಕಟೇಶ್, ಪುರಸಭೆ ಮುಖ್ಯಾಧಿಕಾರಿ ಮುತ್ತಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಡಿ ಟಿ ಸ್ವಾಮಿ, ರಹಮತ್ ಜಾನ್ ಬಾಬು, ಪಶುಪಾಲನಾ ಇಲಾಖೆ ಸಹಾಯಕ ನಿರ್ದೇಶಕರಾದ ಡಾ. ಸೋಮಯ್ಯ, ಪಶು ವೈದ್ಯರಾದ ಡಾ.ಮಂಜೇಶ್, ಡಾ.ಚಾಮರಾಜ್, ಡಾ. ಮಧುಸೂಧನ್ , ಮುಖಂಡರಾದ ಇ.ಪಿ.ಲೋಕೇಶ್, ಹೋಲದಪ್ಪ , ಬಸವರಾಜ್ ,ಅಶೋಕ್ ಗೌಡ , ಸಾಲ ಕೊಪ್ಪಲು ಪುಟ್ಟರಾಜ್ ಸೇರಿದಂತೆ ಕುಕ್ಕಟ ಮಂಡಳಿ ಸಿಬ್ಬಂದಿಗಳು ,ಸಾರ್ವಜನಿಕರು ಉಪಸ್ಥಿತರಿದ್ದರು.

## ಖಾಸಗಿ ಡೇರಿಗಳ ಹಾವಳಿ ತಪ್ಪಿಸಿ

**ಚಾಮರಾಜನಗರ:** ಖಾಸಗಿ ಡೇರಿಗಳ ಹಾವಳಿಗಳನ್ನು ಪರಿಣಾಮಕಾರಿಯಾಗಿ ತಡೆಯುವ ಜೊತೆಗೆ ಗುಣಮಟ್ಟದ ಹಾಲು ಶೇಖರಣೆಗೆ ಕಾರ್ಯ ನಿರ್ವಹಕರು ಹೆಚ್ಚಿನ ಅಧ್ಯತೆ ನೀಡಬೇಕು ಎಂದು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಎಚ್. ಎಸ್. ನಂಜುಂಡಪ್ರಸಾದ್ ತಿಳಿಸಿದರು.

ಜಿಲ್ಲೆಯ ಗುಂಡ್ಲುಪೇಟೆ ಮತ್ತು ಹನೂರು ತಾಲ್ಲುಕು ಬಿಎಂಸಿ ಕೇಂದ್ರಸಹಕಾರ ಸಂಘಗಳ ಮುಖ್ಯ ಕಾರ್ಯನಿರ್ವಾಹಕರಿಗೆ ಆಡಳಿತ ನಿರ್ವ ಹಣೆ ಕುರಿತು ಕುಶಾಲನಗರದ ವೀರಭೂಮಿ ರೆಸಾಟ್9ನಲ್ಲಿ ನಡೆದ ರಾಜ್ಯ ಮಟ್ಟದ ವಿಶೇಷ ತರಭೇತಿ ಕಾರ್ಯಕ್ರಮ ದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹಾಲು ಉತ್ಪಾದಕ ರೈತರು ಹಾಗೂ ಒಕ್ಕೂಟಗಳ ಮಧ್ಯೆ ಡೇರಿ ಕಾರ್ಯದರ್ಶಿಗಳು ಸೇತುವೆಯಂತೆ ಕಾರ್ಯನಿರ್ವಹಿಸುತ್ತಿದ್ದಾರೆ. ಒಕ್ಕೂಟಗಳ ಪ್ರಗತಿಯಲ್ಲಿ ಡೇರಿ ನೌಕರರ ಶ್ರಮ ಬಹಳ ಇದೆ. ಪ್ರಾಥಮಿಕ ಹಂತದಲ್ಲಿಯೇ ಗುಣಮಟ್ಟದ ಹಾಲು ಸಂಗ್ರಹವಾದರೆ ಹಾಲಿನ ಉಪ ಉತ್ಪನ್ನ ಗಳ ತಯಾರಿಕೆ ಹಾಗೂ ಟ್ರೌಟ್ ಪ್ಯಾಕೆಟ್ ಗಳ ತಯಾರಿಕೆಗೆ ಸಹಕಾರಿಯಾಗುತ್ತದೆ. ಹೀಗಾಗಿ ರಾಜ್ಯದಲ್ಲಿ ಪ್ರಪ್ರಥಮವಾಗಿ ಚಾಮುಲ್ ನಿಂದ 60 ವರ್ಷ ತುಂಬಿದ ಡೇರಿ ನೌಕರಿಗೆ ಗೌರವಯುತ ವಾಗಿ ನಿವೃತ್ತಿ ನೀಡಿ ಅವರಸೇವಾ ಹಿರಿತನದ ಮೇಲೆ ಇಂತಿಷ್ಟು ಹಣವನ್ನು ನೀಡುವ ಯೋಜನೆ ಯನ್ನು ಜಾರಿ ಮಾಡಿ ಸುಮಾರು ಎರಡು ಕೋಟಿ ರೂ.ಗಳನ್ನು ಇದುವರೆಗೆ ನಿವೃತ್ತಿ ಹೊಂದಿದ ನೌಕರಿಗೆ ನೀಡಿದ್ದೇವೆ. ನಮ್ಮ ಒಕ್ಕೂಟದ ಈ ಯೋಜನೆಯನ್ನು ಇತರೇ ಒಕ್ಕೂಟ ಗಳು ಅನುಷ್ಠಾನ ಮಾಡಿಕೊಳ್ಳುತ್ತಿವೆ ಎಂದು ನಂಜುಂಡ ಪ್ರಸಾದ್ ತಿಳಿಸಿದರು. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಲದ ನಿರ್ದೇಶಕ ಬಿ.ಸಿ.ಲೋಕಪ್ಪಗೌಡ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಇತ್ತೀಚಿನ ದಿನ ಗಳಲ್ಲಿ ಎಲ್ಲಾ ಸಹಾಕಾರ ಕ್ಷೇತ್ರಗಳಲ್ಲಿ ಪೈಪೋಟಿ ಜಾಸ್ತಿಯಾಗುತ್ತಿದೆ. ಸಂಘದ ಅಸ್ತಿತ್ವ ಉಳಿಸಿಕೊಳ್ಳಲು ಸವಲತ್ತು ಹಾಗೂ ಸೌಲಭ್ಯಗಳನ್ನು ನೀಡುವುದು ಮುಖ್ಯವಾಗಿ ದೆ. ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಸಹಕಾರಿ ಶಿಕ್ಷಣ, ತರಬೇತಿ ಹಾಗೂ ಜಾಗೃತಿ ಮುಖ್ಯವಾಗಿ ದೆ. ಈ ನಿಟ್ಟಿನಲ್ಲಿ ಜಿಲ್ಲಾ ಸಹಕಾರಿ ಒಕ್ಕೂಟ ಗುಣಾತ್ಮಕ ವಾಗಿ ಕಾರ್ಯಕ್ರಮ ರೂಪಿಸುತ್ತಿದೆ ಎಂದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಲದ ಮತ್ತೋರ್ವ ನಿರ್ದೇಶಕ ಬಿ. ಜಯಕರಶೆಟ್ಟಿ ಇಂದ್ರಾಣಿ ಮಾತನಾಡಿ, ಎಲ್ಲರ ಲ್ಲೂ ಸಮಥ್ರ್ಯ ಇರುತ್ತದೆ. ನಮ್ಮಲ್ಲಿರುವ ಕೀಳಿರಿಮೆಯನ್ನು ಬಿಟ್ಟು ಇಂತಹ ತರಬೇತಿಯಲ್ಲಿ ಭಾಗವಹಿಪಿಸಿ. ವೃತ್ತಿ ನೈಪುಣ್ಯತೆಯನ್ನು ಹೆಚ್ಚಿಸಿಕೊಳ್ಳಿ ಎಂದರು. ಮೈಸೂರಿನ ತರಬೇತಿ ಕೇಂದ್ರ ದ ಎಚ್.ಎಂ. ಮಹದೇವಸ್ವಾಮಿ, ಹಾಲಿನ ಗುಣಮಟ್ಟ ಸುಧಾರಣೆ, ಮಡಿಕೇರಿಯ ಕೆಐಸಿಎಂ ಡಾ. ಆರ್. ಎಸ್. ರೇಣುಕಾ ಸಿಇಒಗಳ ಕರ್ತವ್ಯ ಮತ್ತು ಜವಾಬ್ದಾರಿ ಗಳು, ಸಾಧನಾ ಸಂಸ್ಥೆ ಯ ನಿರ್ದೇಶಕ ಟಿ.ಜೆ.ಸುರೇಶ್ ಒತ್ತಡ ನಿರ್ವಹಣೆ ಮತ್ತು ಸಮಯ ನಿರ್ವಹಣೆ ಕುರಿತು ಮಾತನಾಡಿದರು. ಚಾಮುಲ್ ಅಧ್ಯಕ್ಷ ವೈ.ಸಿ. ನಾಗೇಂದ್ರ, ವ್ಯವಸ್ಥಾಪಕ ನಿರ್ದೇಶಕ ರಾಜ್ ಕುಮಾರ್ ಜಿಲ್ಲಾಸಹಕಾರ ಒಕ್ಕೂಟದ ಉಪಾಧ್ಯಕ್ಷ ರಾಯಪ್ಪನ್, ನಿರ್ದೇಶಕರಾದ ಮುದ್ದಯ್ಯ, ಎಚ್.ಎನ್. ಸುಂದರ ರಾಜ್, ಎಚ್.ಎಂ. ಬಸವಣ್ಣ, ಎಂ.ಎಂ.ನಾಗರಾಜು, ಪ್ರಭು ಸ್ವಾಮಿ, ಎಂ.ರವಿ, ಪಿ. ಮಹದೇವ ಸ್ವಾಮಿ ಎಚ್.ಎಂ. ಮಹದೇವಪ್ರಭು, ಒಕ್ಕೂಟದ ಸಿಇಓ ಮನುಜ, ವ್ಯವಸ್ಥಾಪಕ ಮಲ್ಲಿಕಾರ್ಜುನ ಸ್ವಾಮಿ ಇದ್ದರು.





ಚಿಕ್ಕನಾಯಕನಹಳ್ಳಿ ತಾಲೂಕು ಹುಳಿಯಾರು ಹೋಬಳಿಯ ಯಳನಾಡು ಸರ್ಕಾರಿ ಪ್ರೌಢಶಾಲೆಯ ಶಿಕ್ಷಕಿ ವಿದ್ಯಾ ಕುಂಚನೂರು ಅವರು ಜಿಲ್ಲಾ ಸರ್ಕಾರಿ ನೌಕರರ ಕ್ರೀಡಾಕೂಟದ ವೈಯಕ್ತಿಕ ವಿಭಾಗದ ಯೋಗ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

## ಭಗತ್‌ಸಿಂಗ್ ಯುವಸೇನೆ ವತಿಯಿಂದ ಕಬಡ್ಡಿ ಪಂದ್ಯಾವಳಿ

**ಚಾಮರಾಜನಗರ:** ಚಂದಕವಾಡಿಯಲ್ಲಿ ಒಂದು ವಾರಗಳ ಕಾಲ ನಡೆಯಲಿರುವ ಲಕ್ಷ್ಮಿ ದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಕೋಡಿಮೋಳೆ ಗ್ರಾಮದ ಭಗತ್‌ಸಿಂಗ್ ಯುವಸೇನೆ ವತಿಯಿಂದ 18 ವರ್ಷ ಒಳಪಟ್ಟ ಮಕ್ಕಳಿಗಾಗಿ ಕಬಡ್ಡಿ ಪಂದ್ಯಾವಳಿಯನ್ನು ಆಯೋಜಿಸಲಾಗಿತ್ತು. ಕೋಡಿಮೋಳೆ ಗ್ರಾಮದ ಸರ್ಕಾರಿ ಶಾಲೆ ಆವರಣದಲ್ಲಿ ಕಳೆದ ಮೂರು ದಿನಗಳಿಂದ ನಡೆದ ಪಂದ್ಯಾವಳಿಯಲ್ಲಿ 5 ತಂಡಗಳು ಭಾಗವಹಿಸಿದ್ದು, ವಿಜೇತ ತಂಡದ ವಿದ್ಯಾರ್ಥಿಗಳಿಗೆ ಕಪ್ ಹಾಗೂ ಪದಕಗಳನ್ನು ವಿತರಿಸಲಾಯಿತು. ಕಾರ್ಯಕ್ರಮದ ಆಯೋಜಕರಾದ ಶಿಕ್ಷಕರಾದ ಮನೋಜ್ ಮಸು ಮಾತನಾಡಿ, ವಿದ್ಯಾರ್ಥಿಗಳು ಓದಿನ ಜೊತೆಗೆ ಕ್ರೀಡೆಗಳಲ್ಲಿ ಭಾಗವಹಿಸುವುದರಿಂದ ದೈಹಿಕವಾಗಿ ಹಾಗೂ ಮಾನಸಿಕವಾಗಿ ಸದೃಢಗೊಳ್ಳಲಿದ್ದಾರೆ ಎಂದರು. ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳು ಮೊಬೈಲ್ ಗೀಳಿಗೆ ಬಲಿಯಾಗುತ್ತಿದ್ದು, ಓದುವ ಕಡೆ ಆಸಕ್ತಿ ಕಡಿಮೆಯಾಗುತ್ತಿರುವುದು ಬೇಸರದ ಸಂಗತಿ. ಪೋಷಕರು ತಮ್ಮ ಮಕ್ಕಳಿಗೆ ಮೊಬೈಲ್ ಕೊಡುವುದನ್ನು ನಿಲ್ಲಿಸುವ ಜೊತೆಗೆ ಓದಿನ ಕಡೆ ಹೆಚ್ಚಿನ ಗಮನಹರಿಸಬೇಕು ಎಂದರು.

ಭಗತ್‌ಸಿಂಗ್ ಯುವಸೇನೆ ಅಧ್ಯಕ್ಷ ಕಾಂತರಾಜು ಮಾತನಾಡಿ, ಮಕ್ಕಳಲ್ಲಿ ಅಡಗಿರುವ ಪ್ರತಿಭೆಯನ್ನು ಹೊರ ತರುವಲ್ಲಿ ಶಿಕ್ಷಕರ ಪಾತ್ರ ಬಹಳ ಮುಖ್ಯವಾಗುತ್ತದೆ. ಮಕ್ಕಳು ಕ್ರೀಡೆಯಲ್ಲಿ ಪಾಲ್ಗೊಳ್ಳುವ ಮೂಲಕ ತಮ್ಮ ಪ್ರತಿಭೆಯನ್ನು ಹೊರಚೆಲ್ಲಬೇಕು. ಇದರಿಂದ ತಮ್ಮ ಭವಿಷ್ಯ ಉಜ್ವಲವಾಗಲು ಸಹಕಾರಿಯಾಗಲಿದೆ ಎಂದರು.

ಶಿಕ್ಷಕರಾದ ಮನೋಜ್ ಮಸು ರವರು ಹಲವಾರು ಶಾಲೆಗಳಲ್ಲಿ ಮಕ್ಕಳಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದು ಸಂತಸದ ವಿಷಯ ಇದರಿಂದ ಸಾಕಷ್ಟು ಪ್ರತಿಭೆಗಳು ಹೊರಬರಲಿದೆ. ಎಂದು ಅವರ ಸೇವೆಯನ್ನು ಶ್ಲಾಘಿಸಿದರು. ಈ ಸಂದರ್ಭದಲ್ಲಿ ನಾಗೇಶ್ (ಅಪ್ಪು), ಆನೇಶ್, ಮನೋಜ್, ವಿಜಯ್, ರಾಜೇಂದ್ರ, ರಾಜು ಮತ್ತಿತರರಿದ್ದರು.



# ಕೆ.ಶಿವರಾಂಗೆ ಬಿಜೆಪಿ ಟಿಕೆಟ್ ನೀಡಲು ಮನವಿ

**ಚಾಮರಾಜನಗರ:** ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಚಾಮರಾಜನಗರ ಮೀಸಲು ಕ್ಷೇತ್ರದಿಂದ ಬಿಜೆಪಿ ವರಿಷ್ಠರು ನಿವೃತ್ತ ಐಎಎಸ್ ಅಧಿಕಾರಿ ಕೆ.ಶಿವರಾಂ ಅವರಿಗೆ ಟಿಕೆಟ್ ನೀಡಬೇಕು ಎಂದು ಛಲವಾದಿ ಮಹಾಸಭಾ ರಾಜ್ಯ ಸಂಘಟನಾ ಕಾರ್ಯದರ್ಶಿ ಎಂ.ಹಂಸರಾಜು ಒತ್ತಾಯಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಕೆ.ಶಿವರಾಂ ಅವರು ಅಧಿಕಾರಿಯಾಗಿದ್ದ ಸಂದರ್ಭದಲ್ಲಿ ಕ್ರಾಂತಿಕಾರಿ ಕೆಲಸ ಮಾಡಿದ್ದಾರೆ. ಅನೇಕ ಚುನಾವಣೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಕೆಲಸ ಮಾಡಿದ್ದಾರೆ. ಸಮಾಜದಲ್ಲಿ ನೊಂದವರ ಪರ ಕೆಲಸ ಮಾಡಬೇಕು ಎಂಬ ಆಶಾಭಾವನೆಯೊಂದಿಗೆ ಚುನಾವಣೆಗೆ ಬಂದಿದ್ದಾರೆ ಅವರಿಗೆ ಬಿಜೆಪಿ ಪಕ್ಷದ ವರಿಷ್ಠರು ಅವಕಾಶ ಮಾಡಿಕೊಡುವ ಮೂಲಕ ಕ್ಷೇತ್ರದ ಅಭಿವೃದ್ಧಿಗಾಗಿ ಕಾರಣೀಭೂತರಾಗಬೇಕು ಎಂದು ಮನವಿ ಮಾಡಿದರು.

ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದಲ್ಲಿ ಕೆ.ಶಿವರಾಂ ಪರ ಉತ್ತಮ ವಾತಾವರಣ ಇದ್ದು, ಕ್ಷೇತ್ರ ಪ್ರವಾಸದಲ್ಲಿ ಜನತೆ ನೀವು ಟಿಕೆಟ್ ತೆಗೆದುಕೊಂಡು ಬನ್ನಿ ಗೆಲ್ಲಿಸಿಕೊಡುತ್ತೇನೆ ಎಂದು ಹೇಳುತ್ತಿದ್ದಾರೆ. ಅವರು ಸಂಸದರಾದರೆ ಕ್ಷೇತ್ರದ ಮಾದರಿ ಕ್ಷೇತ್ರವನ್ನಾಗ ಮಾಡಲಿದ್ದಾರೆ ಎಂದರು.

ಸಂಸದ ವಿ.ಶ್ರೀನಿವಾಸಪ್ರಸಾದ್ ಅವರು ಆರೋಗ್ಯ ಕಾಪಾಡಿಕೊಳ್ಳುವುದಕ್ಕೆ ಸಂಬಂಧರಾಗಿದ್ದಾರೆ ಹೊರತು ಕ್ಷೇತ್ರ ಅಭಿವೃದ್ದಿಗಲ್ಲ. ಕ್ಷೇತ್ರದ ಅಭಿವೃದ್ದಿ ಮಾಡಿಲ್ಲ. ಒಬ್ಬ ಅಸಮರ್ಥ, ಅದಕ್ಷ ಸಂಸದರಾಗಿದ್ದು, ಕುಟುಂಬ ರಾಜಕಾರಣ ಮಾಡಲು ಹೊರಟಿದ್ದಾರೆ. ಅವರಿಗೆ ಮತ್ತು ಮಕ್ಕಳಿಗೆ ಅಥವಾ ಅಳಿಯಂದಿರುಗಳಿಗೆ ಟಿಕೆಟ್ ನೀಡಿದರೆ ಬಿಜೆಪಿ ಹೀನಾಯವಾಗಿ ಸೋತು ಠೇವಣಿ ಕಳೆದುಕೊಳ್ಳಬೇಕಾಗುತ್ತದೆ ಎಂದರು.



ಕೆ.ಶಿವರಾಂ ಅವರ ಕೂಡ ಸ್ಥಳೀಯರೆ: ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಚಾಮರಾಜನಗರ ಮೀಸಲು ಕ್ಷೇತ್ರದಿಂದ ಸ್ಥಳೀಯರಿಗೆ ಟಿಕೆಟ್ ಕೊಡಬೇಕು ಎಂಬ ಕೂಗು ಎದ್ದಿರುವುದು ಸ್ವಾಗತಾರ್ಹ. ಕೆ.ಶಿವರಾಂ ಅವರು ಕೂಡ ಜಿಲ್ಲೆ ಚಿಕ್ಕಲ್ಲೂರು ಸಮೀಪದಲ್ಲಿರುವ ತೆಳ್ಳನೂರು ಗ್ರಾಮದವರಾಗಿದ್ದು ತುಂಬಾ ಬಡತನದಿಂದ ದುಡಿಮೆಗಾಗಿ ಬೆಂಗಳೂರಿಗೆ ಹೋಗಿ ಕನ್ನಡದಲ್ಲಿ ಐಎಎಸ್ ಪರೀಕ್ಷೆ ಬರೆದು ತೇರ್ಗಡೆ ಹೊಂದಿ ಐಎಎಸ್ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ. ಅವರು ಕೂಡ ಸ್ಥಳೀಕರಾಗಿದ್ದಾರೆ ಎಂದರು.

ಕೆ.ಶಿವರಾಂ ಎಲ್ಲಿ ಗೆಲುವು ಅಲ್ಲಿ : ನಿಂಗರಾಜು ಮಾತನಾಡಿ, ಕೆ.ಶಿವರಾಂ ಅವರು ಚಾಮರಾಜನಗರ ಜಿಲ್ಲೆಯ ಮಗನಾಗಿದ್ದು, ಐಎಎಸ್ ಅಧಿಕಾರಿಯಾಗಿ ರಾಜ್ಯಾದ್ಯಂತ ಹೆಸರುಗಳಿಸಿದ್ದಾರೆ ಅನೇಕ ಜನಪರ ಕೆಲಸಗಳನ್ನು ಮಾಡಿದ್ದಾರೆ. ಇಂತಹ ಸಾಮಾಜಿಕ ಕಳಕಳಿಯುಳ್ಳ ವ್ಯಕ್ತಿಗೆ ಈ ಬಾರಿಯಾದರೂ ಬಿಜೆಪಿ ವರಿಷ್ಠರು ಅವಕಾಶ ಮಾಡಿಕೊಟ್ಟಲ್ಲಿ ಕ್ಷೇತ್ರದಲ್ಲಿ ಬಿಜೆಪಿ ಉಳಿಸಿಕೊಳ್ಳಬಹುದ ಎಂದರು. ರಾಜ್ಯದಲ್ಲಿ ಅಪಾರ ಜನಪ್ರಿಯತೆಗಳಿಸಿಕೊಂಡಿರುವ ಕೆ.ಶಿವರಾಂ ಅವರಿಗೆ ಸ್ಪರ್ಧಿಸಲು ಅವಕಾಶ ಕೊಡದಿದ್ದರೆ ಪ್ರಜಾಪ್ರಭುತ್ವಕ್ಕೆ ಎಸಗಿದ ಅನ್ಯಾಯ ಎಂದರೆ ತಪ್ಪಾಗಲಾರದು. ಅವರ ಕಾಲು ಎಳೆಯಲು ದಲಿತ ಪಟ್ಟಭದ್ರಹಿತಾಶಕ್ತಿಗಳು ಮುಂದೇಬಂದಿದ್ದಾರೆ. ಸಂಸದ ಶ್ರೀನಿವಾಸಪ್ರಸಾದ್ ಅವರ ಕ್ಷೇತ್ರದ ಅಭಿವೃದ್ದಿ ಶೂನ್ಯ. ಅವರಿಂದ ಅಳಿಲುಸೇವೆ ಇಲ್ಲ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಛಲವಾದಿ ಮಹಾಸಭಾ ಮಾಜಿ ಜಿಲ್ಲಾಧ್ಯಕ್ಷ ಉತ್ತಂಬಳ್ಳಿಬಸವಣ್ಣ, ಮೈಸೂರು ಜಿಲ್ಲಾಧ್ಯಕ್ಷ ಅಭಿನಾಗಭೂಷಣ್, ರಾಜೇಂದ್ರ, ಶಿವಲಿಂಗಯ್ಯ ಹಾಜರಿದ್ದರು.

## ಚನ್ನಯ್ಯ, ಲಿಂಗಯ್ಯ ಕಂಡಾಯ ಉತ್ಸವ

**ಯಳಂದೂರು:** ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಭಾರತ ಹುಣ್ಣಿಮೆ ಹಿನ್ನಲೆಯಲ್ಲಿ ಶನಿವಾರ ತಡರಾತ್ರಿ ತನಕ ವಿವಿಧ ಪೂಜಾ ಕಾರ್ಯಗಳು ನಡೆದವು. ಮಲಾರಪಾಳ್ಯ ಗ್ರಾಮದಲ್ಲಿ ಪರಂಜೋತಿ ಚೆನ್ನಯ್ಯ, ಲಿಂಗಯ್ಯ ಕಂಡಾಯ ಉತ್ಸವ ಮೆರವಣಿಗೆಯನ್ನು ಗ್ರಾಮಸ್ಥರು ಅದ್ದೂರಿಯಾಗಿ ನೆರವೇರಿಸಿದರು.

ಕಂಡಾಯ ಸಾಗುವ ಹಾದಿಗಳಲ್ಲಿ ರಂಗೋಲಿ ಇಟ್ಟು, ಬೀದಿಗಳನ್ನು ತಳಿರು ತೋರಣ ಮತ್ತು ವಿದ್ಯುತ್ ದೀಪಗಳಿಂದ ಅಲಂಕರಿಸಿ ಮೆರವಣಿಗೆ ಮಾಡಿದರು. ಭಕ್ತರು ಹಣ್ಣು ಕಾಯಿ ಪೂಜೆ ಇಟ್ಟು ಹರಕೆ ಸಲ್ಲಿಸಿದರು. ಸುಮಂಗಲೆಯರು ಮತ್ತು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು.

ಕುರುಬನಕಟ್ಟೆ ಕ್ಷೇತ್ರದಿಂದ ಕಂಡಾಯ ತಂದು ಪೂಜೆ ಸಲ್ಲಿಸಲಾಗುತ್ತದೆ. ಬೀದಿಗಳನ್ನು ಸ್ವಚ್ಛಗೊಳಿಸಿ ಮಡಿಯುಟ್ಟು ದೇವರನ್ನು ಮಳೆ, ಬೆಳೆಗಾಗಿ ಪ್ರಾರ್ಥಿಸಲಾಗುತ್ತದೆ ಎಂದು ಯಜಮಾನರು ತಿಳಿಸಿದರು.



# ಬೆಟ್ಟದಪುರದಲ್ಲಿ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ರಥೋತ್ಸವ

**ಪಿರಿಯಾಪಟ್ಟಣ:** ತಾಲೂಕಿನ ಇತಿಹಾಸ ಪ್ರಸಿದ್ಧ ದೇವಾಲಯಗಳಲ್ಲಿ ಒಂದಾದ ಶ್ರೀ ಭ್ರಮರಾಂಬ ಸಮೇತ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ, ಬೆಳ್ಳಿ ಬಸಪ್ಪ, ವಿಘ್ನೇಶ್ವರ ಅವರ ಬ್ರಹ್ಮರಥೋತ್ಸವವು ಸಾವಿರಾರು ಭಕ್ತರ ಸಮ್ಮುಖದಲ್ಲಿ ಶನಿವಾರ ವಿಜೃಂಭಣೆಯಿಂದ ಜರುಗಿತು.

ತ್ರಿವಳಿ ರಥಗಳಿಗೆ ವಿವಿಧ ಪುಷ್ಪಗಳಿಂದ ಅಲಂಕರಿಸಿ ಬೆಳ್ಳಿ ಬಸಪ್ಪ, ವಿಘ್ನೇಶ್ವರ, ಭ್ರಮರಾಂಬ ಸಮೇತ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ದೇವರ ಉತ್ಸವ ಮೂರ್ತಿಗಳನ್ನು ಪ್ರತಿಷ್ಠಾಪಿಸಿ, ವಿಶೇಷ ಪೂಜೆ ಸಲ್ಲಿಸಲಾಯಿತು. ಭಕ್ತಾದಿಗಳು ಉಘೇ ಮಲ್ಲಯ್ಯ, ಉಘೇ ಗಿರಿಜಮ್ಮ, ಉಘೇ ಬೆಳ್ಳಿ ಬಸಪ್ಪ ಎಂದು ಘೋಷಣೆ ಕೂಗುತ್ತಾ ರಥವನ್ನು ಎಳೆದರು. ನವದಂಪತಿಗಳು, ವಿವಿಧ ಜಿಲ್ಲೆಗಳಿಂದ ಬಂದ ಭಕ್ತಾದಿಗಳು ಹಣ್ಣು? ಜವನ ಎಸೆದು ಹರಕೆ ಸಮರ್ಪಿಸಿದರು.

ಜಾತ್ರೆಯ ಸಂಪ್ರದಾಯದಂತೆ ಶುಕ್ರವಾರ ರಾತ್ರಿ ಅಶ್ವಾರೋಹಣ ಸೇವೆ ನಡೆಸಿ, ಗ್ರಾಮದ ಪ್ರಮುಖ ಬೀದಿಗಳಲ್ಲಿ ದೇವರ ಉತ್ಸವ ಮಾಡಲಾಯಿತು. ನಂತರ ದೇವಾಲಯದ ಆವರಣದಲ್ಲಿ ಸತೀಶ್ ಕಶ್ಯಪ ನೇತೃತ್ವದಲ್ಲಿ ಭ್ರಮರಾಂಬ ಹಾಗೂ ಮಲ್ಲಿಕಾರ್ಜುನ ಸ್ವಾಮಿ ದೇವರಿಗೆ ಶಾಸ್ತ್ರೋಕ್ತವಾಗಿ ವಿವಾಹ ಮಾಡಿಸಿ, ಗಿರಿಜಾ ಕಲ್ಯಾಣ ನೆರವೇರಿಸಿದರು. ಮಧ್ಯರಾತ್ರಿಯವರೆಗೂ ನಡೆದ ಕಲ್ಯಾಣೋತ್ಸವದಲ್ಲಿ ತಹಶೀಲ್ದಾರ್ ಕುಂಞಿ ಅಹಮದ್ ಭಾಗವಹಿಸಿ ವಿಶೇಷ ಪೂಜೆ ಸಲ್ಲಿಸಿದರು.

ಶನಿವಾರ ಬೆಳಿಗ್ಗೆ ದೇವಾಲಯದಿಂದ ಉತ್ಸವ ಮಾಡುವ ಮೂಲಕ ರಥದ ಬೀದಿಗೆ ಉತ್ಸವ ಮೂರ್ತಿಗಳನ್ನು ಕರೆತರಲಾಯಿತು. ಆಕರ್ಷಕ ಪುಷ್ಪಗಳಿಂದ ಅಲಂಕೃತಗೊಂಡಿದ್ದ ರಥಗಳಲ್ಲಿ ಉತ್ಸವ ಮೂರ್ತಿಗಳನ್ನು ಪ್ರತಿಷ್ಠಾಪಿಸಿದ ನಂತರ ತಹಶೀಲ್ದಾರ್ ಕುಂಞಿ ಅಹಮದ್ ಪೂಜೆ ಸಲ್ಲಿಸಿ ಚಾಲನೆ ನೀಡಿದರು. ಬಳಿಕ ಗ್ರಾಮದ ಮಧ್ಯಭಾಗದಲ್ಲಿರುವ ದೇವಾಲಯಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು.

ಗ್ರಾಮದ ಪ್ರಮುಖ ರಸ್ತೆಗಳನ್ನು ವಿದ್ಯುತ್ ದೀಪಗಳು ಹಾಗೂ ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು. ಸಂಜೆ ರಥಗಳನ್ನು ಮರಳಿ ಸ್ವಸ್ಥಾನಕ್ಕೆ ನಿಲ್ಲಿಸಿದ ನಂತರ ಹಂಸ ವಾಹನದ ಮೂಲಕ ಶಾಂತೋತ್ಸವ ನಡೆಸಿ ಉತ್ಸವ ಮೂರ್ತಿಯನ್ನು ದೇವಾಲಯದಲ್ಲಿ ಪ್ರತಿಷ್ಠಾಪಿಸಲಾಯಿತು.

### ಬೆಟ್ಟವೇರಿದ ಭಕ್ತರು

**ಜಾತ್ರಾ ಮಹೋತ್ಸವದ ಪ್ರಯುಕ್ತ ಶುಕ್ರವಾರ ರಾತ್ರಿಯಿಂದ ಶನಿವಾರ ಸಂಜೆಯವರೆಗೂ ಸಾವಿರಾರು ಭಕ್ತರು 3,600 ಮೆಟ್ಟಿಲುಗಳನ್ನು ಏರಿ ಸಿಡಿಲು ಮಲ್ಲಿಕಾರ್ಜುನ ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರು. ರಥದ ಬೀದಿಯಲ್ಲಿ ಸಾರ್ವಜನಿಕರು, ದೇವಾಲಯದ ಸಮಿತಿ ಹಾಗೂ ಸಂಘ ಸಂಸ್ಥೆಗಳು ಮಜ್ಜಿಗೆ, ಪಾನಕ ಹಾಗೂ ಪ್ರಸಾದ ವಿನಿಯೋಗ ನೆರವೇರಿಸಿದರು.**



# ಇತಿಹಾಸ, ಸಂಸ್ಕಾರ, ಸಂಸ್ಕೃತಿ ತಿಳಿಯಿರಿ

**ವಿಜಯಪುರ:** ಸಂಘ ಸಂಸ್ಥೆಗಳ ವತಿಯಿಂದ ನಮ್ಮ ಸಂಸ್ಕಾರ, ಸಂಸ್ಕೃತಿ, ಸ್ಥಳ ಮಹಾತ್ಮೆ, ಸಾಧನೆ ತೋರಿದ ಸ್ಥಳೀಯ ಸ್ಮರಣೀಯರ ಇತಿಹಾಸಗಳನ್ನು ನಮ್ಮ ಮುಂದಿನ ಪೀಳಿಗೆಗೆ ತಲುಪಿಸುವಂತಹ ಕಾರ್ಯ ಸಂಘ-ಸಂಸ್ಥೆಗಳಿಂದ ಆಗಬೇಕಾಗಿದೆ ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘದ ಮಾಜಿ ಅಧ್ಯಕ್ಷ ಸಮಾಜಸೇವಕರಾದ ಉತ್ಸವ ಅಧ್ಯಕ್ಷರು ಆದ ಬಿಕೆ ನಾರಾಯಣಸ್ವಾಮಿ ತಿಳಿಸಿದರು.

ಅವರು ಇಲ್ಲಿನ ಮಹಾತ್ಮ ಪ್ರೌಢಶಾಲೆಯಲ್ಲಿ ಅಖಿಲ ಕರ್ನಾಟಕ ಮಿತ್ರ ಸಂಘದ ವತಿಯಿಂದ ಶನಿವಾರದಂದು ಏರ್ಪಡಿಸಲಾಗಿದ್ದ 68ನೇ ಕನ್ನಡ ರಾಜ್ಯೋತ್ಸವ, ಕರ್ನಾಟಕ ನಾಮಕರಣ ಸುವರ್ಣ ಮಹೋತ್ಸವ ಉತ್ಸವ 2023-24 , ಮಾಹಿತಿ ತಂತ್ರಜ್ಞಾನದ ಹಾಗೂ ಗುತ್ತಿಗೆದಾರರ ಮತ್ತು ಸಮಾಜಸೇವಕರ ಉತ್ಸವ ಕಾರ್ಯಕ್ರಮದಲ್ಲಿ ಉತ್ಸವ ಅಧ್ಯಕ್ಷರಾಗಿ ಅಭಿನಂದನೆ ಸ್ವೀಕರಿಸಿ ಮಾತನಾಡುತ್ತಿದ್ದರು.

ಕನ್ನಡ ಮನಸ್ಸುಗಳನ್ನು ಒಟ್ಟುಗೂಡಿಸುವ, ಸಮಾನತೆ ಮೂಡಿಸುವ, ವೇದಿಕೆಗಳು ಸಂಘ ಸಂಸ್ಥೆಗಳಿಂದ ನಿರ್ಮಾಣವಾಗಬೇಕಾಗಿದ್ದು ಕನ್ನಡ ಉಳಿಯಲು ಹೋರಾಟ ಅನಿವಾರ್ಯವಾಗಿದ್ದು ಇತ್ತೀಚೆಗೆ ಕರ್ನಾಟಕ ರಕ್ಷಣಾ ವೇದಿಕೆಯ ನಾರಾಯಣಗೌಡ ರವರುಗಳ ನೇತೃತ್ವದಲ್ಲಿ ನಡೆದ ಹೋರಾಟದಿಂದ ರಾಜ್ಯದಲ್ಲಿ ಎಲ್ಲಾ ನಾಮಫಲಕಗಳಲ್ಲಿಯೂ ಶೇ.60ರಷ್ಟು ಕನ್ನಡ ಕಡ್ಡಾಯ ಎಂಬ ಕಾನೂನನ್ನು ಸರ್ಕಾರ ಜಾರಿಗೊಳಿಸಿದೆ ಎಂದು ತಿಳಿಸಿದರು

ಅಖಿಲ ಕರ್ನಾಟಕ ಮಿತ್ರ ಸಂಘದ ರಾಜ್ಯಾಧ್ಯಕ್ಷರಾದ ಚಿ.ಮಾ ಸುಧಾಕರ್ ರವರು ಪ್ರಾಸ್ತಾವಿಕ ನುಡಿ ನುಡಿಯುತ್ತ ಸಂಘದ ವತಿಯಿಂದ ಸಾಧಕರುಗಳನ್ನು ಗುರುತಿಸುವ ಕೆಲಸ ಮಾಡಲಾಗುತ್ತಿದ್ದು ಇದರಿಂದ ಅವರು ತಮ್ಮ ತಮ್ಮ ಕ್ಷೇತ್ರದಲ್ಲಿ ಇನ್ನೂ ಉತ್ತಮ ಸಾಧನೆ ಮಾಡಲು ಪ್ರೋತ್ಸಾಹ ನೀಡಿದಂತಾಗುತ್ತದೆ ಎಂದು ತಿಳಿಸಿ, ಕರ್ನಾಟಕ ಮಿತ್ರ ಸಂಘದ ಸಂಸ್ಥಾಪಕ ಸದಸ್ಯರಾದ ಡಿ ಎಂ ರಾಮಕೃಷ್ಣಪ್ಪ ರವರು ಅನಾರೋಗ್ಯ ನಿಮಿತ್ತ ನಿಧನರಾದ ಕಾರಣ ಉತ್ಸವಾಧ್ಯಕ್ಷರುಗಳನ್ನು ಮೆರವಣಿಗೆಯಲ್ಲಿ ಕರೆತರಲು ಸಾಧ್ಯವಾಗಲಿಲ್ಲವೆಂದು ಡಿ ಎಂ ರಾಮಕೃಷ್ಣಪ್ಪ ರವರ ಆತ್ಮಕ್ಕೆ ಶಾಂತಿ ಸಿಗಲೆಂದು ತಿಳಿಸಿ, 27ರಂದು ಕುಂದಾಣ ಉತ್ಸವ ಏರ್ಪಡಿಸಲಾಗಿದ್ದು ಎಲ್ಲರೂ ಕುಂದಾಣ ಸ್ಥಳದ ಇತಿಹಾಸ ಅರಿಯುವ ಸಲುವಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ತಿಳಿಸಿದರು. ಉತ್ಸವಧ್ಯಕ್ಷರುಗಳಾಗಿ ಶಿಡ್ಲಘಟ್ಟ ತಾಲೂಕಿನ ಕಾಂಗ್ರೆಸ್ ಮುಖಂಡರಾದ ರಾಜೀವ್ ಗೌಡರ ತಂದೆ ವರದರಾಜು, ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಉತ್ಸವ ಅಧ್ಯಕ್ಷರಾಗಿ ಪಿಆರ್ ಚಂದನ್, ಕಾರ್ಮಿಕ ಗುತ್ತಿಗೆದಾರರ ಉತ್ಸವ ಅಧ್ಯಕ್ಷರಾಗಿ ಕ್ಯಾತೇಗೌಡರು ಉಪಸ್ಥಿತರಿದ್ದು, ಕಾರ್ಯಕ್ರಮದಲ್ಲಿ ನಾಗಮಂಗಲ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಎನ್ ಸಿ ಮುನಿವೆಂಕಟ್ರಮಣ,ಕರ್ನಾಟಕ ಮಿತ್ರ ಸಂಘದ ಪ್ರಧಾನ ಕಾರ್ಯದರ್ಶಿ ಮುನಿರಾಜು ಕನ್ನಡ ಧ್ವಜಾರೋಹಣ ನೆರವೇರಿಸಿದರು, ಬೆಂಗಳೂರು ಗ್ರಾಮಾಂತರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಚಂದ್ರಶೇಖರ್ ಹಡಪದ್, ರಾಷ್ಟ್ರಪ್ರಶಸ್ತಿ ವಿಜೇತ ಶಿಕ್ಷಕರಾದ ಡಾ. ಎಮ್ ಶಿವಕುಮಾರ್, ಭರತ್ ನಗರ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯ ಮುಖ್ಯೋಪಾಧ್ಯಾಯರಾದ ಎಂ. ಮುನಿ ಅಂಜನಪ್ಪ, ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

ಕರ್ನಾಟಕ ನಾಮಕರಣ ಸುವರ್ಣ ಮಹೋತ್ಸವ ಸ್ಮರಣಾರ್ಥ ಹಿರಿಯ ಸ್ಮರಣೀಯ ಸಾಧಕರ ಹೆಸರಿನಲ್ಲಿ ಹಿರಿಯ ರಂಗ ಕಲಾವಿದರಾದ ಎ.ಆರ್ ಶೇಷಗಿರಿ ರಾವ್, ರಾಜ್ಯ ಗಂಗಾಮತಸ್ಥರ ಸಂಘದ ನಿರ್ದೇಶಕರಾದ ಕಾರ್ಪೆಂಟರ್ ಎನ್ ಮುನಿರಾಜು, ನಾಗಮಂಗಲ ಎನ್ ಆರ್ ಶಿವಕುಮಾರ್, ಎಲೆ ಪಿ ಬಸವರಾಜು, ಕರಾಟೆ ಮುನೀಂದ್ರ, ಪೆಟ್ಟಿ ಅಂಗಡಿ ವ್ಯಾಪಾರಿಗಳಾದ ಎನ್ ವೀರಭದ್ರಪ್ಪ, ನಿವೃತ್ತ ಶಿಕ್ಷಕರಾದ ಧಾರ್ಮಿಕ ಚಿಂತಕರು ಆದ ಮುನಿರುದ್ರಪ್ಪ, ಕವಯಿತ್ರಿ ಭಾರತಿ ವಿಶ್ವನಾಥ್, ಮಹಾತ್ಮ ಪ್ರೌಢಶಾಲೆ ಮುಖ್ಯ ಶಿಕ್ಷಕರಾದ ಅಶ್ವತ್ ನಾರಾಯಣ್, ಭಾರತ್ ನಗರ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯ ಶಿಕ್ಷಕರುಗಳಾದ ಗುಲ್ಜಾರ್ ಫಾತೀಮಾ, ಸುಕನ್ಯ, ತಿಗಳ ವೈಭವ ಪತ್ರಿಕೆ ಸಂಪಾದಕರಾದ ಜಿ ಆರ್ ಮುನಿವೀರಣ್ಣ, ಮಹಾತ್ಮ ಪ್ರೌಢಶಾಲೆ ಅಧ್ಯಕ್ಷರಾದ ದೊಡ್ಡ ತತ್ತಮಂಗಲ ಅಪ್ಪಾಯಣ್ಣ ರವರುಗಳಿಗೆ ವಿವಿಧ ಸಾಧಕರ ಹೆಸರಿನಲ್ಲಿ ಪ್ರಶಸ್ತಿಗಳನ್ನು ನೀಡಲಾಯಿತು.



# ಬಡ ಮಕ್ಕಳ ಶಿಕ್ಷಣಕ್ಕೆ ಸಹಕಾರ

**ಚನ್ನಪಟ್ಟಣ** : ನಗರದ 12ನೇ ಕ್ರಾಸ್ ಬಿ ಎಂ ರಸ್ತೆ ಮಂಗಳವಾರ ಪೇಟೆಯಲ್ಲಿರುವ ವೆಬ್ ಸ್ಟರ್ ಇಂಟರ್ನ್ಯಾಷನಲ್ ಶಾಲೆಯಲ್ಲಿ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಶಾಲಾ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಟೌನ್ ಸಬ್ ಇನ್ಸ್ಪೆಕ್ಟರ್ ಹರೀಶ್, ಸ್ಥಳೀಯ ಪೋಷಕರು ಶಾಲೆಯ ಗುಣಮಟ್ಟವನ್ನು ನೋಡಬೇಕೆ ವಿನಃ ಅತಿ ಹೆಚ್ಚು ಫೀ ತೆಗೆದುಕೊಳ್ಳುವ ಶಾಲೆಗಳನ್ನು ಗುಣಮಟ್ಟದ ಶಾಲೆಗಳೆಂದು ಗುರುತಿಸಬಾರದು ಈ ಶಾಲೆ ಒಳ್ಳೆಯ ವಾತಾವರಣದಲ್ಲಿ ನಗರದ ಹೃದಯ ಭಾಗದಲ್ಲಿದ್ದು ಸ್ಥಳೀಯ ನಾಗರಿಕರು ಈ ಶಾಲೆಯ ವಿದ್ಯಾಭ್ಯಾಸವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ತಿಳಿಸಿದರು ಜೊತೆಗೆ ಅತ್ಯಂತ ಕಡುಬಡವರಿದ್ದಲ್ಲಿ ಅಂತಹ ಮಕ್ಕಳ ವಿದ್ಯಾಭ್ಯಾಸಕ್ಕೆ ತಾವು ಸಹಕಾರ ನೀಡುವುದಾಗಿ ತಿಳಿಸಿದರು ನಾಗರಿಕರು ಸಂಚಾರಿ ನಿಯಮವನ್ನು ಕಡ್ಡಾಯವಾಗಿ ಪಾಲಿಸಬೇಕೆಂದು ಸಹ ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಒಕ್ಕಲಿಗ ಸಂಘದ ನಿರ್ದೇಶಕರಾದ ಶ್ರೀಯುತ ವೆಂಕಟರಾಮೇಗೌಡ ಮಾತನಾಡುತ್ತಾ ಈ ಶಾಲೆಯು 2007 ರಿಂದ ಉತ್ತಮ ಶಿಕ್ಷಣವನ್ನು ನೀಡುತ್ತಾ ಬರುತ್ತಿದೆ ಈ ಶಾಲೆ ಉತ್ತಮ ಮಟ್ಟದ ವಿದ್ಯಾಭ್ಯಾಸವನ್ನು ನೀಡುತ್ತಿದ್ದು ಈ ಸಂಸ್ಥೆಯ ಗೌರವಾಧ್ಯಕ್ಷರಾಗಿ ನಾನು ಸೇವೆ ಸಲ್ಲಿಸುತ್ತಿರುವುದು ಒಂದು ಸುದೈವ ಎಂದು ಭಾವಿಸುತ್ತೇನೆ ಶಾಲಾ ಪೋಷಕರು ಮತ್ತು ನಾಗರಿಕರು ಒಕ್ಕಲಿಗ ಸಂಘದ ವಿದ್ಯಾಭ್ಯಾಸ ಮತ್ತು ಆಸ್ಪತ್ರೆಗೆ ಸಂಬಂಧಪಟ್ಟಂತೆ ತಮಗೆ ಸಮಸ್ಯೆಗಳಿದ್ದಲ್ಲಿ ತಮ್ಮನ್ನು ಸಂಪರ್ಕಿಸುವಂತೆ ಕೇಳಿಕೊಂಡರು ಈ ಶಾಲೆಗೆ 18 ವರ್ಷಗಳ ಇತಿಹಾಸವನ್ನು ಹೊಂದಿದ್ದು ಈ ಭಾಗದಲಿ ಕಡಿಮೆ ವೆಚ್ಚದಲ್ಲಿ ವಿದ್ಯಾಭ್ಯಾಸನೀಡುತ್ತಿರುವುದು ಒಂದು ಸಾರ್ವಜನಿಕ ಸೇವೆಯಾಗಿದೆ ಎಂದು ನಾನು ಭಾವಿಸುತ್ತೇನೆ.



ಕಾರ್ಯಕ್ರಮದಲ್ಲಿ ವಿಶೇಷವಾಗಿ ಗಟ್ಟಿಮೇಳ ಕಿರುತೆರೆ ನಟಿ ಭಾಗವಹಿಸಿ ಪೋಷಕರನ್ನು ಕುರಿತು ಮಾತನಾಡುತ್ತಾ ಸ್ಥಳೀಯರು ಹೆಚ್ಚು ಹೆಚ್ಚಾಗಿ ಕಿರುತರೆ ಧಾರಾವಾಹಿಗಳನ್ನು ನೋಡುವುದರ ಮೂಲಕ ನಮ್ಮಂತ ಕಿರುತರೆ ನಟಿಯರನ್ನ ಪ್ರೋತ್ಸಾಹಿಸಬೇಕೆಂದು ತಿಳಿಸಿದರು

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿಗಳಾದ ಪಟೇಲ್ ಸಿರಾಜುರವರು ಮಾತನಾಡುತ್ತಾ ಸ್ಥಳೀಯ ಭಾಗದಲ್ಲಿ ಆಂಗ್ಲ ಮಾಧ್ಯಮ ಶಾಲೆಯ ಸಮಸ್ಯೆ ತಲೆದೋರಿದ್ದು ಆಗ ಸ್ಥಳೀಕರಾಗಿ ನಾವುಗಳು ಈ ಸಂಸ್ಥೆಯನ್ನು 2007 ರಿಂದ ಪ್ರಾರಂಭಿಸಲಾಗಿದೆ ಆದುದರಿಂದ ಚನ್ನಪಟ್ಟಣ ತಾಲೂಕಿನ ನಾಗರಿಕರು ಮತ್ತು ಸ್ಥಳೀಯ ಪೋಷಕರು ಈ ಶಾಲೆಯವರೆಗೆ ಮಕ್ಕಳನ್ನು ಸೇರಿಸುವುದರ ಮೂಲಕ ತಮ್ಮ ಕರ್ತವ್ಯ ಮೆರೆಯಬೇಕೆಂದು ತಿಳಿಸಿದರು ಶಾಲೆಯಲ್ಲಿ ಮಕ್ಕಳಿಗೆ ವಿವಿಧ ಪಠ್ಯೇತರ ಚಟುವಟಿಗಳಾದ ಪ್ರತಿಭಾಕಾರಂಜಿಯಲ್ಲಿ ಶಾಲೆ ಎಲ್ಲಾ ಮಟ್ಟದಲ್ಲಿ ಹೆಸರು ಮಾಡಿರೋದು ಒಂದು ವಿಶೇಷ ಎಂದು ತಿಳಿಸಿದರು ನುರಿತ ಶಿಕ್ಷಕರು ಮತ್ತು ಉಪಾಧ್ಯಾಯ ವೃಂದ ಉತ್ತಮವಾಗಿ ಶಾಲೆಯಲ್ಲಿ ನಿರಂತರವಾಗಿ ತಮ್ಮ ಕರ್ತವ್ಯವನ್ನು ಎಂದು ತಿಳಿಸಿದರು.

ಶಿಕ್ಷಣ ಇಲಾಖೆಯಿಂದ ಭಾಗವಹಿಸಿದ್ದ ಇ ಸಿ ಓ ಗಂಗಾಧರ್ ಅವರು ಮಕ್ಕಳನ್ನು ಮತ್ತು ಸಾರ್ವಜನಿಕರನ್ನು ಹಾಗೂ ಪೋಷಕರನ್ನು ಕುರಿತು ಶಾಲೆಯ ಅಭಿವೃದ್ಧಿ ಬಗ್ಗೆ ತಿಳಿಸಿದರು ಜೊತೆಗೆ ಈ ಭಾಗದಲ್ಲಿ ಉತ್ತಮ ವಿದ್ಯಾಭ್ಯಾಸ ನೀಡುತ್ತಿರುವ ಒಂದು ವಿದ್ಯಾ ಸಂಸ್ಥೆ ಆಗಿದೆ ಎಂದು ಪ್ರಸಂಸಿದರು.

ವೇದಿಕೆ ಮೇಲೆ ವಿವಿಧ ಗಣ್ಯರುಗಳಾದಂತ ನೇಗಿಲ ಯೋಗಿ ಸಮಾಜ ಸೇವಾ ಟ್ರಸ್ಟ್ ತಾಲೂಕು ಅಧ್ಯಕ್ಷರಾದ ಧರಣೇಶ್ ಕುಮಾರ್ ಖಜಾಂಚಿ ತಿಪರೇಗೌಡ, ಮೌಂಟ್ ಕಾರ್ಮೆಲ್ ಸ್ಕೂಲ್ ಕಾರ್ಯದರ್ಶಿ ರಮೇಶ್ ಗೌಡ, ಚಕ್ಕೆರೆ ಯೋಗೀಶ್ ಎಂಡಿ ಶಿವಕುಮಾರ್, ಶಾಲೆಯ ನಿರ್ದೇಶಕರಾದ ಶಿವಕುಮಾರ್ ಕೆಎಸ್ ಇತರರು ಭಾಗವಹಿಸಿದ್ದರು.

ಶಾಲೆಯ ಎಲ್ಲಾ ಕಾರ್ಯಕ್ರಮಗಳನ್ನು ಸಂಸ್ಥೆಯ ಮುಖ್ಯಸ್ಥರಾದ ಪ್ರದೀಪ್ ಕುಮಾರ್ ರವರು ಆಯೋಜಿಸಿದ್ದು ಶಾಲಾ ಮಕ್ಕಳಿಗೆ ವಿವಿಧ ಕ್ರೀಡೆಗಳಲ್ಲಿ ಜೈ ಗಳಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಗಿತ್ತು ಜೊತೆಗೆ ಹಾಲಿಯಲ್ಲಿ ಅತ್ಯುತ್ತಮ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಅವರಿಗೆ ಪ್ರಶಸ್ತಿ ನೀಡಲಾಯಿತು ಅಂಚುಮವಾಗಿ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಮನೋರಂಜನ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು

# ಮೈಸೂರಿಗೆ ಸರಬರಾಜಾಗುವ ವಾಟರ್ ಪೈಪ್ ಲೈನ್ ಗೇ ಕನ್ನ

**ಮೈಸೂರು:** ಮೊದಲೇ ರಾಜ್ಯದೆಲ್ಲೆಡೆ ಬರ ತಾಂಡವವಾಡುತ್ತಿದ್ದು ಕುಡಿಯಲೂ ನೀರಿಲ್ಲ. ನಗರಾಡಳಿತ ಸಂಸ್ಥೆಗಳು ಎಲ್ಲಿಂದ ನೀರು ಒದಗಿಸುವುದು ಎಂದು ತಲೆ ಮೇಲೆ ಕೈ ಹೊತ್ತು ಕೂತಿವೆ. ಪರಿಸ್ಥಿತಿ ಹೀಗಿರುವಾಗ ಮೈಸೂರು ನಗರಕ್ಕೆ ಪ್ರತಿನಿತ್ಯ ಸರಬರಾಜು ಆಗುವ 305 ಎಂಎಲ್‌ಡಿ ನೀರಿನಲ್ಲಿ 20 ಎಂಎಲ್‌ಡಿ ನೀರಿನ ಲೆಕ್ಕಾಚಾರವೇ ಸಿಗುತ್ತಿಲ್ಲ. ಇದರಿಂದ ಪಾಲಿಕೆಗೂ ಶೇ 35ರಷ್ಟು ಕಂದಾಯ ನಷ್ಟವಾಗುತ್ತಿದೆ. 20000ಕ್ಕೂ ಅಧಿಕ ಅಕ್ರಮ ಸಂಪರ್ಕ ಇದೆ ಎಂದು ಹೇಳಲಾಗುತ್ತಿದ್ದು, ಪೈಪ್ ಲೈನ್ಒ ಡೆದು ಕೃಷಿಗೂ ಅಕ್ರಮವಾಗಿ ಬಳಸಲಾಗುತ್ತಿದೆ ಎಂಬ ಆರೋಪವೂ ಇದೆ. ನಗರಕ್ಕೆ ನಿತ್ಯವೂ ಹೊಂಗಳ್ಳಿ, ಮೇಳಾಪುರ, ಬೆಳಗೊಳ ಪಂಪಿಂಗ್ ಕೇಂದ್ರಗಳಿಂದ ಒಟ್ಟು 305 ಎಂಎಲ್‌ಡಿ ನೀರು ಬರುತ್ತಿದೆ. ಇದರಲ್ಲಿ 250 ಎಂಎಲ್‌ಡಿ ನೀರು ಮೈಸೂರು ನಗರಕ್ಕೆ ಬೇಕಾಗುತ್ತದೆ. ನಗರ ಹೊರಹೊಲಯದ ಕೆಲ ಬಡಾವಣೆಗಳು, ಗ್ರಾಮಗಳು, ಕೈಗಾರಿಕೆ ಪ್ರದೇಶಗಳು, ಡಿಸ್ಟ್ರಿಬ್ಯೂಷನ್ ಲಾಸ್‌ಗೆ 50 ಎಂಎಲ್‌ಡಿ ಸೇರಿ 300 ಎಂಎಲ್‌ಡಿ ನೀರು ಬಳಕೆಯಾಗುತ್ತಿದೆ. ಆದರೆ, ಹೀಗೆ ವಿತರಣೆಯಾಗುವ ನೀರಿನಲ್ಲಿ ಸುಮಾರು 20 ಎಂಎಲ್‌ಡಿ ನೀರು ನಿಖರವಾಗಿ ಎಲ್ಲಿಗೆ ಬಳಕೆಯಾಗುತ್ತಿದೆ ಎಂಬ ಲೆಕ್ಕವೇ ಸಿಗುತ್ತಿಲ್ಲ. ಇದರಿಂದ ಪಾಲಿಕೆಗೆ ಇಷ್ಟು ಪ್ರಮಾಣದ ನೀರಿನ ಬಿಲ್ ನಷ್ಟವಾಗುತ್ತಿದೆ.



### 20 ಸಾವಿರ ಸಂಪರ್ಕಗಳ ಲೆಕ್ಕವಿಲ್ಲ

**ಅಂದಾಜು 20 ಸಾವಿರ ಅಕ್ರಮ ಸಂಪರ್ಕಗಳಿವೆ. ಕೆಲವೆಡೆ ಮೀಟರ್ ಸ್ಥಗಿತಗೊಂಡಿವೆ. ಮತ್ತಷ್ಟು ಕಡೆಗಳಲ್ಲಿ ಮೀಟರ್ ಅಳವಡಿಸಿಲ್ಲ. ಇದೇ ಕಾರಣಕ್ಕೆ ನಗರದಲ್ಲಿಎಷ್ಟು ಪ್ರಮಾಣದ ನೀರು ಬೇಕಿದೆ ಎಂಬ ನಿಖರವಾದ ಮಾಹಿತಿ ಸಿಗುತ್ತಿಲ್ಲ. ಹೀಗಾಗಿ ಎಲ್ಲ ಮನೆಗಳಿಗೂ ಮೀಟರ್ ಅಳವಡಿಸುವ ಕಾರ್ಯಕ್ಕೆ ಮುಂದಾಗಿದ್ದರೂ ಅದು ಸಮರ್ಪಕವಾಗಿ ನಡೆಯುತ್ತಿಲ್ಲ. ಇದರಿಂದ ಕುಡಿಯುವ ನೀರಿನ ಕೊರತೆಯನ್ನು ಸಮರ್ಪಕವಾಗಿ ಅಂದಾಜಿಸಿ ಒಂದು ವೇಳೆ ಕೊರತೆ ಇದ್ದರೆ ನಾನಾ ಯೋಜನೆಗಳನ್ನು ತಂದು ಅದನ್ನು ಸರಿಪಡಿಸುವ ಕೆಲಸಕ್ಕೂ ಅಡ್ಡಿಯಾಗುತ್ತಿದೆ.**

### ಶೇ 35ರಷ್ಟು ನೀರಿಗೆ ಕಂದಾಯವಿಲ್ಲ

**ನಗರಕ್ಕೆ ನಿತ್ಯವೂ ಸರಬರಾಜಾಗುವ 305 ಎಂಎಲ್‌ಡಿ ನೀರಿನಲ್ಲಿ ಶೇ 65ರಷ್ಟು ನೀರಿಗೆ ಮಾತ್ರ ಕಂದಾಯ ಸಂಗ್ರಹವಾಗುತ್ತಿದೆ. ಇನ್ನುಳಿದ ಅಂದಾಜು ಶೇ 35ರಷ್ಟು ನೀರಿಗೆ ಬಿಲ್ ಪಾವತಿಯಾಗುತ್ತಿಲ್ಲ. ಹೀಗಾಗಿ ಇಷ್ಟು ಪ್ರಮಾಣದ ನೀರಿನಲ್ಲಿ ಎಷ್ಟು ವ್ಯರ್ಥವಾಗಿ ಹರಿದು ಹೋಗುತ್ತಿದೆಯೇ? ಎಲ್ಲಾದರೂ ಲೀಕೇಜ್ ಇದೆಯೇ? ಅಕ್ರಮ ಸಂಪರ್ಕಕ್ಕೆ ಬಳಕೆಯಾಗುತ್ತಿದೆಯೇ? ಎಂಬುದನ್ನು ಪತ್ತೆ ಮಾಡಬೇಕಿದೆ. ಆದರೆ, ಪಾಲಿಕೆಯಿಂದ ಈ ಕೆಲಸ ಸಮರ್ಪಕವಾಗಿ ನಡೆಯುತ್ತಿಲ್ಲ. ಹೊಂಗಳ್ಳಿಯಿಂದ ಮೈಸೂರಿಗೆ ನೀರು ತರುವ ಕೊಳವೆ ಮಾರ್ಗವೂ ಹಳೇ ಮಾದರಿಯದ್ದಾಗಿದೆ. ಈ ಪೈಪ್‌ಲೈನ್ ಹೊಲ ಗದ್ದೆಗಳ ನಡುವೆ ಹಾದುಹೋಗುತ್ತದೆ. ಇಂತಹ ಕಡೆಗಳಲ್ಲಿ ಕೆಲವರು ಪೈಪ್‌ಲೈನ್ ಒಡೆದು ಅದರಿಂದ ಬರುವ ನೀರನ್ನು ಕೃಷಿಗೆ ಬಳಕೆ ಮಾಡುತ್ತಾರೆ. ಈ ಕಾರಣಕ್ಕೆ ಕುಡಿಯುವ ನೀರು ಪೋಲಾಗುತ್ತಿದೆ**

## ಡ್ರಮ್‌ನಲ್ಲಿ ತುಂಡು, ತುಂಡಾಗಿ ವೃದ್ಧೆಯ ಮೃತದೇಹ ಪತ್ತೆ

**ಬೆಂಗಳೂರು:** ನಗರದಲ್ಲಿ ವೃದ್ದೆಯೊಬ್ಬರವನ್ನು ಭೀಕರವಾಗಿ ಹತ್ಯೆ ಮಾಡಲಾಗಿದೆ. ಶವವನ್ನು ಐದು ತುಂಡುಗಳಾಗಿ ಕತ್ತರಿಸಿ ಪ್ಲಾಸ್ಟಿಕ್ ಡ್ರಮ್‌ನಲ್ಲಿ ತುಂಬಿದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಕೆಆರ್ ಪುರಂ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಭಾನುವಾರ ಈ ಪ್ರಕರಣ ವರದಿಯಾಗಿದೆ. ಮೃತರನ್ನು ಸುಶೀಲಮ್ಮ (65) ಎಂದು ಗುರುತಿಸಲಾಗಿದೆ. ಸಂಜೆ 5 ಗಂಟೆ ಸುಮಾರಿಗೆ ಡ್ರಮ್‌ನಿಂದ ದುರ್ವಾಸನೆ ಬರಲಾರಂಭಿಸಿದ ಹಿನ್ನೆಲೆಯಲ್ಲಿ ಸಮೀಪದ ನಿವಾಸಿಗಳು ಅದನ್ನು ಪರಿಶೀಲಿಸಿದಾಗ ದೇಹದ ಮೇಲ್ಭಾಗವು ಹಾಗೇ ಇದ್ದು, ಕೈಗಳು ಮತ್ತು ಕಾಲುಗಳನ್ನು ನಿಖರವಾಗಿ ಕತ್ತರಿಸಲ್ಪಟ್ಟಿದ್ದವು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಶನಿವಾರ ಸಂಜೆ ಮತ್ತು ಮಧ್ಯರಾತ್ರಿಯ ನಡುವೆ ಮಹಿಳೆಯನ್ನು ಕೊಲೆ ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ಶಂಕೆ ವ್ಯಕ್ತಪಡಿಸಿವೆ. ಕೆಆರ್ ಪುರಂನ ನಿಸರ್ಗ ಲೇಔಟ್‌ನಲ್ಲಿರುವ ತಮ್ಮ ಮನೆಯಲ್ಲಿ ಶನಿವಾರ ಬೆಳಗ್ಗೆ ಸುಶೀಲಮ್ಮ ತಮ್ಮ ಮಗಳೊಂದಿಗೆ ಕೊನೆಯ ಬಾರಿಗೆ ಕಾಣಿಸಿಕೊಂಡಿದ್ದರು. ಸುಶೀಲಮ್ಮ ಮನೆಯವರಿಗೆ ತಿಳಿಸದೆ ಸ್ವಲ್ಪ ಹೊತ್ತು ಮನೆ ಬಿಟ್ಟು ನಂತರ ವಾಪಸ್ಸಾಗುವ ಅಭ್ಯಾಸ ಹೊಂದಿದ್ದರು. ಶನಿವಾರ ಅವರು ಕಣ್ಮರೆಯಾದಾಗ , ಅದೇ ರೀತಿ ಇರಬಹುದೆಂದು ಕುಟುಂಬಸ್ಥರು ಅಂದುಕೊಂಡಿದ್ದರು ಎಂದು ಪೊಲೀಸ್ ತನಿಖೆಯಿಂದ ತಿಳಿದುಬಂದಿದೆ. ಕುಟುಂಬ ಸದಸ್ಯರನ್ನು ವಿಚಾರಣೆ ನಡೆಸಿದ್ದೇವೆ, ಆದರೆ ಈ ಹಂತದಲ್ಲಿ ಯಾವುದೇ ತೀರ್ಮಾನಗಳನ್ನು ತೆಗೆದುಕೊಳ್ಳಲಾಗುವುದಿಲ್ಲ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಕೆಆರ್ ಪುರಂ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮೃತ ಮಹಿಳೆ ಬಿಜೆಪಿ ಕಾರ್ಯಕರ್ತೆ: ಮೃತ ಮಹಿಳೆ ಬಿಜೆಪಿ ಕಾರ್ಯಕರ್ತೆ ಎಂಬುದು ತನಿಖೆ ವೇಳೆ ತಿಳಿದುಬಂದಿದ್ದು, ಹತ್ಯೆ ಸಂಬಂಧ ಇಬ್ಬರನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

## ದೇವಾಲಯದ ಹಣ ಸರ್ಕಾರದ ಒಳ್ಳೆಯ ಕೆಲಸಕ್ಕೆ ಉಪಯೋಗವಾಗುತ್ತಿದೆ: ಬಿಜೆಪಿ ವಿರುದ್ಧ ಅರ್ಚಕರ ಸಂಘ ಕಿಡಿ

ಬೆಂಗಳೂರು: ದೇವಾಲಯಗಳ ಹಣ ಒಳ್ಳೆಯ ಕೆಲಸಗಳಿಗೆ ಬಳಸಿಕೊಳ್ಳಲಾಗುತ್ತಿದ್ದು ಚುನಾವಣಾ ಹತ್ತಿರ ಬರುತ್ತಿದಂತೆ ಬಿಜೆಪಿಯವರು ಭಾವನೆಗಳ ಮೇಲೆ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಅರ್ಚಕರ ಸಂಘ ಕಿಡಿಕಾರಿದೆ. ಧರ್ಮದಾಯ ದತ್ತಿಗಳ ತಿದ್ದುಪಡಿ ಮಸೂದೆಯನ್ನು ಬಿಜೆಪಿ ವಿರೋಧಿಸುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಆಗಮಿಕರು ಹಾಗೂ ಅರ್ಚಕರ ಸಂಘ ಸುದ್ದಿಗೋಷ್ಠಿ ನಡೆಸಿತು. ಅರ್ಚಕರ ಸಂಘದ ಪ್ರಧಾನ ಸಲಹೆಗಾರ ರಾಧಾಕೃಷ್ಣ ಮಾತನಾಡಿ, ರಾಜ್ಯದ ಎ ದರ್ಜೆಯ ದೇವಾಲಯಗಳ ಬಗ್ಗೆ ಅಪಪ್ರಚಾರ ನಡೆಯುತ್ತಿದೆ. ಕಾಂಗ್ರೆಸ್ ಸರ್ಕಾರದಿಂದ ದೇವಾಲಯಗಳ ಅಭಿವೃದ್ಧಿ ಕೆಲಸ ಮಾಡುತ್ತಿದೆ. ಎ ದರ್ಜೆಯ ದೇವಸ್ಥಾನಗಳಲ್ಲಿ ನೂರಾರು ಕೋಟಿ ವ್ಯವಹಾರ ನಡೆಯುತ್ತಿದೆ. ಈ ಅಭಿವೃದ್ಧಿ ಸಹಿಸಲಾಗದೇ ಬಿಜೆಪಿ ಈ ರೀತಿಯ ಕೆಲಸ ಮಾಡುತ್ತಿದೆ ಎಂದು ದೂರಿದರು. ಚರ್ಚ್, ಮಸೀದಿಗಳಿಗೆ ಹಣ ಹೋಗುತ್ತಿದೆ ಎಂದು ಬಿಜೆಪಿ ಅಪಪ್ರಚಾರ ಮಾಡುತ್ತಿದೆ. ಹಿಂದೂ ಧರ್ಮವನ್ನು ಎತ್ತಿ ಹಿಡಿಯುವ ಕೆಲಸ ಎ ದರ್ಜೆಯ ದೇವಸ್ಥಾನಗಳಲ್ಲಿ ಆಗುತ್ತಿದೆ. ನಿತ್ಯವೂ ಕೋಟ್ಯಂತರ ರೂ. ಹಣ ಸಂಗ್ರಹಣೆ ಆಗುತ್ತಿದ್ದು ಇದನ್ನು ಬಿಜೆಪಿ ಸಹಿಸುತ್ತಿಲ್ಲ. ಇದೇ ಕಾರಣ ಇಟ್ಟುಕೊಂಡು ಚರ್ಚ್, ಮಸೀದಿಗಳಿಗೆ ಹೋಗುತ್ತಿದೆ ಎಂಬ ಅಪಪ್ರಚಾರ ನಡೆಯುತ್ತಿದೆ. ದೇವಸ್ಥಾನಗಳನ್ನ ರಾಜಕೀಯಕ್ಕೆ ಎಳೆಯುವುದನ್ನ ಬಿಡಿ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪ್ರಧಾನ ಕಾರ್ಯದರ್ಶಿ ಕೆಎಸ್‌ಎಸ್ ದೀಕ್ಷಿತ್ ಮಾತನಾಡಿ, ನಾವು ಪ್ರತಿ ಬಿಜೆಪಿಯವರ ಮನೆಗೆ ಹೋಗಿ ಪತ್ರಗಳನ್ನ ಕೊಟ್ಟು ಕಾಲಿಗೆ ಬಿದ್ದು ವಿರೋಧ ಮಾಡಬೇಡಿ ಎಂದು ಕೇಳಿಕೊಳ್ಳುತ್ತೇವೆ. ನಾವು ಯಾವುದೇ ಪ್ರತಿಭಟನೆ ಮಾಡುವುದಿಲ್ಲ. ನೇರವಾಗಿ ಭೇಟಿ ಮಾಡಿಯೇ ಮನವಿ ಮಾಡಿಕೊಳ್ಳುತ್ತೇವೆ ಎಂದು ಹೇಳಿದರು.

ಸಂಘ ಹೇಳಿದ್ದೇನು?: ರಾಜ್ಯದಲ್ಲಿ 50 ವರ್ಷದಿಂದ ಹೋರಾಟ ನಡೆಸುತ್ತಿದ್ದು 42 ಸಾವಿರ ದೇವಾಲಯಗಳು ಬೀದಿ ಪಾಲಾಗಿದ್ದವು. ಅದಕ್ಕೆ ಪರಿಹಾರವಾಗಿ ತಸ್ತಿಕ್ ನೀಡಲಾಗುತ್ತಿದೆ. ನಾವೂ ಆ ಹಣದಲ್ಲಿ ದೇವಾಲಯದ ಪೂಜೆಗಳನ್ನು ಮಾಡಬೇಕು. ರಾಮಲಿಂಗಾ ರೆಡ್ಡಿ ನಮ್ಮ ಹಲವು ಬೇಡಿಕೆ ಈಡೇರಿಸಿದ್ದಾರೆ. ಈ ಹಿಂದಿನ ಸರ್ಕಾರ ನಮಗೆ ತಸ್ತಿಕ್ ಕೊಟ್ಟಿರಲಿಲ್ಲ. ಆದರೆ ಹೊಸ ಸರ್ಕಾರ ಬಂದ ತಕ್ಷಣ ಬೇಡಿಕೆ ಈಡೇರಿದೆ. ದೇವಾಲಯದ ಹಣ ಯಾರ ಹುಂಡಿಗೂ ಸೇರುತ್ತಿಲ್ಲ. ದೇವಾಲಯದ ಒಂದು ರೂಪಾಯಿ ಕೂಡ ಬೇರೆ ಧರ್ಮಕ್ಕೆ, ಚರ್ಚ್ ಮಸೀದಿಗೆ ಹೋಗುತ್ತಿಲ್ಲ. ನೂರಾರು ಕೋಟಿ ಚರ್ಚ್, ಮಸೀದಿಗೆ ಹೋಗುತ್ತಿದೆ ಎಂದು ಅಪಪ್ರಚಾರ ಮಾಡಲಾಗುತ್ತಿದೆ.

## ಹೈಕಮಾಂಡ್ ವಿರುದ್ಧ ಉಗ್ರಪ್ಪ ಅಸಮಾಧಾನ

**ಬಳ್ಳಾರಿ:** ರಾಜ್ಯ ರಾಜಕೀಯದಲ್ಲಿ ಗಮನ ಸೆಳೆದಿರುವ ಬಳ್ಳಾರಿ ಜಿಲ್ಲೆಯಲ್ಲಿ ಲೋಕಸಭಾ ಚುನಾವಣೆ ಕಾವು ರಂಗೇರುತ್ತಿದೆ. ಚುನಾವಣೆ ಘೋಷಣೆಗೂ ಮುನ್ನವೇ ಪಕ್ಷಗಳ ಸಾಧನೆ ಪಟ್ಟಿ ಹಿಡಿದು ಆಯಾ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಲು ನಾಯಕರು, ಮುಖಂಡರು ತೆರೆಮರೆಯಲ್ಲಿ ಸಿದ್ಧತೆ ನಡೆಸುತ್ತಿದ್ದಾರೆ. ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಿಂದ ಆಕಾಂಕ್ಷಿಗಳ ಸಂಖ್ಯೆ ಹೆಚ್ಚಾಗಿದ್ದು, ಶಾಸಕರ ಪುತ್ರಿ, ಸಚಿವರ ಸಹೋದರ, ಮಾಜಿ ಸಂಸದರು, ಕಾಂಗ್ರೆಸ್ ನಾಯಕರು ಸೇರಿ ಅನೇಕರು ಟಿಕೆಟ್‌ಗಾಗಿ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಇನ್ನಿಲ್ಲದ ಲಾಬಿಯಲ್ಲಿ ನಿರತರಾಗಿದ್ದಾರೆ. ಕಳೆದ ಎರಡು ದಿನಗಳ ಹಿಂದೆ ಹಾಲಿ ಶಾಸಕ ಈ ತುಕಾರಾಂ ಅವರು ಹೊಸ ದಾಳ ಉರುಳಿಸಿದ್ದು, ನನಗೆ ಹೈಕಮಾಂಡ್ ಟಿಕೆಟ್ ಕೊಡುವುದಾಗಿ ಹೇಳಿದೆ. ಆದರೆ ನಾನು, ನನಗೆ ಬೇಡ ನನ್ನ ಮಗಳಿಗೆ ಟಿಕೆಟ್ ನೀಡಿ ಎಂದು ಮನವಿ ಮಾಡಿರುವೆ. ಅಲ್ಲದೆ ಕಾಂಗ್ರೆಸ್ ನಡೆಸಿದ ಪ್ರತಿ ಸಮೀಕ್ಷೆಯಲ್ಲಿ ನನ್ನ ಪರವಾದ ಒಲವು ಮೂಡಿದೆ, ಹೀಗಾಗಿ ನನಗೆ ಹೈಕಮಾಂಡ್ ಟಿಕೆಟ್ ಫೈನಲ್ ಮಾಡಿದೆ ಎಂದಿದ್ದಾರೆ.

# ರಾಗಿ ಹೆಲ್ತ್ ಮಿಕ್ಸ್ ಬೆರೆಸಿ ವಿತರಿಸುವ ಯೋಜನೆಗೆ ಚಾಲನೆ

**ಚಾಮರಾಜನಗರ:** ಮಧ್ಯಾಹ್ನದ ಬಿಸಿಯೂಟ ಯೋಜನೆಯ ಭಾಗವಾಗಿ, ವಾರದಲ್ಲಿ ಮೂರು ದಿನ ಬಿಸಿ ಹಾಲಿನೊಂದಿಗೆ ರಾಗಿ ಹೆಲ್ತ್ ಮಿಕ್ಸ್ (ರಾಗಿ ಮಾಲ್ಟ್) ಬೆರೆಸಿ ವಿತರಿಸುವ ಯೋಜನೆಗೆ ಜಿಲ್ಲೆಯಾದ್ಯಂತ ಚಾಲನೆ ಸಿಕ್ಕಿದೆ.

ಚಿಕ್ಕಬಳ್ಳಾಪುರದ ಸತ್ಯಸಾಯಿ ಅನ್ನಪೂರ್ಣ ಟ್ರಸ್ಟ್ ರಾಗಿ ಹೆಲ್ತ್ ಮಿಕ್ಸ್ ಪೂರೈಸುತ್ತದೆ. ಸರ್ಕಾರಿ ಮತ್ತು ಅನುದಾನಿತ ಶಾಲೆಗಳ 1ರಿಂದ 10ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಸೋಮವಾರ, ಬುಧವಾರ ಮತ್ತು ಶುಕ್ರವಾರದಂದು ಹಾಲಿನೊಂದಿಗೆ ರಾಗಿ ಹೆಲ್ತ್ ಮಿಕ್ಸ್ ಬೆರೆಸಿ ನೀಡಲಾಗುತ್ತದೆ.

ಒಬ್ಬ ವಿದ್ಯಾರ್ಥಿಗೆ ಪ್ರತಿ ದಿನಕ್ಕೆ 5 ಗ್ರಾಂನಷ್ಟು ನೀಡಬೇಕು ಎಂದು ಸರ್ಕಾರ ನಿಗದಿ ಮಾಡಿದೆ. ಅ ಪ್ರಮಾಣವನ್ನೇ ಪರಿಗಣಿಸಿ ವಾರದಲ್ಲಿ ಮೂರು ದಿನ ನೀಡಲಾಗುತ್ತದೆ. ಜಿಲ್ಲೆಯಲ್ಲಿ 73,668 ವಿದ್ಯಾರ್ಥಿಗಳಿಗೆ ಇದರ ಪ್ರಯೋಜನ ಸಿಗಲಿದೆ. ಗುರುವಾರ ರಾಜ್ಯ ಮಟ್ಟದಲ್ಲಿ ಈ ಯೋಜನೆಗೆ ಚಾಲನೆ ಸಿಕ್ಕಿದ್ದು, ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲೂ ಆರಂಭಿಸಲಾಗಿದೆ' ಎಂದು ಜಿಲ್ಲಾ ಅಕ್ಷರ ದಾಸೋಹ ಅಧಿಕಾರಿ ಗುರುಲಿಂಗಯ್ಯ ತಿಳಿಸಿದರು.

ನಗರದಲ್ಲಿ ಚಾಲನೆ:ಜಿಲ್ಲಾ ಮಟ್ಟ ಹಾಗೂ ಚಾಮರಾಜನಗರ ತಾಲ್ಲೂಕು ಮಟ್ಟದ ಉದ್ಘಾಟನಾ ಕಾರ್ಯಕ್ರಮ ಸಂತೇಮರಹಳ್ಳಿ ರಸ್ತೆಯಲ್ಲಿರುವ ಉಪ್ಪಾರ ಬೀದಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ನಡೆಯಿತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ತಾಲ್ಲೂಕು ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪೂರ್ಣಿಮಾ, 'ಶಾಲಾ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಕೊಡುವ ಉದ್ದೇಶದಿಂದ ರಾಜ್ಯ ಸರ್ಕಾರ ಕೇವಲ ಹಾಲು ಕೊಡುವ ಬದಲು ಅದರ ಜೊತೆಗೆ ಪ್ರತಿ ದಿನ ಸಾಯಿ ಶ್ಯೂರ್ ರಾಗಿ ಹೆಲ್ತ್ ಮಿಕ್ಸ್ ನೀಡಲು ಮುಂದಾಗಿದೆ' ಎಂದರು.



ಮಕ್ಕಳು ಶಿಕ್ಷಣ ಪಡೆಯಬೇಕು ಎಂಬ ಉದ್ದೇಶದಿಂದ ಸರ್ಕಾರ ಇಂತಹ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದೆ. ಮಕ್ಕಳು ಶಾಲೆಗಳಲ್ಲಿ ನೀಡುವ ಪೌಷ್ಟಿಕ ಆಹಾರವನ್ನು ಸೇವಿಸಿ ವಿದ್ಯೆಗೆ ಹೆಚ್ಚು ಒತ್ತು ನೀಡಬೇಕು' ಎಂದು ಹೇಳಿದರು.

ಡಯಟ್ ಪ್ರಾಂಶುಪಾಲ ಕಾಶೀನಾಥ್ ಮಾತನಾಡಿ, 'ಮಕ್ಕಳು ನಮ್ಮ ದೇಶದ ಮುಂದಿನ ಪ್ರಜೆಗಳು. ಮಕ್ಕಳಿಗೆ ಜ್ಞಾನವನ್ನು ತುಂಬುವ ಕೆಲಸವನ್ನು ಶಿಕ್ಷಕರು ಮಾಡುತ್ತಾರೆ. ವಿದ್ಯಾರ್ಥಿಗಳು ಶಿಕ್ಷಣಕ್ಕೆ ಒತ್ತುಕೊಟ್ಟು ಮುಂದೆ ಸಾಗಬೇಕಿದೆ. ಸರ್ಕಾರಿ ಶಾಲೆಗಳ ಮಕ್ಕಳು ಹಸಿವಿನಿಂದ ಇರಬಾರದು ಎಂದು ಮಧ್ಯಾಹ್ನದ ಊಟ, ಜೊತೆ ಮೊಟ್ಟೆ, ರಾಗಿ ಹೆಲ್ತ್ ಮಿಕ್ಸ್ ನೀಡುತ್ತಿದೆ' ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಸೋಮಣ್ಣೇಗೌಡ ಮಾತನಾಡಿ, 'ಜಿಲ್ಲೆಯಾದ್ಯಂತ ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಹಾಲಿನ ಜೊತೆಯಲ್ಲಿ ರಾಗಿ ಮಿಕ್ಸ್ ನೀಡುವ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಮಕ್ಕಳು ಶಕ್ತಿ ಹೀನಾರಾಗಬಾರದು, ಸರ್ಕಾರವು ನೀಡುವ ಪೌಷ್ಟಿಕ ಆಹಾರ ಪಡೆದು ಶಕ್ತಿವಂತರಾಗುವುದರ ಜೊತೆಗೆ ಜ್ಞಾನವನ್ನೂ ಹೆಚ್ಚಿಸಿಕೊಳ್ಳಬೇಕು' ಎಂದರು.

ನಗರಸಭೆ ಸದಸ್ಯ ಬಸವಣ್ಣ ಮಾತನಾಡಿದರು. ಜಿಲ್ಲಾ ಅಕ್ಷರ ದಾಸೋಹ ಅಧಿಕಾರಿ ಗುರುಲಿಂಗಯ್ಯ, ತಾಲ್ಲೂಕು ಅಕ್ಷರ ದಾಸೋಹ ಅಧಿಕಾರಿ ವೆಂಕಟೇಶ್, ತಾಲ್ಲೂಕು ದೈಹಿಕ ಶಿಕ್ಷಣಾಧಿಕಾರಿ ಬಸವರಾಜು, ಸಿ.ಆರ್.ಪಿ ಗಂಗಾಂಬಿಕೆ, ಎಸ್.ಡಿ.ಎಂ.ಸಿ ಸದಸ್ಯ ಮಹದೇವಸ್ವಾಮಿ, ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನಿಕಟಪೂರ್ವ ಅಧ್ಯಕ್ಷ ಪ್ರಕಾಶ್, ದೈಹಿಕ ಶಿಕ್ಷಣ ಶಿಕ್ಷಕ ಚಿಕ್ಕಬಸವಯ್ಯ, ಹಾಗೂ ಶಾಲಾ ಶಿಕ್ಷಕ ವೃಂದದವರು ಹಾಗೂ ಮಕ್ಕಳು ಭಾಗವಹಿಸಿದ್ದರು.

# ಹೆಚ್ಚಿದ ಅತ್ಯಾಚಾರ ಪ್ರಕರಣ

**ಬೆಂಗಳೂರು:** ಸಿಲಿಕಾನ್ ಸಿಟಿ, ಗಾರ್ಡನ್ ಸಿಟಿ, ಐಟಿ ಸಿಟಿ ಎಂದೆಲ್ಲಾ ಹೆಸರುಗಳಿಂದ ಗುರುತಿಸಿಕೊಂಡಿರುವ ಬೆಂಗಳೂರು ನಗರ ಮಹಿಳೆಯರಿಗೆ ಎಷ್ಟು ಸುರಕ್ಷಿತ ಎಂಬ ಪ್ರಶ್ನೆ ಕಾಡಲು ಶುರುವಾಗಿದೆ. ಕಾರಣ, ಬೆಂಗಳೂರು ನಗರದಲ್ಲಿ ಕಳೆದ 3 ವರ್ಷಗಳಲ್ಲಿ 444 ಅತ್ಯಾಚಾರ ಪ್ರಕರಣಗಳು ಹಾಗೂ 2439 ಮಾನಭಂಗ ಪ್ರಕರಣ ದಾಖಲಾಗಿವೆ. ಗೃಹ ಇಲಾಖೆ ನೀಡುವ ಅಂಕಿ - ಅಂಶಗಳು ನಿಜಕ್ಕೂ ಆತಂಕಕಾರಿಯಾಗಿವೆ.

2021 ರಲ್ಲಿ 116, 2022 ರಲ್ಲಿ 152 ಹಾಗೂ 2023 ರಲ್ಲಿ 176 ಐಪಿಸಿ 376 ಅಡಿಯಲ್ಲಿ ಅತ್ಯಾಚಾರ ಪ್ರಕರಣಗಳು ದಾಖಲಾಗಿವೆ. ಅಲ್ಲದೇ ರೀತಿ 2021 ರಲ್ಲಿ 573, 2022 ರಲ್ಲಿ 731 ಹಾಗೂ 2023 ರಲ್ಲಿ 1135 ಮಾನಭಂಗ ಪ್ರಕರಣಗಳನ್ನು ಐಪಿಸಿ 354 ಅಡಿಯಲ್ಲಿ ದಾಖಲು ಮಾಡಲಾಗಿದೆ. ವರ್ಷದಿಂದ ವರ್ಷಕ್ಕೆ ಪ್ರಕರಣಗಳ ಸಂಖ್ಯೆ ಏರಿಕೆ ಆಗುತ್ತಿರುವುದು ಆತಂಕಕಾರಿ.

ಅದಷ್ಟೇ ಅಲ್ಲದೆ ಮಹಿಳೆಯನ್ನು ಅವಮಾನಕಾರಿಯಾಗಿ ನಡೆಸಿಕೊಂಡ



109 ಪ್ರಕರಣಗಳು ನಗರದಲ್ಲಿ 3 ವರ್ಷಗಳಲ್ಲಿ ದಾಖಲಾದರೆ, ವರದಕ್ಷಿಣೆ ಸಾವು - 85, ಕೌಟುಂಬಿಕ ದೌರ್ಜನ್ಯ - 1698, ಅಕ್ರಮ ಸಾಗಾಟ- 445 ಹಾಗೂ ವರಕ್ಷಿಣೆ ಕಿರುಕುಳ - 2696 ಪ್ರಕರಣಗಳು ದಾಖಲಾಗಿವೆ.

ಮಹಿಳೆಯರ ಸುರಕ್ಷತೆಯ ದೃಷ್ಟಿಯಿಂದ ಸರ್ಕಾರ ಸೇಫ್ ಸಿಟಿ ಯೋಜನೆಯನ್ನು ಜಾರಿಗೆ ತಂದಿದೆ. ಈ ಯೋಜನೆ ಅನ್ವಯ ಮಹಿಳೆಯರ ಸುರಕ್ಷತೆಗಾಗಿ ನಗರಾದ್ಯಂತ ಸಿಸಿ ಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಈ ಯೋಜನೆಯ ಫೇಸ್ 1 ಹಂತದ ಅನುಷ್ಠಾನ ಪೂರ್ಣಗೊಂಡಿದೆ. ಫೇಸ್ 2 ಹಾಗೂ ಫೇಸ್ 3 ಅನುಷ್ಠಾನ ಕಾರ್ಯ ಪ್ರಗತಿಯಲ್ಲಿದೆ.

ಅಲ್ಲದೆ ಮಹಿಳಾ ಪೊಲೀಸ್ ಸಿಬ್ಬಂದಿ 4 ತಂಡಗಳಿಗೆ ಸ್ವ ರಕ್ಷಣೆ ತರಬೇತಿ ನೀಡಲಾಗಿದೆ. ಹಾಗೂ ನಗರದ ಎಂಟು ಪ್ರಮುಖ ಆಸ್ಪತ್ರೆಗಳಲ್ಲಿ ಕ್ರಿಟಿಕಲ್ ಕೇರ್ ರೆಸ್ಪಾನ್ಸ್ ಯೂನಿಟ್ ಗಳನ್ನು ತೆರೆದು ಶೋಷಣೆಗೊಳಗಾದ ಮಹಿಳೆಯರಿಗೆ ಉತ್ತಮ ರೀತಿಯಲ್ಲಿ ಸಮಾಲೋಚನೆ ಒದಗಿಸಲಾಗುತ್ತದೆ. ಇದಷ್ಟೇ ಅಲ್ಲದೆ ನಗರದಲ್ಲಿ 7500 ಕ್ಯಾಮೆರಾಗಳು, ಕಮಾಂಡ್ ಸೆಂಟರ್‌ಗಳು ಹಾಗೂ ನಗರದಾದ್ಯಂತ 50 ಸ್ಥಳಗಳಲ್ಲಿ ಸೇಫ್ಟಿ ಐಲ್ಯಾಂಡ್‌ಗಳನ್ನು ಸ್ಥಾಪಿಸಲಾಗಿದೆ ಎಂದು ಗೃಹ ಇಲಾಖೆ ಮಾಹಿತಿಯನ್ನು ನೀಡುತ್ತದೆ.

ಹೀಗಿದ್ದರೂ ಮಹಿಳೆಯರ ಮೇಲೆ ನಿರಂತರವಾಗಿ ದೌರ್ಜನ್ಯ ಪ್ರಕರಣಗಳು ವರದಿಯಾಗುತ್ತಿರುವುದು ಆತಂಕಕಾರಿ ಬೆಳವಣಿಗೆ. ಇದನ್ನು ಪೂರ್ಣ ವಿರಾಮ ಹಾಕುವ ನಿಟ್ಟಿನಲ್ಲಿ ಪೊಲೀಸ್ ಇಲಾಖೆ ಮತ್ತಷ್ಟು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

# ಸಂಜೆ ಟಿಪ್ಸ್

THINKINK PICTUREZ

## ಅಂತರರಾಷ್ಟ್ರೀಯ ಕಾರ್ಯಾಚರಣೆಗೆ ವಿಸ್ತರಿಸಿದ ಥಿಂಕಿಂಕ್ ಪಿಕ್ಚರ್ಸ್

ಜಾಗತಿಕ ಮನರಂಜನಾ ಉದ್ಯಮದ ಪ್ರಮುಖ ಆಟಗಾರ ಮುಂಬೈ ಮೂಲದ ಥಿಂಕಿಂಕ್ ಪಿಕ್ಚರ್ಸ್ ಲಿಮಿಟೆಡ್ ಬೋನಸ್ ಸಮಸ್ಯೆ ಮತ್ತು ಷೇರು ವಿಭಜನೆಯನ್ನು ಪರಿಗಣಿಸುತ್ತಿದೆ. ನಿಯಂತ್ರಕ ಅನುಮೋದನೆಗಳು ಮತ್ತು ಷೇರುದಾರರ ಅನುಮೋದನೆಗೆ ಒಳಪಟ್ಟು ಬೋನಸ್ ಷೇರುಗಳು ಮತ್ತು ಸ್ಟಾಕ್ ವಿಭಜನೆಯನ್ನು ಪರಿಗಣಿಸಲು ಮತ್ತು ಅನುಮೋದಿಸಲು ನಿರ್ದೇಶಕರ ಮಂಡಳಿಯ ಸಭೆಯು ಶುಕ್ರವಾರ, 1 ಮಾರ್ಚ್ ರಂದು ಆಯೋಜಿಸಿತ್ತು. ಅಸ್ತಿತ್ವದಲ್ಲಿರುವ ಷೇರುದಾರರಿಗೆ ಬಹುಮಾನ ನೀಡುವುದರ ಜೊತೆಗೆ, ಬೋನಸ್ ಮತ್ತು ಷೇರು ವಿಭಜನೆಯು ಕಂಪನಿಯಲ್ಲಿ ದ್ರವ್ಯತೆಯನ್ನು ಹೆಚ್ಚಿಸುತ್ತದೆ. ಕಂಪನಿಯ ಬಲವಾದ ಆರ್ಥಿಕ ಕಾರ್ಯಕ್ಷಮತೆ ಮತ್ತು ಷೇರುದಾರರಿಗೆ ಮೌಲ್ಯವನ್ನು ಹಿಂದಿರುಗಿಸುವ ಬದ್ಧತೆಯನ್ನು ಪ್ರತಿಬಿಂಬಿಸುವ ಮೂಲಕ, ಕಂಪನಿಯು ರೂ.ವರೆಗಿನ ಲಾಭಾಂಶವನ್ನು ಘೋಷಿಸಲು ಪರಿಗಣಿಸುತ್ತದೆ. ಮಾರ್ಚ್ 1 ರಂದು ಮಂಡಳಿಯ ಸಭೆಯಲ್ಲಿ ಪ್ರತಿ ಷೇರಿಗೆ 3 ರೂ.ಕಂಪನಿಯ ಈಕ್ವಿಟಿ ಷೇರುಗಳ ಉಪ-ವಿಭಾಗದ ಜೊತೆಗೆ ಕಂಪನಿಯ ಅಸ್ತಿತ್ವದಲ್ಲಿರುವ ಷೇರುದಾರರಿಗೆ ಬೋನಸ್ ವಿತರಣೆಯ ಅನುಪಾತವನ್ನು ಸಹ ಮಂಡಳಿಯು ಪರಿಗಣಿಸುತ್ತದೆ. ಸಂಬಂಧಿತ ನಿಯಂತ್ರಕ ಅನುಮೋದನೆಗಳಿಂದ ಅನುಮೋದನೆಗಳಿಗೆ ಒಳಪಟ್ಟು ಮಾರ್ಚ್ 1, 2024 ರಂದು ಸಭೆಯಲ್ಲಿ 5 ಮುಖಬೆಲೆ.ಥಿಂಕಿಂಕ್ ಪಿಕ್ಚರ್ಸ್ ಲಿಮಿಟೆಡ್ ನ ಜಂಟಿ ವ್ಯವಸ್ಥಾಪಕ ನಿರ್ದೇಶಕರಾದ ವಿಮಲ್ ಕುಮಾರ್ ಲಾಹೋಟಿ, ಮಾತನಾಡುತ್ತಾ, ಕಂಪನಿಯು ಮನರಂಜನಾ ಉದ್ಯಮದಲ್ಲಿ ಗಮನಾರ್ಹವಾದ ಪರಿವರ್ತನೆಯ ತುದಿಯಲ್ಲಿ ನಿಂತಿದೆ. ಕಂಪನಿಯು ತನ್ನ ದೀರ್ಘಾವಧಿಯ ಬೆಳವಣಿಗೆಯ ಮಾರ್ಗಸೂಚಿಯಲ್ಲಿ ಉತ್ತಮವಾಗಿ ಪ್ರಗತಿ ಸಾಧಿಸುತ್ತಿದೆ ಮತ್ತು ಅತ್ಯುತ್ತಮ ಕಾರ್ಯಾಚರಣೆ ಮತ್ತು ಆರ್ಥಿಕ ಕಾರ್ಯಕ್ಷಮತೆಯನ್ನು ವರದಿ ಮಾಡುತ್ತಿದೆ ಎಂದು ಎಂದರು.

## ಸೌತೆಕಾಯಿ ಪಕೋಡಾ

### ಪಾಕ ಶಾಲೆ



### ಬೇಕಾಗಿರುವ ಪದಾರ್ಥ

ರೌಂಡಾಗಿ ಕತ್ತರಿಸಿ ಸೌತೆಕಾಯಿ, ಕಡಲೆ ಹಿಟ್ಟು, ಉಪ್ಪು, ಕೆಂಪು ಮೆಣಸಿನಕಾಯಿ ಪುಡಿ, ಓಂಕಾಳು, ಚಿಟಕೆ ಸೋಡಾ, ಕರಿಯಲು ಎಣ್ಣೆ

### ಮಾಡುವ ವಿಧಾನ

ಒಂದು ಕಪ್ ಕಡಲೆ ಹಿಟ್ಟಿಗೆ ಸ್ವಲ್ಪ ಸ್ವಲ್ಪ ನೀರು ಹಾಕಿ ಚೆನ್ನಾಗಿ ಕಲೆಸಿಕೊಳ್ಳಿ. ಗಟ್ಟಿ ಪೇಸ್ಟ್ ಹದಕ್ಕೆ ಕಲಿಸಿಕೊಳ್ಳಿ. ಈ ಪೇಸ್ಟ್ಗೆ ನಿಮಗೆ ರುಚಿಗೆ ಬೇಕಾಗುವಷ್ಟು ಪ್ರಮಾಣದಲ್ಲಿ ಉಪ್ಪು, ಖಾರಪುಡಿ ಹಾಕಿಕೊಳ್ಳಿ, ನಂತರ ಇದಕ್ಕೆ ಓಂಕಾಳು ಹಾಗು ಚಿಟಕೆ ಸೋಡಾ ಪುಡಿ ಸೇರಿಸಿ ಇಷ್ಟೆಲ್ಲ ಹಾಕಿದ ಮೇಲೆ ಮತ್ತೆ ಹಿಟ್ಟನ್ನು ಚೆನ್ನಾಗಿ ಕಲೆಸಿಕೊಳ್ಳಿ. ಒಂದು ಬಾಣಲೆಯಲ್ಲಿ ಎಣ್ಣೆ ಹಾಕಿ ಕಾಯಿಸಿ. ಎಣ್ಣೆ ಚೆನ್ನಾಗಿ ಕಾದ ಮೇಲೆ ರೌಂಡಾಗಿ ಕತ್ತರಿಸಿದ ಸೌತೆಕಾಯಿಯನ್ನು ಒಂದೊಂದಾಗಿ ಕಲಿಸಿದ ಕಡಲೆಡಹಿಟ್ಟಿನಲ್ಲಿ ಅದ್ದಿ ಕಾಯಿದ ಎಣ್ಣೆಗೆ ಬಿಡಿ. ಆಗಾಗ ಕೈ ಆಡಿಸಿ, ಪಕೋಡಾ ಚೆನ್ನಾಗಿ ಎಣ್ಣೆಯಲ್ಲಿ ಕರಿದಿದೆ ಎಂದು ಪರೀಕ್ಷಿಸಿಕೊಂಡು ಆನಂತರ ಎಣ್ಣೆಯಿಂದ ಹೊರಗೆ ತೆಗೆಯಿರಿ. ಈಗ ಬಿಸಿ ಬಿಸಿ ಸೌತೆಕಾಯಿ ಪಕೋಡಾ ರೆಡಿಯಾಯ್ತು. ನೀವು ಒಮ್ಮೆ ಟ್ರೈ ಮಾಡಿ ನೋಡಿ.

## ಚಿನ್ನದ ಕೇಕ್ ಕಟ್ ಮಾಡಿದ ಊರ್ವಶಿ ರೌಟೇಲಾ

ಬಾಲಿವುಡ್ ನಟಿ ಮತ್ತು ರೂಪದರ್ಶಿ ಊರ್ವಶಿ ರೌಟೇಲಾ ಸಾಮಾಜಿಕ ಮಾಧ್ಯಮದಲ್ಲಿ ತುಂಬಾ ಸಕ್ರಿಯರಾಗಿದ್ದಾರೆ. ಊರ್ವಶಿ ಇಂದು ತಮ್ಮ 30ನೇ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿದ್ದಾರೆ. ಈ ಸಂದರ್ಭದಲ್ಲಿ ನಿನ್ನೆ ತಡರಾತ್ರಿ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದ ಅವರು 24 ಕ್ಯಾರಟ್ ಚಿನ್ನದಿಂದ ಅಲಂಕರಿಸಿದ ಗೋಲ್ಡನ್ ಕೇಕ್ ಅನ್ನು ಕಟ್ ಮಾಡಿದ್ದಾರೆ. ಇದರ ಹಲವಾರು ಫೋಟೋಗಳನ್ನು ನಟಿ ಶೇರ್ ಮಾಡಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ಗಾಯಕ-ರ್ಯಾಪರ್ ಯೋ ಯೋ ಹನಿ ಸಿಂಗ್ ಕೂಡ ಇದ್ದರು. ಈ 24 ಕ್ಯಾರಟ್ ಚಿನ್ನದ ಲೇಪಿತ ಕೇಕ್ ಅನ್ನು 'ಲವ್ ಡೋಸ್ 2' ಸೆಟ್ನಲ್ಲಿ ಕತ್ತರಿಸಿದ್ದೇನೆ ಎಂದು ನಟಿ ಶೀರ್ಷಿಕೆಯಲ್ಲಿ ಹೇಳಿದ್ದಾರೆ. ವಾಸ್ತವವಾಗಿ, ಹನಿ ಸಿಂಗ್ ಅವರು ನಟಿ ಊರ್ವಶಿ ಅವರ ಮುಂದಿನ ಸಂಗೀತ ವಿಡಿಯೋ 'ಲವ್ ಡೋಸ್ 2' ನೊಂದಿಗೆ ಬರುತ್ತಿದ್ದಾರೆ. ಈ ಹಾಡಿನ ಚಿತ್ರೀಕರಣದ ಸೆಟ್ನಲ್ಲಿಯೇ ಊರ್ವಶಿ ಹುಟ್ಟುಹಬ್ಬ ಆಚರಿಸಿಕೊಂಡಿದ್ದಾರೆ. ಅಂದಹಾಗೆ ಈ ಕೇಕ್ ಕೂಡ ಹನಿ ಸಿಂಗ್ ಅವರೇ ತರಿಸಿದ್ದು ಎನ್ನಲಾಗಿದೆ. ಅಷ್ಟಕ್ಕೂ ಈ ಕೇಕ್ ಬೆಲೆ ಎಷ್ಟು ಗೊತ್ತಾ? ಬರೋಬ್ಬರಿ ಮೂರು ಕೋಟಿ ರೂಪಾಯಿಯಂತೆ. ಹುಟ್ಟುಹಬ್ಬದ ಕೇಕ್ ಕಟ್ ಮಾಡುವ ಸಂದರ್ಭದಲ್ಲಿ ನಟಿ, ಕೆಂಪು ಬಣ್ಣದ ಥಾಯ್ ಸ್ಲಿಟ್ ಡ್ರೆಸ್ ಧರಿಸಿ ತುಂಬಾ ಸುಂದರವಾಗಿ ಕಾಣುತ್ತಿದ್ದಾರೆ. ಊರ್ವಶಿ ಕೈಯಲ್ಲಿ ಬಳೆ, ಕುತ್ತಿಗೆಗೆ ಹಾರ ಮತ್ತು ತೆರೆದ ಕೂದಲಿನೊಂದಿಗೆ ತುಂಬಾ ಸುಂದರವಾಗಿ ಪೋಸ್ ಕೊಟ್ಟಿದ್ದು, ಅಭಿಮಾನಿಗಳು ಸೂಪರ್ ಎಂದು ಕಮೆಂಟ್ ಹಾಕುತ್ತಿದ್ದಾರೆ. ಕುತೂಹಲದ ವಿಷಯ ಎಂದರೆ ಕಳೆದ ವರ್ಷ ನಟಿ ಹುಟ್ಟುಹಬ್ಬದಂದು ಡೈಮಂಡ್ ಕೇಕ್ ಅನ್ನು ಕಟ್ ಮಾಡಿದ್ದರು. ಅದನ್ನು 24-ಕ್ಯಾರಟ್ ಚಿನ್ನದ ಕಪ್ಕೇಕ್ಗಳಿಂದ ಅಲಂಕರಿಸಲಾಗಿತ್ತು





## ನಿಮ್ಮ ಆರೋಗ್ಯಕ್ಕೆ ಉತ್ತಮ ಒಡನಾಡಿ ರೈಸ್ ಬ್ರಾನ್ ಆಯಿಲ್

### ಹೆಲ್ತ್ ಟಿಪ್ಸ್



ಇಂದಿನ ಜೀವನಶೈಲಿ ಮತ್ತು ಕೆಲಸದ ಒತ್ತಡಗಳು ನಮ್ಮ ಆರೋಗ್ಯದ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ. ಏಕೆಂದರೆ ನಾವು ನಮ್ಮ ಕೆಲಸದ ನಡುವೆ ನಮ್ಮ ಆರೋಗ್ಯದ ಕಡೆ ಹೆಚ್ಚಿನ ಗಮನ ನೀಡಲು ಸಾಧ್ಯವಾಗದೇ ಹೋಗಬಹುದು. ಇದು ಮಧುಮೇಹ, ಅಧಿಕ ರಕ್ತದೊತ್ತಡ ಮತ್ತು ಬೊಜ್ಜು ಮುಂತಾದ ಹಲವಾರು ಜೀವನಶೈಲಿ ಸಂಬಂಧಿತ ಕಾಯಿಲೆಗಳಿಗೆ ನಮ್ಮನ್ನು ತಳ್ಳಬಹುದು. ನಮ್ಮ ಜೀವನಶೈಲಿ ಮತ್ತು ಆಹಾರ ಪದ್ಧತಿಯಲ್ಲಿ ಬದಲಾವಣೆಗಳನ್ನು ಮಾಡುವ ಮೂಲಕ ಈ ಪರಿಸ್ಥಿತಿಗಳನ್ನು ತಪ್ಪಿಸಬಹುದು. ಇದರಲ್ಲಿ ಮುಖ್ಯವಾದದ್ದು ನಾವು ಅಡುಗೆಗೆ ಬಳಸಬಹುದಾದ ಎಣ್ಣೆ. ಇದು ನಮ್ಮ ಆರೋಗ್ಯದ ಮೇಲೆ ಸಾಕಷ್ಟು ಪರಿಣಾಮ ಬೀರುತ್ತದೆ. ರೈಸ್ ಬ್ರಾನ್ ಎಣ್ಣೆಯು ಉತ್ಕರ್ಷಣ ನಿರೋಧಕಗಳು, ಜೀವಸತ್ವಗಳು ಮತ್ತು ಖನಿಜಗಳಿಂದ ಸಮೃದ್ಧವಾಗಿದೆ, ಇದು ಹಲವಾರು ಆರೋಗ್ಯ ಪ್ರಯೋಜನಗಳನ್ನು ನೀಡುತ್ತದೆ. ಕೊಲೆಸ್ಟ್ರಾಲ್ ಮಟ್ಟವನ್ನು ಕಡಿಮೆ ಮಾಡುತ್ತದೆ: ರೈಸ್ ಬ್ರಾನ್ ಎಣ್ಣೆಯು ಸಸ್ಯ ಸ್ಟೆರಾಲ್ ಗಳಲ್ಲಿ ಸಮೃದ್ಧವಾಗಿದೆ, ಇದು ರಕ್ತದಲ್ಲಿನ ಎಲ್ ಡಿಎಲ್ (ಕೆಟ್ಟ) ಕೊಲೆಸ್ಟ್ರಾಲ್ ಮಟ್ಟವನ್ನು ಕಡಿಮೆ ಮಾಡುತ್ತದೆ ಎಂದು ತೋರಿಸಲಾಗಿದೆ. ಇದು ಹೃದಯಾಘಾತ ಮತ್ತು ಪಾರ್ಶ್ವವಾಯು ಅಪಾಯವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಹೃದಯದ ಆರೋಗ್ಯವನ್ನು ಸುಧಾರಿಸುತ್ತದೆ: ರೈಸ್ ಬ್ರಾನ್ ಎಣ್ಣೆಯಲ್ಲಿನ ಹೆಚ್ಚಿನ ಮಟ್ಟದ ಮೊನೊಸಾಚುರೇಟೆಡ್ ಮತ್ತು ಬಹು ಅಪರ್ಯಾಪ್ತ ಕೊಬ್ಬುಗಳು ರಕ್ತದ ಲಿಪಿಡ್ ಮಟ್ಟವನ್ನು ಸುಧಾರಿಸುವ ಮೂಲಕ ಮತ್ತು ದೇಹದಲ್ಲಿ ಉರಿಯೂತವನ್ನು ಕಡಿಮೆ ಮಾಡುವ ಮೂಲಕ ಹೃದ್ರೋಗದ ಅಪಾಯವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

**ತೂಕ ನಷ್ಟಕ್ಕೆ ಸಹಾಯ ಮಾಡುತ್ತದೆ:** ರೈಸ್ ಬ್ರಾನ್ ಎಣ್ಣೆಯು ಚಯಾಪಚಯವನ್ನು ಹೆಚ್ಚಿಸಲು ಮತ್ತು ಕೊಬ್ಬು ಸುಡುವಿಕೆಯನ್ನು ಹೆಚ್ಚಿಸಲು ಸಹಾಯ ಮಾಡುವ ಸಂಯುಕ್ತಗಳನ್ನು ಒಳಗೊಂಡಿದೆ. ಇದು ತೂಕ ನಷ್ಟ ಆಹಾರಕ್ಕೆ ಉಪಯುಕ್ತ ಸೇರ್ಪಡೆಯಾಗಿದೆ. ಮೆದುಳಿನ ಆರೋಗ್ಯವನ್ನು ಬೆಂಬಲಿಸುತ್ತದೆ: ರೈಸ್ ಬ್ರಾನ್ ಎಣ್ಣೆಯಲ್ಲಿರುವ ವಿಟಮಿನ್ ಇ ಮತ್ತು ಗಾಮಾ-ಒರಿಜಾನಾಲ್ ನೆನಪಿನ ಶಕ್ತಿಯನ್ನು ಸುಧಾರಿಸುತ್ತದೆ ಎಂದು ತೋರಿಸಲಾಗಿದೆ. ಇದು ಆಹಾರಕ್ಕೆ ಅಮೂಲ್ಯವಾದ ಸೇರ್ಪಡೆಯಾಗಿದೆ, ವಿಶೇಷವಾಗಿ ವಯಸ್ಸಾದ ವಯಸ್ಕರಿಗೆ.

**ಉರಿಯೂತ ನಿವಾರಕ ಗುಣಲಕ್ಷಣಗಳು:** ರೈಸ್ ಬ್ರಾನ್ ಎಣ್ಣೆಯಲ್ಲಿರುವ ಹೆಚ್ಚಿನ ಮಟ್ಟದ ಉತ್ಕರ್ಷಣ ನಿರೋಧಕಗಳು ದೇಹದಲ್ಲಿನ ಉರಿಯೂತವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ, ಇದು ಸಂಧಿವಾತ, ಮಧುಮೇಹ ಮತ್ತು ಕ್ಯಾನ್ಸರ್ನಂತಹ ದೀರ್ಘಕಾಲದ ಕಾಯಿಲೆಗಳಿಗೆ ಪ್ರಮುಖ ಕಾರಣವಾಗಿದೆ. ಪೌಷ್ಟಿಕಾಂಶ ತಜ್ಞ, ಡಾ. ಮಥೀನ್ ಅಸ್ರಾರ್, (ಪಿಎಚ್ ಡಿ ಪೌಷ್ಟಿಕತಜ್ಞ) ಮಾತನಾಡುತ್ತಾ, ''ಖಾದ್ಯ ತೈಲಗಳು ನಮ್ಮ ದೇಹಕ್ಕೆ ಅಗತ್ಯವಾದ ಕೊಬ್ಬಿನಾಮ್ಲಗಳು, ಕೊಬ್ಬು ಕರಗುವ ಜೀವಸತ್ವಗಳು ಮತ್ತು ಇತರ ಪ್ರಮುಖ ಪೋಷಕಾಂಶಗಳನ್ನು ಒದಗಿಸುತ್ತವೆ. ಈ ಪೋಷಕಾಂಶಗಳು ಆರೋಗ್ಯಕರ ಜೀವಕೋಶದ ಕಾರ್ಯವನ್ನು ನಿರ್ವಹಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ, ಮೆದುಳಿನ ಆರೋಗ್ಯವನ್ನು ಬೆಂಬಲಿಸುತ್ತದೆ ಮತ್ತು ಪೋಷಕಾಂಶಗಳ ಹೀರಿಕೊಳ್ಳುವಿಕೆಗೆ ಸಹಾಯ ಮಾಡುತ್ತದೆ. ನಮ್ಮ ಆಹಾರದಿಂದ ಖಾದ್ಯ ತೈಲಗಳನ್ನು ಹೊರಗಿಡುವ ಮೂಲಕ, ನಾವು ಈ ಪ್ರಮುಖ ಆರೋಗ್ಯ ಪ್ರಯೋಜನಗಳನ್ನು ಕಳೆದುಕೊಳ್ಳಬಹುದು.ಈ ಎಣ್ಣೆಯಲ್ಲಿ ಕಂಡುಬರುವ ಕೊಬ್ಬಿನಾಮ್ಲಗಳ ನಿರ್ದಿಷ್ಟ ಸಂಯೋಜನೆಯು ಹೃದಯದ ಆರೋಗ್ಯಕ್ಕೆ ಆದ್ಯತೆ ನೀಡಲು ಬಯಸುವವರಿಗೆ ಅತ್ಯುತ್ತಮ ಆಯ್ಕೆಯಾಗಿದೆ'' ಎಂದರು.

## ಅನಂತ್ ಅಂಬಾನಿ -ರಾಧಿಕಾ ಮರ್ಚೆಂಟ್ ಮದುವೆ

### ಪೂರ್ವ ಕಾರ್ಯಕ್ರಮಕ್ಕೆ ಜಾಮ್ ನಗರದಲ್ಲಿ ಸಿದ್ಧವಾಗಿದೆ ಭೂ ಲೋಕದ ಸ್ವರ್ಗ



ವಿಶ್ವದ ಟಾಪ್ ಟೆನ್ ಶ್ರೀಮಂತರ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಹಾಗೂ ರಿಲಯನ್ಸ್ ಇಂಡಸ್ಟ್ರೀಸ್ ಅಧ್ಯಕ್ಷ ಮುಕೇಶ್ ಅಂಬಾನಿ ಮತ್ತು ನೀತಾ ಅಂಬಾನಿ ದಂಪತಿಯ ಮಗ ಅನಂತ್ ಅಂಬಾನಿ- ರಾಧಿಕಾ ಮರ್ಚೆಂಟ್ ವಿವಾಹ ಪೂರ್ವ ಕಾರ್ಯಕ್ರಮಕ್ಕೆ ಅದ್ಧೂರಿ ತಯಾರಿ ನಡೆಯುತ್ತಿದೆ. ಸ್ವತಃ ನೀತಾ ಅಂಬಾನಿ ಅವರು ಈ ಸಿದ್ಧತೆಯ ಉಸ್ತುವಾರಿಗಳನ್ನು ನೋಡಿಕೊಳ್ಳುತ್ತಿದ್ದಾರೆ. ಅಂಬಾನಿ ಕುಟುಂಬದಿಂದ ಗುಜರಾತ್ ನ ಜಾಮ್ ನಗರದಲ್ಲಿ ಹದಿನಾಲ್ಕು ಹೊಸ ದೇಗುಲಗಳ ಸಮುಚ್ಚಯದ ನಿರ್ಮಾಣವನ್ನೇ ಮಾಡಲಾಗಿದೆ. ಸೊಗಸಾಗಿ ಕೆತ್ತನೆ ಮಾಡಿದ ಸ್ಥಂಭಗಳು, ಕಲಾಕೃತಿಗಳು, ದೇವ- ದೇವತೆಗಳ ಚಿತ್ರಗಳು, ಮನಮೋಹಕವಾದ ಶಿಲ್ಪಗಳು, ವಾಸ್ತುಶಿಲ್ಪದಿಂದ ಪ್ರೇರಿತವಾದ ಪಾರಂಪರಿಕ ಚಿತ್ರಗಳನ್ನು ಇಲ್ಲಿ ಕಾಣಬಹುದಾಗಿದೆ. ಭಾರತದ ಶ್ರೀಮಂತ ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಅಸ್ಮಿತೆಯನ್ನು ಈ ದೇವಾಲಯ ಸಮುಚ್ಚಯದ ಎಲ್ಲ ಕಡೆಗಳಲ್ಲಿ ಕಾಣಬಹುದಾಗಿದೆ. ಪರಿಣತರಾದ ಕುಶಲಕರ್ಮಿಗಳು, ಕಲಾವಿದರು ಇದಕ್ಕಾಗಿ ಶ್ರಮಿಸಿದ್ದಾರೆ, ಶ್ರಮಿಸುತ್ತಿದ್ದಾರೆ. ದೇವಾಲಯದ ಕಲಾತ್ಮಕತೆಯನ್ನು ಇನ್ನಷ್ಟು ಸೊಬಗುಗೊಳಿಸುವ ಉದ್ದೇಶದಿಂದ ಸಾಂಪ್ರದಾಯಿಕ ಹಾಗೂ ಹಳೆಯ ತಂತ್ರಗಳನ್ನು ಬಳಸಲಾಗಿದೆ. ಸ್ಥಳೀಯ ಕಲಾವಿದರ ಅದ್ಭುತ ಕೌಶಲ, ಪ್ರತಿಭೆಯನ್ನು ಈ ದೇವಾಲಯ ಸಮುಚ್ಚಯದಲ್ಲಿನ ಕಲಾ ಶ್ರೀಮಂತಿಕೆ ಪ್ರತಿಬಿಂಬಿಸುತ್ತದೆ. ಅದು ಈಗಾಗಲೇ ಗೊತ್ತಿರುವಂತೆ, ರಿಲಯನ್ಸ್ ಫೌಂಡೇಷನ್ ಸಂಸ್ಥಾಪಕ ಅಧ್ಯಕ್ಷೆಯೂ ಆದಂಥ ನೀತಾ ಅಂಬಾನಿ ಅವರ ದೃಷ್ಟಿಕೋನವೇ ಸ್ಥಳೀಯ ಕಲಾವಿದರಿಗೆ ಉತ್ತೇಜನ, ಪ್ರೋತ್ಸಾಹ ಹಾಗೂ ಅವರ ಜೀವನೋಪಾಯಕ್ಕೆ ಸೂಕ್ತ ಅನುಕೂಲ ಮಾಡಿಕೊಡುವುದಾಗಿದೆ. ಅದರ ಜತೆಗೆ ಭಾರತೀಉ ಪರಂಪರೆ, ಸಂಪ್ರದಾಯ ಹಾಗೂ ಸಂಸ್ಕೃತಿಯನ್ನು ಕಾಪಾಡುವುದು ಹಾಗೂ ಪ್ರಚಾರ ಮಾಡುವುದಾಗಿದೆ.ಇಲ್ಲಿ ಆಗುತ್ತಿರುವ ಕೆಲಸಗಳು ಅವರ ದೃಷ್ಟಿಕೋನಕ್ಕೆ ಪೂರಕವಾಗಿದೆ. ಜಾಮ್ ನಗರದ ಮೊಟಿಖ್ ವಾಡಿಯಲ್ಲಿ ದೇವಾಲಯದ ಸಮುಚ್ಚಯ ಇದ್ದು, ಇಲ್ಲಿಗೆ ಭೇಟಿ ನೀಡಿದಂಥ ನೀತಾ ಅಂಬಾನಿ ಅವರು ಕೆಲಸಗಳ ಪ್ರಗತಿಯನ್ನು ವೀಕ್ಷಿಸಿದರು, ಕಲಾವಿದರ ಕೆಲಸವನ್ನು ಮನಸಾರೆ ಹೊಗಳಿದರು ಹಾಗೂ ಸಣ್ಣ- ಸಣ್ಣ ವಿವರಗಳನ್ನು ಸಹ ಕಲಾಕೃತಿಯಲ್ಲಿ ಮೂಡಿಸಿರುವುದಕ್ಕೆ ಭಾರೀ ಸಂತಸಪಟ್ಟರು. ''ಈ ಮದುವೆ ಹಬ್ಬದಲ್ಲಿ ತಾವು ಪ್ರತಿಯೊಬ್ಬರೂ ಭಾಗೀ ಆದಂಥ ಅನುಭವ ತಮಗೆ ಆಗುತ್ತಿದೆ,'' ಎಂಬುದನ್ನೆ ಇಲ್ಲಿನ ಸ್ಥಳೀಯರು ಹಾಗೂ ಕಲಾವಿದರು ದೇಗುಲ ಸಮುಚ್ಚಯದಲ್ಲಿ ಹೇಳಿಕೊಂಡಿದ್ದಾರೆ.



## ಸೌಂದರ್ಯಕ್ಕೆ ಗುಲಾಬಿ ಚಹಾ

### ಬ್ಯೂಟಿ ಟಿಪ್ಸ್



ಗುಲಾಬಿ ಚಹಾ ಮಾಡುವುದು ತುಂಬಾ ಸುಲಭ. ಇದಕ್ಕೆ ಹೆಚ್ಚಿನ ಪದಾರ್ಥಗ ಬೇಕಿಲ್ಲ. ಗುಲಾಬಿ ದಳಗಳನ್ನು ನೀರಿನಲ್ಲಿ ಕುದಿಸಿ ನೇರವಾಗಿ ಕುಡಿಯಬಹುದು. ಇಲ್ಲವೇ.. ಟೀ ಪುಡಿ ಮತ್ತು ಗುಲಾಬಿ ದಳಗಳನ್ನು ಸೇರಿಸಿ ಸೋಸಿ ಬೆಳಗ್ಗೆ ಸೇವನೆ ಮಾಡಬಹುದು. ಸಾಮಾನ್ಯ ಚಹಾಗಳಿಗಿಂತ ಇದರು ಭಿನ್ನವಾಗಿದ್ದು, ಆರೋಗ್ಯಕರವಾಗಿರುತ್ತದೆ. ಈ ಚಹ ತೂಕ ನಷ್ಟ ಮಾಡುವಲ್ಲಿ ಬಹಳ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ. ಅಲ್ಲದೆ, ಇದು ಹಲವಾರು ಆರೋಗ್ಯ ಪ್ರಯೋಜನಗಳನ್ನು ಹೊಂದಿದೆ. ಇದನ್ನು ನಿಯಮಿತವಾಗಿ ಸೇವಿಸುವುದರಿಂದ ಚರ್ಮ ಮತ್ತು ಕೂದಲು ಆರೋಗ್ಯಕರವಾಗಿರುತ್ತದೆ ಎಂದು ಹೇಳಲಾಗುತ್ತದೆ. ಆಯಂಟಿಆಕ್ಸಿಡೆಂಟ್ಗಳು ಜೀರ್ಣಕ್ರಿಯೆಗೂ ಸಹಕಾರಿ.

**ತೂಕ ನಷ್ಟಕ್ಕೆ ಸಹಾಯಕಾರಿ:** ಗುಲಾಬಿ ಚಹಾದಲ್ಲಿರುವ ಉತ್ಕರ್ಷಣ ರೋಗ ನಿರೋಧಕಗಳು, ಉರಿಯೂತದ ಗುಣಲಕ್ಷಣಗಳು ತೂಕ ನಷ್ಟಕ್ಕೆ ಸಹಾಯ ಮಾಡುತ್ತದೆ. ಇದು ಜೀರ್ಣಕ್ರಿಯೆಯನ್ನು ಹೆಚ್ಚಿಸುತ್ತದೆ. ಇದರಿಂದ ತೂಕ ನಷ್ಟವಾಗುತ್ತದೆ. ಅಲ್ಲದೆ, ದೇಹದಿಂದ ವಿಷವನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ. ಇದು ಮೂತ್ರನಾಳದ ಸೋಂಕನ್ನು ಸಹ ತಡೆಯುತ್ತದೆ. ಕೆಫೀನ್ ಚಹಾಗಳಿಗಿಂತ ರೋಸ್ ಟೀ ಆರೋಗ್ಯಕರ. ಇದು ನಿಮ್ಮ ಒಟ್ಟಾರೆ ಆರೋಗ್ಯವನ್ನು ಕಾಪಾಡುತ್ತದೆ. ರೋಗನಿರೋಧಕ ಶಕ್ತಿಯನ್ನು ಬಲಪಡಿಸುತ್ತದೆ. ಇದರಲ್ಲಿ ವಿಟಮಿನ್ ಸಿ ಸಮೃದ್ಧವಾಗಿದ್ದು, ವಿವಿಧ ಸೋಂಕುಗಳ ವಿರುದ್ಧ ಹೋರಾಡಲು ಸಹಾಯ ಮಾಡುತ್ತದೆ.



ಜಯಶ್ರೀ.ಬಿ.ಆರ್
ಖ್ಯಾತ ಜ್ಯೋತಿಷಿ
ದೂರವಾಣಿ-9964739507
www.jyotishyavaastu.com

## ರಾಶಿ ಭವಿಷ್ಯ

**ಮೇಷ:** ಗಣಿಗಾರಿಕೆಯವರಿಗೆ ಉತ್ತಮ ಸಮಯ, ಕುಟುಂಬದಲ್ಲಿ ಶಾಂತಿ, ಆದಾಯಕ್ಕಿಂತ ಖರ್ಚು ಹೆಚ್ಚು

**ವೃಷಭ:** ಶಾಲಾ-ಕಾಲೇಜು ನಡೆಸುತ್ತಿರುವವರಿಗೆ ಅಭಿವೃದ್ಧಿ, ಹೆಚ್ಚು ಧೈರ್ಯದಿಂದಿರುವಿರಿ, ಅನವಶ್ಯಕ ಖರ್ಚು ಬೇಡ

**ಮಿಥುನ:** ಉನ್ನತಾಧಿಕಾರ ದೊರೆಯುತ್ತದೆ, ಮಾತಿನಿಂದ ಸಮಸ್ಯೆಗೆ ಸಿಲುಕುವಿರಿ, ಮಕ್ಕಳಿಗೆ ಕೀರ್ತಿ ಲಭ್ಯ

**ಕರ್ಕಾಟಕ:** ಕಮಿಷನ್ ವ್ಯವಹಾರ ಅಬಾಧಿತ, ತಾಂತ್ರಿಕ ಪರಿಣಿತರಿಗೆ ಶುಭ, ರಾಜಕಾರಣಿಗಳಿಗೆ ಅಶುಭ

**ಸಿಂಹ:** ವಾದ್ಯ ತರಬೇತಿದಾರರಿಗೆ ಜನಪ್ರಿಯತೆ, ವಾಹನ ಚಲಾಯಿಸುವಲ್ಲಿ ಎಚ್ಚರ, ವ್ಯವಹಾರದಲ್ಲಿ ಎಚ್ಚರವಹಿಸಿ

**ಕನ್ಯಾ:** ಸರ್ಕಾರಿ ನೌಕರರಿಗೆ ಕಾರ್ಯದೊತ್ತಡ, ಲೇವಾದೇವಿ ವ್ಯಾಪಾರದಲ್ಲಿ ಲಾಭದಾಯಕ, ಮನೋವೈದ್ಯರಿಗೆ ಶುಭ

**ತುಲಾ:** ಮಕ್ಕಳಿಗೆ ಚರ್ಮದ ಸಮಸ್ಯೆ, ಮಾನಸಿಕ ಒತ್ತಡ, ಆಹಾರದ ಬಗ್ಗೆ ಎಚ್ಚರವಿರಲಿ

**ವೃಶ್ಚಿಕ:** ಮಹಿಳೆಯರಿಗೆ ಶುಭ, ಟೆಕ್ನಾಲಜಿ ಪರಿಣಿತರಿಗೆ ಲಾಭ, ರಾಜಕಾರಣಿಗಳಿಗೆ ಅಶುಭ

**ಧನು:** ಹೆಚ್ಚು ಪ್ರಯತ್ನವಿದ್ದಲ್ಲಿ ಆದಾಯ, ಸಮಾಜದಲ್ಲಿ ಗೌರವ, ಮಕ್ಕಳಿಗೆ ಉನ್ನತಾಧಿಕಾರ ದೊರೆಯುತ್ತದೆ

**ಮಕರ:** ಪಾಲುದಾರಿಕೆ ವ್ಯವಹಾರದಲ್ಲಿ ತೊಂದರೆ, ಧಾನ್ಯ ಮಾರಾಟಸ್ಥರಿಗೆ ಆದಾಯ, ಮಕ್ಕಳ ನಡವಳಿಕೆಯಲ್ಲಿ ಬದಲಾವಣೆ

**ಕುಂಭ:** ದೂರ ಪ್ರಯಾಣ, ಯುವಕರಿಗೆ ವೃತ್ತಿಯಲ್ಲಿ ಹಿನ್ನಡೆ, ದೈನಂದಿನ ಕೆಲಸಗಳಲ್ಲಿ ಯಶಸ್ಸು

**ಮೀನ:** ಉಪನ್ಯಾಸಕರಿಗೆ ಶುಭ, ನಾನಾ ರೀತಿಯ ತೊಂದರೆ, ಕೋಪ ಜಾಸ್ತಿ

## ಅಂತರರಾಷ್ಟ್ರೀಯ ನಾಲಿಗೆಯ ಟ್ವಿಸ್ಟರ್ ಸ್ಪರ್ಧೆಯ ದಿನ




ಅಂತಾರಾಷ್ಟ್ರೀಯ ಟಾಂಗ್ ಟ್ವಿಸ್ಟರ್ ಸ್ಪರ್ಧೆ ದಿನವನ್ನು ಪ್ರತಿ ವರ್ಷ ಫೆಬ್ರವರಿ ಕೊನೆಯಲ್ಲಿ ಆಚರಿಸಲಾಗುತ್ತದೆ. ಟಿನ್ನಲ್ಲಿ ಏನು ಹೇಳುತ್ತದೋ ಅದನ್ನು ನಿಖರವಾಗಿ ಮಾಡುವುದು ಮತ್ತು ಉತ್ತಮ ಸ್ವಭಾವದ ನಾಲಿಗೆ ಟ್ವಿಸ್ಟರ್ ಸ್ಪರ್ಧೆಗಳನ್ನು ಆಚರಿಸುವುದು ಗುರಿಯಾಗಿದೆ. ವಿಸ್ಕಾನ್ಸಿನ್ನ ಬರ್ಲಿಂಗ್ಟನ್ನಲ್ಲಿರುವ ಲಾಜಿಕ್ ಪಜಲ್ ಮ್ಯೂಸಿಯಂನಲ್ಲಿ ನಡೆದ ವಾರ್ಷಿಕ ಅಂತರರಾಷ್ಟ್ರೀಯ ಟಂಗ್ ಟ್ವಿಸ್ಟರ್ ಸ್ಪರ್ಧೆಯನ್ನು ದಿನವು ನೆನಪಿಸುತ್ತದೆ. ಸ್ಪರ್ಧೆಯನ್ನು ಮೊದಲ ಬಾರಿಗೆ 2008 ರಲ್ಲಿ ಆಯೋಜಿಸಲಾಯಿತು ಮತ್ತು ಅಂದಿನಿಂದ ಮಣಿಯದ ವಾರ್ಷಿಕ ಸಂಪ್ರದಾಯವಾಗಿದೆ. ಇದು ಆರು ಮತ್ತು 106 ವರ್ಷದೊಳಗಿನ ಭಾಗವಹಿಸುವವರಿಗೆ ಮುಕ್ತವಾಗಿದೆ.

ಟಂಗ್ ಟ್ವಿಸ್ಟರ್ಗಳು ವಿನ್ಯಾಸದಿಂದ ಉಚ್ಚರಿಸಲು ಕಷ್ಟಕರವಾದ ಪದಗುಚ್ಛಗಳಾಗಿವೆ. ಅವರು ಉಚ್ಚಾರಣೆ ಮತ್ತು ಉಚ್ಚಾರಣೆಯನ್ನು ಸುಧಾರಿಸಲು ವ್ಯಾಯಾಮದ ಜೊತೆಗೆ ಪದ ಆಟವಾಗಿ ಕಾರ್ಯನಿರ್ವಹಿಸುತ್ತಾರೆ. 19 ನೇ ಶತಮಾನದಲ್ಲಿ ಜಾನ್ ಹ್ಯಾರಿಸ್ ತನ್ನ ಪುಸ್ತಕ ಪೀಟರ್ ಪೈಪರ್ಸ್ ಪ್ರಾಕ್ಟಿಕಲ್ ಪ್ರಿನ್ಸಿಪಲ್ಸ್ ಆಫ್ ಪ್ಲೇನ್ ಅಂಡ್ ಪರ್ಫೆಕ್ಟ್ ಪ್ರೊನುನ್ಸಿಯೇಶನ್ ಅನ್ನು ಪ್ರಕಟಿಸಿದಾಗ ಈ ಅಭಿವ್ಯಕ್ತಿಗಳು ಜನಪ್ರಿಯತೆಯನ್ನು ಗಳಿಸಿದವು, ಇದರಲ್ಲಿ ವರ್ಣಮಾಲೆಯ ಪ್ರತಿಯೊಂದು ಅಕ್ಷರಕ್ಕೂ ನಾಲಿಗೆ ಟ್ವಿಸ್ಟರ್ ಸೇರಿದೆ. ಪುಸ್ತಕದ ಮೂಲ ಉದ್ದೇಶವು ಮಕ್ಕಳಿಗೆ ಸಹಾಯ ಮಾಡುವುದು ಮತ್ತು ಇಂಗ್ಲಿಷ್ ಭಾಷೆಯ ಅವರ ಹಿಡಿತಕ್ಕೆ ಸಹಾಯವಾಗಿದ್ದರೂ, ನುಡಿಗಟ್ಟುಗಳ ಆನಂದದಾಯಕ ತಿರುವುಗಳು ಉಳಿದ ಸಾರ್ವಜನಿಕರಿಂದ ಹೆಚ್ಚಿನ ಆಸಕ್ತಿಯನ್ನು ಗಳಿಸಿದವು. ಸಾಂಪ್ರದಾಯಿಕ ಪೀಟರ್ ಪೈಪರ್ ಫ್ರೆಂಚ್ ತೋಟಗಾರಿಕಾ ತಜ್ಞರನ್ನು ಆಧರಿಸಿದೆ, ಅವರು ಪಿಯರೆ ಪೊಯಿವ್ರೆ ಎಂಬ ಹೆಸರಿನಿಂದ ಬಂದರು. ಅವರು ಫ್ರೆಂಚ್ ಮೆಡಿಟರೇನಿಯನ್ನಲ್ಲಿ ಅಮೇರಿಕನ್ ಮಸಾಲೆ ಬೆಳೆಯುವ ಸಾಧ್ಯತೆಯನ್ನು ಅನ್ವೇಷಿಸುತ್ತಿದ್ದಾರೆಂದು ತಿಳಿದುಬಂದಿದೆ.'ಟಂಗ್ ಟ್ವಿಸ್ಟರ್' ಎಂಬ ಪದವನ್ನು ಮೊದಲು 1895 ರಲ್ಲಿ ರಚಿಸಲಾಯಿತು. ನಾಲಿಗೆ ಟ್ವಿಸ್ಟರ್ಗಳ ಗಣನೀಯ ಭಾಗವು ಉಚ್ಚಾರಣೆಯಲ್ಲಿ ತೊಂದರೆಯನ್ನು ಸೃಷ್ಟಿಸಲು ಪರ್ಯಾಯವಾಗಿ ಒಂದೇ ರೀತಿಯ ಆದರೆ ವಿಭಿನ್ನ ಧ್ವನಿಮಾಗಳನ್ನು ಅವಲಂಬಿಸಿದೆ. ಕೆಲವರು ಉಪನಾಮ ಮತ್ತು ಪ್ರಾಸಗಳನ್ನು ಬಳಸುತ್ತಾರೆ, ಇತರರು ಸಂಯುಕ್ತ ಪದಗಳು ಮತ್ತು ಅವುಗಳ ಅನುಗುಣವಾದ ಕಾಂಡಗಳನ್ನು ಬಳಸುತ್ತಾರೆ, ಆದರೆ ಕೆಲವು ಪದಗಳು ಅಥವಾ ಚಿಕ್ಕ ಪದಗುಚ್ಛಗಳು ಪದೇ ಪದೇ ಮಾತನಾಡುವಾಗ ನಾಲಿಗೆ ಟ್ವಿಸ್ಟರ್ ಆಗುತ್ತವೆ. ಕೆಲವು ನಾಲಿಗೆ ಟ್ವಿಸ್ಟರ್ಗಳನ್ನು ಸ್ಥಳೀಯರಲ್ಲದವರು ಪದಗಳನ್ನು ಸರಿಯಾಗಿ ಉಚ್ಚರಿಸಲು ಬಳಸುತ್ತಾರೆ.ನಾಲಿಗೆ ಟ್ವಿಸ್ಟರ್ಗಳು ಮತ್ತು ಉತ್ತಮ ಸ್ವಭಾವದ ನಾಲಿಗೆ ಟ್ವಿಸ್ಟರ್ ಸ್ಪರ್ಧೆಗಳನ್ನು ಪ್ರಶಂಸಿಸಲು ಅಂತರರಾಷ್ಟ್ರೀಯ ಟಾಂಗ್ ಟ್ವಿಸ್ಟರ್ ಸ್ಪರ್ಧೆ ದಿನವನ್ನು ಆಚರಿಸಲಾಗುತ್ತದೆ. ವಿಸ್ಕಾನ್ಸಿನ್ನ ಬರ್ಲಿಂಗ್ಟನ್ನಲ್ಲಿರುವ ಲಾಜಿಕ್ ಪಜಲ್ ಮ್ಯೂಸಿಯಂನಲ್ಲಿ ನಡೆದ ವಾರ್ಷಿಕ ಅಂತರರಾಷ್ಟ್ರೀಯ ಟಂಗ್ ಟ್ವಿಸ್ಟರ್ ಸ್ಪರ್ಧೆಯನ್ನು ದಿನವು ನೆನಪಿಸುತ್ತದೆ. ಸ್ಪರ್ಧೆಯನ್ನು ಮೊದಲು 2008 ರಲ್ಲಿ ಆಯೋಜಿಸಲಾಯಿತು

ಸಂಜೆ ಮುಗಿಲು
ಸೋಮವಾರ
26.2.2024


## ಜಿಮೇಲ್ ಬಂದ್ ಮಾಡ್ತಿಲ್ಲ: Google ಸ್ಪಷ್ಟನೆ

**ದೆಹಲಿ:** ನೀವು ಗೂಗಲ್‌ನ ಜಿಮೇಲ್ ಬಳಸುತ್ತಿರಬೇಕು. ಜಿಮೇಲ್ ಇಂದು ವಿಶ್ವದಲ್ಲಿ ಹೆಚ್ಚು ಬಳಸಲಾಗುವ ಇ-ಮೇಲ್ ಅಪ್ಲಿಕೇಶನ್ ಆಗಿದೆ. ಜಿಮೇಲ್ ಅನ್ನು ವೈಯಕ್ತಿಕವಾಗಿ ಮತ್ತು ವೃತ್ತಿಪರವಾಗಿ ಬಳಸಲಾಗುತ್ತದೆ. ಜಿಮೇಲ್ ಕಂಪನಿಗಳಿಗಾಗಿ ಒಂದು ಸೇವೆಯನ್ನು ಸಹ ಹೊಂದಿದೆ.

2024 ಆಗಸ್ಟ್‌ನಲ್ಲಿ ಜಿಮೇಲ್ ಬಂದ್ ಆಗಲಿದೆ ಎಂದು ಅನೇಕ ವರದಿಗಳು ಹೇಳಿವೆ.

ಜಿಮೇಲ್ ಸಂಪೂರ್ಣವಾಗಿ ಮುಚ್ಚಲ್ಪಡುತ್ತದೆ ಎಂದು ಹೇಳಲಾಗಿದೆ. ಅದರ ನಂತರ ನೀವು ಜಿಮೇಲ್ ಸೇವೆಗಳನ್ನು ಬಳಸಲು ಸಾಧ್ಯವಾಗುವುದಿಲ್ಲ. ಎಕ್ಸ್‌ನಲ್ಲಿ ಜಿಮೇಲ್ ಮುಚ್ಚುವ ಬಗ್ಗೆ ಅನೇಕ ಹೇಳಿಕೆಗಳು ಇದ್ದವು, ಮತ್ತು ಈ ಮಧ್ಯೆ, ಎಲೋನ್ ಮಸ್ಕ್ ಎಕ್ಸ್‌ಮೇಲ್ ಆಗಮನವನ್ನು ದೃಢಪಡಿಸಿದರು. ಅದರ ನಂತರ ಜನರು ಜಿಮೇಲ್ ನಿಜವಾಗಿಯೂ ಮುಚ್ಚಲ್ಪಡುತ್ತದೆ ಎಂದು ಭಾವಿಸಿದ್ದರು, ಆದರೆ ಈ ಹೇಳಿಕೆ ಸಂಪೂರ್ಣವಾಗಿ ಸುಳ್ಳು. ಜಿಮೇಲ್ ಮುಚ್ಚುವುದಿಲ್ಲ. ಗೂಗಲ್ ಸ್ವತಃ ಈ ಮಾಹಿತಿಯನ್ನು ಎಕ್ಸ್‌ನಲ್ಲಿ ಪೋಸ್ಟ್‌ನಲ್ಲಿ ನೀಡಿದೆ. ಜಿಮೇಲ್ ತನ್ನ ಪೋಸ್ಟ್‌ನಲ್ಲಿ ಜಿಮೇಲ್ ದೀರ್ಘಕಾಲ ಉಳಿಯುತ್ತದೆ ಎಂದು ಹೇಳಿದೆ. ವಾಸ್ತವವಾಗಿ, ಯಾರೂ ಬಳಸದ ಜಿಮೇಲ್ನ ಮೂಲ ಎಚ್ಟಿಎಮ್‌ಎಲ್ ಆವೃತ್ತಿಯನ್ನು ಗೂಗಲ್ ಸ್ಥಗಿತಗೊಳಿಸಲಿದೆ. ಇದನ್ನು ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಘೋಷಿಸಲಾಯಿತು.



## ಬ್ರಿಟನ್ ಸಂಸತ್ತಿನಲ್ಲಿ ಕಾಶ್ಮೀರಿ ಪತ್ರಕರ್ತೆ ಯಾನ್ ಮಿರ್ ಭಾಷಣಕ್ಕೆ ಚಪ್ಪಾಳೆ

**ಲಂಡನ್:** ಜಮ್ಮು ಮತ್ತು ಕಾಶ್ಮೀರದ ವಿಚಾರದಲ್ಲಿ ಆಗಾಗ್ಗೆ ಮೂಗು ತೂರಿಸುವ ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತೆ ಪಾಕ್ ಮೂಲದ ಹೋರಾಟಗಾರ್ತಿ ಮಲಾಲಾ ಯೂಸುಫ್ಝಾಗೆ ಜಮ್ಮು ಮತ್ತು ಕಾಶ್ಮೀರದ ಸಾಮಾಜಿಕ ಕಾರ್ಯಕರ್ತೆ, ಪತ್ರಕರ್ತೆ ಯಾನಾ ಮೀರ್ ಬ್ರಿಟನ್ ಸಂಸತ್ನಲ್ಲಿ ತಿರುಗೇಟು ನೀಡಿದ್ದಾರೆ.ನಾನು ಮಲಾಲಾ ರೀತಿ ಅಲ್ಲ, ಭಾರತದ ಭಾಗವಾಗಿರುವ ನನ್ನ ತಾಯ್ನಾಡು ಕಾಶ್ಮೀರದಲ್ಲಿ ಸುರಕ್ಷಿತ ಮತ್ತು ಸ್ವತಂತ್ರವಾಗಿದ್ದೇನೆ. ನಾನು ನನ್ನ ದೇಶವನ್ನು ತೊರೆಯಲ್ಲ. ಅಲ್ಲಿ ಶಾಂತಿ ನೆಲೆಸಿದೆ, ಮಾನವಹಕ್ಕುಗಳ ರಕ್ಷಣೆ ಆಗ್ತಿದೆ ಎಂದು ಯಾನಾ ಮೀರ್ ಭಾರತವನ್ನು ಹಾಡಿಹೊಗಳಿದ್ದಾರೆ.

ಜಾಗತಿಕವಾಗಿ ಯಾರೇ ಆಗಲಿ ನನ್ನ ದೇಶದ ಬಗ್ಗೆ ಕೆಟ್ಟದಾಗಿ ಮಾತಾಡಿದ್ರೆ, ಸಹಿಸಲ್ಲ. ಸೋಶಿಯಲ್ ಮೀಡಿಯಾದಲ್ಲಿಯೂ ನನ್ನ ಮಾತೃಭೂಮಿ ಬಗ್ಗೆ ಕೆಟ್ಟದಾಗಿ ಮಾತಾಡೋದನ್ನು ಸಹಿಸಲ್ಲ ಎಂದು ಖಡಕ್ಕಾಗಿ ಹೇಳಿದ್ದಾರೆ. ಯಾನಾ ಮೀರ್ ಅವರು ಬ್ರಿಟನ್ ಸಂಸತ್ನಲ್ಲಿ ಮಾತನಾಡಿರುವ ವೀಡಿಯೋ ಸೋಶಿಯಲ್ ಮೀಡಿಯಾದಲ್ಲಿ ಸದ್ದು ಮಾಡುತ್ತಿವೆ. ಕೋಟಿ ಕೋಟಿ ಭಾರತೀಯರು ಯಾನ ಮೀರ್ ಮಾತಿಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

## ಯುಪಿಯಲ್ಲಿ ಭಾರತ್ ಜೋಡೋ ನ್ಯಾಯ ಯಾತ್ರೆ; ಅಖಿಲೇಶ್ ಯಾದವ್ ಜೊತೆ ರಾಹುಲ್ ಗಾಂಧಿ ಸೆಲ್ಫಿ

**ಲಕ್ನೋ:** ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಇಂದು ಆಗ್ರಾದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ 'ಭಾರತ್ ಜೋಡೋ ನ್ಯಾಯ ಯಾತ್ರೆ'ಯಲ್ಲಿ ಪಾಲ್ಗೊಂಡಿದ್ದರು. ಇಬ್ಬರು ನಾಯಕರ ನಡುವಿನ ಆತ್ಮೀಯತೆಯನ್ನು ಎತ್ತಿ ತೋರಿಸುವ ಹಲವಾರು ಫೋಟೋಗಳು ವೈರಲ್ ಆಗಿವೆ. ಯಾತ್ರೆ ವೇಳೆ ಅಖಿಲೇಶ್ ಯಾದವ್ ಜೊತೆ ರಾಹುಲ್ ಗಾಂಧಿ ಸೆಲ್ಫಿ ತೆಗೆದುಕೊಂಡಿದ್ದಾರೆ. ಉಭಯ ಪಕ್ಷಗಳ ನಾಯಕರು, ಕಾರ್ಯಕರ್ತರು ಸೋಷಿಯಲ್ ಮೀಡಿಯಾ ಖಾತೆಗಳಲ್ಲಿ ಹಂಚಿಕೊಂಡಿರುವ ಫೋಟೊಗಳು ಗಮನ ಸೆಳೆಯುತ್ತಿವೆ. ಭಾರತ್ ಜೋಡೋ ನ್ಯಾಯ ಯಾತ್ರೆಯಲ್ಲಿ ರಾಹುಲ್ ಗಾಂಧಿ ಜೊತೆ ಅಖಿಲೇಶ್ ಯಾದವ್ ಪಾಲ್ಗೊಂಡಿದ್ದರು. ಇಬ್ಬರೂ ನಾಯಕರು ಕೆಂಪು ಜೀಪಿನ ಮೇಲೆ ಒಟ್ಟಿಗೆ ಪೋಸ್ ನೀಡುತ್ತಿರುವುದು ಫೋಟೊದಲ್ಲಿ ಇದೆ.ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷದ ಕಾರ್ಯಕರ್ತರು ಅಖಿಲೇಶ್ ಯಾದವ್ ಮತ್ತು ರಾಹುಲ್ ಗಾಂಧಿ ಅವರನ್ನು ಬೆಂಬಲಿಸಿ ಘೋಷಣೆಗಳನ್ನು ಕೂಗಿದರು. ಇಬ್ಬರು ನಾಯಕರು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರೊಂದಿಗೆ ಯಾತ್ರೆಗೆ ನೆರೆದಿದ್ದ ಜನರತ್ತ ಕೈ ಬೀಸಿದ ಫೋಟೊಗಳು ಸಹ ವೈರಲ್ ಆಗಿವೆ.



## ಪಾಕಿಸ್ತಾನಕ್ಕೆ ಶಾಕ್: ರಾವಿ ನದಿ ನೀರು ಬಂದ್!



**ಶ್ರೀನಗರ:** ಆರ್ಥಿಕ ಸಮಸ್ಯೆಗಳಿಂದ ಕಂಗೆಟ್ಟಿರುವ ಪಾಕಿಸ್ತಾನಕ್ಕೆ ಮತ್ತೊಂದು ಶಾಕ್ ಎದುರಾಗಿದೆ.

ಹೌದು, ಸುಮಾರು ಮೂರು ದಶಕಗಳಿಂದ ಪಾಕಿಸ್ತಾನಕ್ಕೆ ಹರಿಸುತ್ತಿದ್ದ ನೀರನ್ನು ಡ್ಯಾಮ್ ಕಟ್ಟುವ ಮೂಲಕ ಕೇಂದ್ರ ಸರ್ಕಾರವು ಸ್ಥಗಿತಗೊಳಿಸಿ ಪಾಕಿಸ್ತಾನಕ್ಕೆ ದೊಡ್ಡ ಶಾಕ್ ನೀಡಿದೆ.

ಈಗಲೇ ಪಂಜಾಬ್ ಮತ್ತು ಜಮ್ಮು ಮತ್ತು ಕಾಶ್ಮೀರದ ಗಡಿಯಲ್ಲಿರುವ ಶಹಪುರ್ ಕಂಡಿ ಬ್ಯಾರೇಜ್ನ ಕಾಮಗಾರಿ ಪೂರ್ಣಗೊಂಡ ನಂತರ ಪಾಕಿಸ್ತಾನಕ್ಕೆ ರಾವಿ ನದಿಯಿಂದ ನೀರು ಹರಿಸುವುದನ್ನು ಸಂಪೂರ್ಣವಾಗಿ ನಿಲ್ಲಿಸಲಾಗಿದೆ

1995ರಿಂದಲೂ ನನೆಗುದಿಗೆ ಬಿದ್ದಿದ್ದ ಶಾಹ್ಪುರ ಕಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದ್ದು, ರಾವಿ ನದಿಯಿಂದ ಪಾಕಿಸ್ತಾನಕ್ಕೆ ಹರಿಯುತ್ತಿದ್ದ ನೀರನ್ನು ಸಂಪೂರ್ಣವಾಗಿ ನಿಲ್ಲಿಸಲಾಗಿದೆ. ಇದರಿಂದ ಪಾಕಿಸ್ತಾನದ ಕೃಷಿಗೆ ಭಾರಿ ಪೆಟ್ಟು ಬೀಳುವ ಜತೆಗೆ ಭಾರತದ ಲಕ್ಷಾಂತರ ರೈತರಿಗೆ ಈ ನದಿಯ ನೀರಿನಿಂದ ಹೆಚ್ಚಿನ ಪ್ರಮಾಣದಲ್ಲಿ ಅನುಕೂಲವಾಗಲಿದೆ.

### 1995ರಿಂದಲೂ ಈ ಯೋಜನೆಗೆ ಅಡೆತಡೆಗಳು ಇದ್ದವು

ರಾವಿ ನದಿಗೆ ಅಡ್ಡಲಾಗಿ ಅಣೆಕಟ್ಟೆ ಕಟ್ಟಬೇಕು ಎಂಬ ಯೋಜನೆಯು ಹಲವು ಕಾರಣಗಳಿಂದಾಗಿ ನನೆಗುದಿಗೆ ಬಿದ್ದಿತ್ತು. 1995ರಲ್ಲಿ ಪಿ.ವಿ. ನರಸಿಂಹರಾವ್ ಅವರು ಪ್ರಧಾನಿಯಾಗಿದ್ದಾಗ ಅಣೆಕಟ್ಟೆ ಕಟ್ಟುವ ಯೋಜನೆ ರೂಪಿಸಲಾಗಿತ್ತು. ಆದರೆ, ಹತ್ತಾರು ಅಡೆತಡೆಗಳಿಂದಾಗಿ ಯೋಜನೆಯು ನನೆಗುದಿಗೆ ಬಿದ್ದಿತ್ತು. ಆದರೆ, 2018ರಲ್ಲಿ ಅಣೆಕಟ್ಟೆ ನಿರ್ಮಾಣ ಕಾಮಗಾರಿಯನ್ನು ಆರಂಭಿಸಲಾಗಿತ್ತು. ಈಗ ಆರು ವರ್ಷಗಳಲ್ಲಿಯೇ ಕಾಮಗಾರಿ ಪೂರ್ಣಗೊಂಡಿದೆ. ಈಗ ನದಿಯ ನೀರು ಪಾಕಿಸ್ತಾನಕ್ಕೆ ಹರಿಯದೆ, ಭಾರತದ ರೈತರು ನೀರಿನ ಲಾಭ ಪಡೆಯಲಿದ್ದಾರೆ.

### ಭಾರತಕ್ಕೆ ಉಳಿತಾಯವಾದ ನೀರು

ಈಗಾಗಲೇ ಪಾಕಿಸ್ತಾನಕ್ಕೆ ನೀರು ಹರಿಸುವುದನ್ನು ನಿಲ್ಲಿಸಲಾಗಿದೆ. ಇದರಿಂದಾಗಿ ಜಮ್ಮು-ಕಾಶ್ಮೀರ ಹಾಗೂ ಪಂಜಾಬ್ನ 32 ಸಾವಿರ ಹೆಕ್ಟೇರ್ ಜಮೀನುಗಳಿಗೆ ನೀರು ಹರಿಸಬಹುದಾಗಿದೆ. ಸುಮಾರು 1,150 ಕ್ಯುಸೆಕ್ ನೀರು ಉಳಿತಾಯವಾಗುವುದರಿಂದ ಲಕ್ಷಾಂತರ ರೈತರು ಉತ್ತಮ ಬೆಳೆ ಬೆಳೆಯಲು ಸಹಕಾರಿಯಾಗಲಿದೆ. ಅದರಲ್ಲೂ, ಜಮ್ಮು-ಕಾಶ್ಮೀರದ ಕಠುವಾ, ಸಾಂಬಾ ರೈತರು ಅಣೆಕಟ್ಟಿನ ಲಾಭ ಪಡೆಯಲಿದ್ದಾರೆ.

# ಮನ್ ಕಿ ಬಾತ್ ಮಾಡುವುದಿಲ್ಲ
## ಪ್ರಧಾನಿ ನರೇಂದ್ರ ಮೋದಿ ಹೇಳಿಕೆ



**ನವದೆಹಲಿ:** ಪ್ರಧಾನಿ ಮೋದಿ ಅವರು ತಮ್ಮ ನೆಚ್ಚಿನ ರೇಡಿಯೋ ಕಾರ್ಯಕ್ರಮ 'ಮನ್ ಕಿ ಬಾತ್' ಕಾರ್ಯಕ್ರಮದ ಮೂಲಕ ದೇಶವಾಸಿಗಳೊಂದಿಗೆ ಸಂವಾದ ನಡೆಸಿದರು. ಈ ಸಂದರ್ಭದಲ್ಲಿ ಅವರು ಡ್ರೋನ್ ದೀದಿ ಯೋಜನೆಯ ಬಗ್ಗೆಯೂ ಮಾತನಾಡಿದ ಪ್ರಧಾನಿ ಮೋದಿ, ದೇಶದಲ್ಲಿ ದೀದಿ ಡ್ರೋನ್ ಕುರಿತು ಚರ್ಚೆ ನಡೆಯುತ್ತಿದೆ. ಎಲ್ಲಾ ಕ್ಷೇತ್ರದಲ್ಲೂ ಮಹಿಳಾ ಶಕ್ತಿ ಮುಂದಿದೆ. 'ಕೆಲವು ದಿನಗಳಲ್ಲಿ ಅಂದರೆ ಮಾರ್ಚ್ 8 ರಂದು ನಾವು ಮಹಿಳಾ ದಿನವನ್ನು ಆಚರಿಸುತ್ತೇವೆ. ಈ ವಿಶೇಷ ದಿನವು ದೇಶದ ಅಭಿವೃದ್ಧಿಯಲ್ಲಿ ಮಹಿಳೆಯರ ಕೊಡುಗೆಯನ್ನು ವಂದಿಸಲು ಅವಕಾಶವನ್ನು ಒದಗಿಸುತ್ತದೆ ಎಂದರು. ಸಂವಾದದ ಕೊನೆಯಲ್ಲಿ ಮಾರ್ಚ್ ತಿಂಗಳಲ್ಲಿ ಲೋಕಸಭೆ ಚುನಾವಣೆ ಇರುವುದರಿಂದ ನೀತಿ ಸಂಹಿತೆ ಜಾರಿಯಾಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಮುಂದಿನ ಮೂರು ತಿಂಗಳ ಕಾಲ ಮನ್ ಕಿ ಬಾತ್ ಕಾರ್ಯಕ್ರಮವನ್ನು ಪ್ರಸಾರ ಮಾಡುವುದಿಲ್ಲ ಎಂದು ಹೇಳಿದ್ದಾರೆ.

### ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ

**ಗಾಂಧಿನಗರ:** ಇತರರ ಗ್ಯಾರಂಟಿಗಳು ಎಲ್ಲಿ ಕೊನೆಗೊಳ್ಳುತ್ತವೆಯೋ, ಅಲ್ಲಿಂದ ಮೋದಿ ಗ್ಯಾರಂಟಿ ಪ್ರಾರಂಭವಾಗುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಅಭಯ ನೀಡಿದರು. ಗುಜರಾತ್ ಪ್ರವಾಸದಲ್ಲಿದ್ದ ಪ್ರಧಾನಿ ಮೋದಿ ಅವರಿಂದು ರಾಜ್‌ಕೋಟ್, ಪಂಜಾಬ್‌ನ ಬಟಿಂಡಾ, ಉತ್ತರ ಪ್ರದೇಶದ ರಾಯ್‌ಬರೇಲಿ, ಪಶ್ಚಿಮ ಬಂಗಾಳದ ಕಲ್ಯಾಣಿ ಮತ್ತು ಆಂಧ್ರಪ್ರದೇಶದ ಮಂಗಳಗಿರಿಯಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಿದರು. 23 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ 11,500 ಕೋಟಿ ರೂ. ವೆಚ್ಚದ 200ಕ್ಕೂ ಹೆಚ್ಚು ಆರೋಗ್ಯ ರಕ್ಷಣೆ ಮೂಲಸೌಕರ್ಯ ಯೋಜನೆಗಳಿಗೆ ಚಾಲನೆ ನೀಡಿದರು. ನಮ್ಮ ಸರ್ಕಾರ ಕಳೆದ 10 ವರ್ಷಗಳಲ್ಲಿ 10 ಏಮ್ಸ್ ಆಸ್ಪತ್ರೆಗಳ ಸ್ಥಾಪನೆಗೆ ಕ್ರಮ ಕೈಗೊಂಡಿದೆ. ಈ ಅವಧಿಯಲ್ಲಿ ಏಮ್ಸ್ ಹೊರತುಪಡಿಸಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳೂ ಒಂದರ ಹಿಂದೆ ಒಂದರಂತೆ ತಲೆ ಎತ್ತುತ್ತಿವೆ ಎಂದು ಸರ್ಕಾರದ ಸಾಧನೆ ಶ್ಲಾಘಿಸಿದರು.

## ಬಿಹಾರದಲಿ ಸರಣಿ ಅಪಘಾತ- 9 ಮಂದಿ ದುರ್ಮರಣ

**ಪಾಟ್ನಾ:** ಟ್ರಕ್, ಜೀಪ್ ಮತ್ತು ಬೈಕ್ ನಡುವೆ ಸಂಭವಿಸಿದ ಸರಣಿ ಅಪಘಾತದಲ್ಲಿ ಇಬ್ಬರು ಮಹಿಳೆಯರು ಸೇರಿದಂತೆ ಒಂಬತ್ತು ಜನ ಸಾವನ್ನಪ್ಪಿದ ಘಟನೆ ಬಿಹಾರದ ಕೈಮೂರ್‌ನಲ್ಲಿ ನಡೆದಿದೆ. ಜೀಪ್‌ನಲ್ಲಿ ಇಬ್ಬರು ಮಹಿಳೆಯರು ಸೇರಿದಂತೆ 8 ಮಂದಿ ಪ್ರಯಾಣಿಸುತ್ತಿದ್ದರು. ಈ ವೇಳೆ ಅದೇ ದಿಕ್ಕಿನಲ್ಲಿ ಚಲಿಸುತ್ತಿದ್ದ ಬೈಕ್‌ಗೆ ಜೀಪ್ ಡಿಕ್ಕಿ ಹೊಡೆದಿದೆ. ಬಳಿಕ ಎದುರಿನಿಂದ ಬರುತ್ತಿದ್ದ ಟ್ರಕ್ ಬೈಕ್ ಮತ್ತು ಟ್ರಕ್‌ಗೆ ಡಿಕ್ಕಿಯಾಗಿದೆ. ಪರಿಣಾಮ ಸ್ಥಳದಲ್ಲೇ ಬೈಕ್ ಸವಾರ ಹಾಗೂ ಜೀಪ್‌ನಲ್ಲಿದ್ದ 8 ಜನ ಸೇರಿದಂತೆ 9 ಮಂದಿ ಸಾವನ್ನಪ್ಪಿದ್ದಾರೆ. ಅಪಘಾತದ ಬಳಿಕ ಟ್ರಕ್ ಬಿಟ್ಟು ಚಾಲಕ ಪರಾರಿಯಾಗಿದ್ದಾನೆ. ಟ್ರಕ್‌ನ್ನು ವಶಪಡಿಸಿಕೊಳ್ಳಲಾಗಿದೆ ಮತ್ತು ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ. ಅಪಘಾತದಲ್ಲಿ ಮೃತಪಟ್ಟವರ ಗುರುತು ಇನ್ನೂ ಪತ್ತೆಯಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಅಪಘಾತದ ಬಗ್ಗೆ ಬಿಹಾರ ಸಿಎಂ ನಿತೀಶ್ ಕುಮಾರ್ ತೀವ್ರ ಸಂತಾಪ ಸೂಚಿಸಿದ್ದಾರೆ.



# ಸಮುದ್ರದಾಳದಲ್ಲಿರುವ ದ್ವಾರಕೆಗೆ ಭೇಟಿ ನೀಡಿದ ಪ್ರಧಾನಿ ಮೋದಿ

**ದ್ವಾರಕೆ:** ಪ್ರಧಾನಿ ಮೋದಿ ಕೃಷ್ಣನ ದ್ವಾರಕೆಯನ್ನು ಕಣ್ತುಂಬಿಕೊಳ್ಳಲು ನವಿಲುಗರಿಗಳ ಹಿಡಿದು ಸಮುದ್ರದಾಳಕ್ಕೆ ಹೋಗಿದ್ದಾರೆ. ಪ್ರಧಾನಿ ಮೋದಿ ಗುಜರಾತ್ ಪ್ರವಾಸದ 2ನೇ ದಿನಕ್ಕೆ ಕಾಲಿಟ್ಟಿದ್ದಾರೆ. ಇಂದು ಸ್ಕೂಬಾ ಡೈವಿಂಗ್ ಮೂಲಕ ದ್ವಾರಕೆಗೆ ತೆರಳಿದ್ದಾರೆ, ಮುಳುಗಡೆಯಾಗಿರುವ ದ್ವಾರಕಾನಗರಕ್ಕೆ ತೆರಳಿ ಪ್ರಾರ್ಥನೆ ಸಲ್ಲಿಸಿದ್ದಾರೆ. ಈ ದೃಶ್ಯವನ್ನು ತಮ್ಮ ಎಕ್ಸ್ ಖಾತೆಯಲ್ಲಿ ಮೋದಿ ಅವರು ಹಂಚಿಕೋಂಡಿದ್ದಾರೆ. ಶ್ರೀಕೃಷ್ಣ ದ್ವಾರಕೆಯ ರಾಜನಾಗಿದ್ದ, ಪ್ರಧಾನಿ ಮೋದಿ ನಗರದ ಭವ್ಯತೆ ಹಾಗೂ ಸಮೃದ್ಧಿಯನ್ನು ನೆನಪಿಸಿಕೊಂಡು ಗೌರವ ಸಲ್ಲಿಸಿದರು. ಈ ಸಂದರ್ಭದಲ್ಲಿ, ಅವರು ದ್ವಾರಕಾದಲ್ಲಿ ಸುದರ್ಶನ ಸೇತುವನ್ನು ಉದ್ಘಾಟಿಸಿದರು, ಇದು ದೇಶದ ಅತಿ ಉದ್ದದ ಕೇಬಲ್ ಬೆಂಬಲಿತ ಸೇತುವೆಯಾಗಿದೆ. ನಾನು ಸಮುದ್ರದ ಆಳಕ್ಕೆ ಹೋಗಿ ಪ್ರಾಚೀನ ದ್ವಾರಕಾ ನಗರದ 'ದರ್ಶನ' ಮಾಡಿದೆ. ಪುರಾತತ್ತ್ವ ಶಾಸ್ತ್ರಜ್ಞರು ನೀರಿನ ಅಡಿಯಲ್ಲಿ ಅಡಗಿರುವ ದ್ವಾರಕಾ ನಗರದ ಬಗ್ಗೆ ಸಾಕಷ್ಟು ಬರೆದಿದ್ದಾರೆ. ನಮ್ಮ ಧರ್ಮಗ್ರಂಥಗಳಲ್ಲಿಯೂ, ದ್ವಾರಕಾದ ಬಗ್ಗೆ ಹೇಳಲಾಗುತ್ತದೆ, ಇದು ಸುಂದರವಾದ ದ್ವಾರಗಳು ಮತ್ತು ಎತ್ತರದ ಕಟ್ಟಡಗಳನ್ನು ಹೊಂದಿರುವ ನಗರ ಎಂದು ಹೇಳಲಾಗುತ್ತದೆ. ನವಿಲುಗರಿಗಳನ್ನು ತೆಗೆದುಕೊಂಡು ಹೋಗಿ ಶ್ರೀಕೃಷ್ಣನ ಪಾದಗಳಿಗೆ ಅರ್ಪಿಸಬೇಕೆಂಬ ಹಲವು ವರ್ಷಗಳ ಕನಸು ಇದೀಗ ನನಸಾಗಿದೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.



## ಹಾರ್ಲೆನ್‌ನಲ್ಲಿ ಬೆಂಕಿ ದುರಂತ: ಭಾರತದ ಯುವಕ ಸಾವು



**ನ್ಯೂಯಾರ್ಕ್:** ಬೆಂಕಿ ಅವಘಡದಲ್ಲಿ ಭಾರತ ಮೂಲದ ಯುವಕನೊಬ್ಬ ಮೃತಪಟ್ಟ ಘಟನೆ ನ್ಯೂಯಾರ್ಕ್‌ನ ಹಾರ್ಲೆನ್‌ನಲ್ಲಿನಡೆದಿದೆ. ಕೊಲಂಬಿಯಾದಲ್ಲಿ ಜರ್ನಲಿಸಂ ಪದವೀಧರರಾದ ಫಾಜಿಲ್ ಖಾನ್ ಮೃತರು. ನ್ಯೂಯಾಕ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಫಾಜಿಲ್ ಖಾನ್ ಅನ್ನು ಗುರುತಿಸಿದ್ದು, ಅವರ ಸ್ನೇಹಿತರು ಮತ್ತು ಕುಟುಂಬ ಸದಸ್ಯರನ್ನು ಸಂಪರ್ಕಿಸಿರುವುದಾಗಿ ತಿಳಿಸಿದೆ.ಫಾಜಿಲ್ ಖಾನ್ ಅವರ ಮೃತ ಶರೀರವನ್ನು ಭಾರತಕ್ಕೆ ತರಲು ಎಲ್ಲ ಸಾಧ್ಯವಾದ ವ್ಯವಸ್ಥೆ ಮಾಡುವುದಾಗಿ ಹೇಳಿದೆ.ಕಟ್ಟಡದಲ್ಲಿ ಬೆಂಕಿ ಕಾಣಿಸಿಕೊಂಡಾಗ ಫಾಜಿಲ್ ಖಾನ್ ಅವರನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಗಂಭೀರವಾಗಿ ಗಾಯಗೊಂಡಿದ್ದ ಅವರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಈ ಘಟನೆಯಲ್ಲಿ 17 ಮಂದಿ ಗಾಯಗೊಂಡಿದ್ದಾರೆ ಎನ್ನಲಾಗಿದೆ. ಹಾರ್ಲೆನ್ ಅಪಾರ್ಟ್ ಮೆಂಟ್ ಕಟ್ಟಡದಲ್ಲಿ ಇ-ಬೈಕ್‌ನ ಲಿಥಿಯಂ- ಐಯಾನ್ ಬ್ಯಾಟರಿಯು ಬೆಂಕಿಗೆ ಕಾರಣ. ಕಟ್ಟಡದ ಮೇಲಿನ ಮಹಡಿಯಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ಜನರು ಕಿಟಕಿಗಳಿಂದ ಜಿಗಿಯಲು ಪ್ರಾರಂಭಿಸಿದರು ಎಂದು ಸ್ಥಳೀಯರಾದ ಅಕಿಲ್ ಜೋನ್ಸ್ ಎಂಬವರು ಮಾಧ್ಯಮವೊಂದಕ್ಕೆ ತಿಳಿಸಿದ್ದಾರೆ.

## ದಕ್ಷಿಣ ಕೆರೋಲಿನಾದಲ್ಲಿ ನಿಕ್ಕಿ ಹ್ಯಾಲೆ ವಿರುದ್ಧ ಟ್ರಂಪ್‌ಗೆ ಜಯ



**ವಾಷಿಂಗ್ಟನ್:** 2024ರ ನವೆಂಬರ್ನಲ್ಲಿ ಅಮೆರಿಕದಲ್ಲಿ ಅಧ್ಯಕ್ಷೀಯ ಚುನಾವಣೆಗಳು ನಡೆಯಲಿವೆ. ಏತನ್ಮಧ್ಯೆ, ದಕ್ಷಿಣ ಕೆರೋಲಿನಾದಲ್ಲಿ ನಡೆದ ರಿಪಬ್ಲಿಕನ್ ಪಕ್ಷದ ಪ್ರಾಥಮಿಕ ಚುನಾವಣೆಯಲ್ಲಿ ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ಪ್ರತಿಸ್ಪರ್ಧಿ ನಿಕ್ಕಿ ಹ್ಯಾಲೆ ಅವರನ್ನು ಸೋಲಿಸಿದ್ದಾರೆ ಎಂದು ತಿಳಿದುಬಂದಿದೆ. ನಿಕ್ಕಿ ಹ್ಯಾಲೆ ಅವರ ತವರು ರಾಜ್ಯ, ಆದರೂ ಜನರು ನಿಕ್ಕಿ ಹ್ಯಾಲೆ ಬದಲಾಗಿ ಡೊನಾಲ್ಡ್ ಟ್ರಂಪ್ಗೆ ಮತ ಹಾಕಿದ್ದು, ಟ್ರಂಪ್ ಇಲ್ಲಿ ದೊಡ್ಡ ಮುನ್ನಡೆ ಸಾಧಿಸಿದ್ದಾರೆ. ಎರಡು ಬಾರಿ ಗವರ್ನರ್ ಚುನಾವಣೆಯಲ್ಲಿ ಗೆದ್ದಿದ್ದ ದಕ್ಷಿಣ ಕೆರೋಲಿನಾ ಮೂಲದ ಹ್ಯಾಲೆ ಅವರು ಟ್ರಂಪ್ ಅವರನ್ನು ಸೋಲಿಸಲು ಸಾಧ್ಯವಾಗಲಿಲ್ಲ.

## ಚಾಲಕನಿಲ್ಲದೆ 84 ಕಿಮೀ ಕ್ರಮಿಸಿದ ರೈಲು



**ಶ್ರೀನಗರ:** ಚಾಲಕನಿಲ್ಲದೆ ರೈಲೊಂದು 84 ಕಿ.ಮೀ ದೂರ ಕ್ರಮಿಸಿರುವ ಘಟನೆ ಭಾನುವಾರ (ಫೆ.25 ರಂದು) ನಡೆದಿದೆ. ಜಮ್ಮು ಮತ್ತು ಕಾಶ್ಮೀರದ ಕಥುವಾ ನಿಲ್ದಾಣದಲ್ಲಿ ನಿಂತಿದ್ದ ಸರಕು ಸಾಗಣೆ ರೈಲನ್ನು ಸಿಬ್ಬಂದಿ ಬದಲಾವಣೆಗಾಗಿ ಚಾಲಕ ಮತ್ತು ಸಹ ಚಾಲಕರು ನಿಲ್ಲಿಸಿದ್ದಾರೆ. ಈ ವೇಳೆ ರೈಲಿನ ಇಂಜಿನ್ ಆನ್ ಆಗಿದ್ದ ಕಾರಣ ಹಾಗೂ ಇಳಿಜಾರಿನ ಮಾರ್ಗವಿದ್ದ ಪರಿಣಾಮ ರೈಲು ಚಲಿಸಿದೆ. ಚಾಲಕ ಕೆಳಗಿಳಿಯುವ ಮೊದಲು ಹ್ಯಾಂಡ್ಬ್ರೇಕ್ ನ್ನು ಎಳೆಯಲು ಮರೆತಿದ್ದಾನೆ ಈ ಕಾರಣದಿಂದ ರೈಲು ಮುಂದಕ್ಕೆ ಸಾಗಿದೆ.

ಚಾಲಕನಿಲ್ಲದೆ ರೈಲು 84 ಕಿ.ಮೀ ದೂರ ಕ್ರಮಿಸಿದೆ. ಹೀಗೆ ಸಾಗಿದ ರೈಲನ್ನು ಪಂಜಾಬ್‌ನ ಮುಕೇರಿಯನ್ ಜಿಲ್ಲೆಯಲ್ಲಿ ನಿಲ್ಲಿಸಲಾಗಿದೆ. ಗೂಡ್ಸ್ ರೈಲು ರೈಲ್ವೆ ನಿರ್ಮಾಣಕ್ಕೆ ಸರಕುಗಳನ್ನು ಸಾಗಿಸುತ್ತಿತ್ತು ಎಂದು ರೈಲ್ವೇ ಮೂಲಗಳು ತಿಳಿಸಿವೆ.

ರೈಲನ್ನು ನಿಲ್ಲಿಸಲು ಅಧಿಕಾರಿಗಳು ನಡೆಸಿದ ಬಹು ಪ್ರಯತ್ನಗಳು ವಿಫಲವಾದವು, ಅಂತಿಮವಾಗಿ ಪ್ರಯಾಣಿಕರ ರೈಲುಗಳ ಚಾಲಕರು ಮತ್ತು ಸಿಬ್ಬಂದಿಗಳ ಸಹಾಯದಿಂದ ದಸುಹಾ ಬಳಿಯ ಉಂಚಿ ಬಸ್ಸಿ ಪ್ರದೇಶದಲ್ಲಿ ನಿಲ್ಲಿಸಲು ಸಾಧ್ಯವಾಯಿತು ಎಂದು ಮೂಲಗಳು ಹೇಳಿರುವುದಾಗಿ ವರದಿ ತಿಳಿಸಿದೆ.

## ವೈಮಾನಿಕ ದಾಳಿಗೆ ರಷ್ಯಾ ಸೈನ್ಯದಲ್ಲಿದ್ದ ಭಾರತೀಯ ಮೂಲದ ಯುವಕ ಸಾವು!

**ಮಾಸ್ಕೋ:** ರಷ್ಯಾ-ಉಕ್ರೇನ್ ಗಡಿಯಲ್ಲಿರುವ ಡೊನೆಟ್ಸ್ಕ್‌ನಲ್ಲಿ ಉಕ್ರೇನ್ ನಡೆಸಿದ ವಾಯುದಾಳಿಯಲ್ಲಿ ಗುಜರಾತ್ ಮೂಲದ 23 ವರ್ಷದ ಹೆಮಿಲ್ ಅಶ್ವಿನ್ಭಾಯ್ ಮಂಗುಕಿಯಾ ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ.ರಷ್ಯಾದ ಸೈನ್ಯದಲ್ಲಿ ಭದ್ರತಾ ಸಹಾಯಕರಾಗಿ ನೇಮಕಗೊಂಡಿದ್ದ ಹೆಮಿಲ್ ಫೆಬ್ರವರಿ 21 ರಂದು ಸಾವನ್ನಪ್ಪಿದ್ದಾರೆ.

ಗುಜರಾತ್ನ ಸೂರತ್ ಜಿಲ್ಲೆಯ ನಿವಾಸಿ ಮಂಗುಕಿಯಾ ಅವರನ್ನು 2023ರ ಡಿಸೆಂಬರ್ ನಲ್ಲಿ ರಷ್ಯಾದ ಸೇನೆಗೆ ನೇಮಿಸಲಾಗಿತ್ತು.ಈ ತಿಂಗಳ ಆರಂಭದಲ್ಲಿ ಅವರ ತಂದೆಯ ಪರವಾಗಿ ಕಾರ್ಯನಿರ್ವಹಿಸುವ ಏಜೆಂಟ್ ಮಾಸ್ಕೋದಲ್ಲಿರುವ ಭಾರತೀಯ ರಾಯಬಾರ ಕಚೇರಿಗೆ ಪತ್ರ ಬರೆದು, ಹೆಮಿಲ್ ಅವರನ್ನು ಸ್ವದೇಶಕ್ಕೆ ಕರೆತರಲು ಸಹಾಯವನ್ನು ಕೋರಿದ್ದರು. ವರದಿಯ ಪ್ರಕಾರ, ರಷ್ಯಾದ ಸೈನ್ಯದೊಂದಿಗೆ ಒಪ್ಪಂದದ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಹಲವಾರು ಭಾರತೀಯರು ಸ್ವದೇಶಕ್ಕೆ ಮರಳಲು ಸಹಾಯಕ್ಕಾಗಿ ಭಾರತೀಯ ರಾಯಭಾರ ಕಚೇರಿಯನ್ನು ಕೇಳುತ್ತಿದ್ದಾರೆ. ಫೆಬ್ರವರಿ 20 ರಂದು ಮಂಗುಕಿಯಾ ಅವರ ತಂದೆ ಅಶ್ವಿನ್ಭಾಯ್ ತನ್ನ ಮಗನೊಂದಿಗೆ ಕೊನೆಯದಾಗಿ ಮಾತನಾಡಿದ್ದಾರೆ ಎಂದು ವರದಿಯಾಗಿದೆ.



ರಷ್ಯಾ-ಉಕ್ರೇನ್ ಯುದ್ಧದಲ್ಲಿ ರಷ್ಯಾ ಪರವಾಗಿ ಕೆಲಸ ಮಾಡುತ್ತಿರುವ ಭಾರತದ ಯುವಕರನ್ನು ರಕ್ಷಿಸಬೇಕು ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯಕ್ಕೆ ಯುವಕರ ಪೋಷಕರು ಮನವಿ ಮಾಡಿದ್ದಾರೆ. ಭಾರತೀಯ ಯುವಕರಿಗೆ ಹಣದ ಆಮಿಷವೊಡ್ಡಿ, ಅವರನ್ನು ಸೇನೆಯ ಏಜೆಂಟ್ಗಳನ್ನಾಗಿ ರಷ್ಯಾ ನೇಮಕ ಮಾಡಿಕೊಂಡಿದೆ.

## ಇಸ್ರೇಲ್-ಹಮಾಸ್ ಕದನ ವಿರಾಮ: ಖತರ್ ಆತಿಥ್ಯ

**ಕೈರೊ:** ಗಾಝಾದಲ್ಲಿ ಕದನ ವಿರಾಮದ ಕುರಿತು ಖತರ್ ರಾಜಧಾನಿ ದೋಹಾದಲ್ಲಿ ಮಾತುಕತೆ ಪುನರಾರಂಭಗೊಂಡಿದ್ದು ಈಜಿಪ್ಟ್, ಖತರ್, ಅಮೆರಿಕ, ಇಸ್ರೇಲ್ ಹಾಗೂ ಹಮಾಸ್ನ ಪ್ರತಿನಿಧಿಗಳು ಪಾಲ್ಗೊಂಡಿದ್ದಾರೆ ಎಂದು ಈಜಿಪ್ಟ್‌ನ ಮಾಧ್ಯಮಗಳು ವರದಿ ಮಾಡಿವೆ.ಶುಕ್ರವಾರ ಇಸ್ರೇಲ್ನ ಗುಪ್ತಚರ ವಿಭಾಗ 'ಮೊಸಾದ್'ನ ಮುಖ್ಯಸ್ಥ ಡೇವಿಡ್ ಬಾರ್ನಿಯಾ ನೇತೃತ್ವದ ಇಸ್ರೇಲ್ ನಿಯೋಗ ಫ್ರಾನ್ಸ್‌ನ ಪ್ಯಾರಿಸ್ನಲ್ಲಿ ನಡೆದ ಸಭೆಯಲ್ಲಿ ಪಾಲ್ಗೊಂಡಿದ್ದು ಗಾಝಾದಲ್ಲಿ ಹಮಾಸ್ ಒತ್ತೆಸೆರೆಯಲ್ಲಿರುವವರ ಬಿಡುಗಡೆಗೆ ಪ್ರತಿಯಾಗಿ ಇಸ್ರೇಲ್ನಲ್ಲಿ ಬಂಧನದಲ್ಲಿರುವ ಫೆಲೆಸ್ತೀನಿಯನ್ ಕೈದಿಗಳ ಬಿಡುಗಡೆಯ ಬಗ್ಗೆ ಚರ್ಚಿಸಿದ್ದಾರೆ. ಜತೆಗೆ, ಶನಿವಾರ ಇಸ್ರೇಲ್ನ ಯುದ್ಧಕಾಲದ ಸಂಪುಟ ಸಭೆಯಲ್ಲಿ ಖತರ್ ನಲ್ಲಿ ನಡೆಯುವ ಸಂಧಾನ ಮಾತುಕತೆಗೆ ನಿಯೋಗ ರವಾನಿಸಲು ನಿರ್ಧರಿಸಲಾಗಿದೆ ಎಂದು ಇಸ್ರೇಲ್ನ ಮಾಧ್ಯಮಗಳು ವರದಿ ಮಾಡಿವೆ. ಪ್ಯಾರಿಸ್ನಲ್ಲಿ ಚರ್ಚಿಸಲಾದ ವಿಷಯಗಳನ್ನು ಖತರ್ನಲ್ಲಿ ನಡೆಯುವ ಮಾತುಕತೆಯಲ್ಲಿ ಮುಂದುವರಿಸಲಾಗುವುದು. ಆ ಬಳಿಕ ಈಜಿಪ್ಟ್ನ ಕೈರೋದಲ್ಲಿ ಮತ್ತೊಂದು ಹಂತದ ಸಭೆ ನಡೆಯಲಿದೆ ಎಂದು ಈಜಿಪ್ಟ್ನ ಅಲ್-ಖಹೆರಾ ನ್ಯೂಸ್ ವರದಿ ಮಾಡಿದೆ.



Postal Registration No.KA/BGW-1823/2019-2021, Posted at Patrika Channel, RMS Bhavan, Bengaluru PSO, Mysore Road, Bengaluru- 560020, RNI No.KARKAN/2002/08054

# ದೇಹದ ತೂಕ ಇಳಿಸಿಕೊಂಡು ಸ್ಲಿಮ್ ಆದ ಸಪ್ತಮಿ



'ಕಾಂತಾರ' ಬೆಡಗಿ ಸಪ್ತಮಿ ಗೌಡ ಸ್ಲಿಮ್ ಆಗಿದ್ದಾರೆ. ಆದರೆ ಏಕಾಏಕಿ ಈ ಫೋಟೊ ನೋಡಿದವರು ಇವರು ಲೀಲಾನೇನಾ? ಅಂತ ಅಚ್ಚರಿಪಡ್ತೀದ್ದಾರೆ. ಯಾಕೆ ಸ್ಲಿಮ್ ಆಗಿಬಿಟ್ಟಿದ್ದಾರೆ? ಮೊನ್ನೆ ಮೊನ್ನೆ ಚೆನ್ನಾಗಿದ್ದರಲ್ಲ. ಮೈ ಕೈ ತುಂಬಿಕೊಂಡು ನಗುತ್ತಿದ್ದರಲ್ಲ. ಹೀಗೆ ಒಂದಾ ಎರಡಾ ಕಾಮೆಂಟ್ಸ್? ಅವರಿಗೆಲ್ಲ ತಕ್ಕ ಉತ್ತರ ನೀಡಲು ಬಂದಿದ್ದಾರೆ ಕಾಡುಶಿವನ ಮಾಜಿ ಬೆಡಗಿ ಸಪ್ತಮಿ ಗೌಡ.



ಸಪ್ತಮಿ ಗೌಡ ಅವರು 'ಕಾಂತಾರ' ಸಿನಿಮಾ ಬರೋವರೆಗೂ ಇವರು ಯಾರೆಂದು ಗೊತ್ತಿರಲಿಲ್ಲ. ಅದಕ್ಕೂ ಮುನ್ನ ಒಂದೆರಡು ಸಿನಿಮಾದಲ್ಲಿ ನಟಿಸಿದ್ದರು. ಅದ್ಭುತ ಅಭಿನಯ ತೋರಿಸಿದ್ದರು. ಆದರೆ ಅವು ಹಿಟ್ ಆಗಿರಲಿಲ್ಲ. ಯಾವಾಗ ಕಾಂತಾರದಲ್ಲಿ ಕಾಡು ಶಿವನ ಜೊತೆ ಸಿಂಗಾರ ಸಿರಿಯೇ ಎಂದು ಹೆಜ್ಜೆ ಹಾಕಿದರೋ ಅಂದಿನಿಂದ ಸಪ್ತಮಿಗೆ ಫುಲ್ ಡಿಮ್ಯಾಂಡ್. ಸಪ್ತಮಿ ಕನ್ನಡಕ್ಕೆ ಮಾತ್ರ ಅಲ್ಲ ಇಡೀ ದೇಶಕ್ಕೆ ಗೊತ್ತಾದರು. ಈಗ 'ಯುವ' ಸಿನಿಮಾದಲ್ಲಿ ಯುವರಾಜ್‌ಕುಮಾರ್‌ಗೆ ನಾಯಕಿಯಾಗಿದ್ದಾರೆ. ಈ ಹೊತ್ತಲ್ಲೇ ದೇಹದ ತೂಕ ಇಳಿಸಿಕೊಂಡಿದ್ದಾರೆ. ಸ್ಲಿಮ್ ಅಂಡ್ ಟ್ರಿಮ್ ಆಗಿದ್ದಾರೆ. ಬಣ್ಣದ ಲೋಕದಲ್ಲಿ ಹೀಗಿದ್ದರೇ ತೂಕ ಜಾಸ್ತಿ ಎನ್ನುವುದನ್ನು ಈ ಹುಡುಗಿಯೂ ಪ್ರೂವ್ ಮಾಡಿದ್ದಾರೆ.

'ಕಾಂತಾರ' ಸಿನಿಮಾದಲ್ಲಿ ಸಪ್ತಮಿ ಗೌಡ ದಪ್ಪಗಿದ್ದರು. ಆಫ್‌ಕೋರ್ಸ್ ಆ ಪಾತ್ರಕ್ಕೆ ಹಾಗೆ ಬೇಕಿತ್ತು. ಅದನ್ನೇ ಮಾಡಿದರು. ಆದರೆ ಆಮೇಲೆ ಅದು ಸಾಲಲ್ಲ ಎಂದು ಗೊತ್ತಾಯಿತು. ಅದಕ್ಕಾಗಿಯೇ ಜಿಮ್‌ನಲ್ಲಿ ಬೆವರು ಹರಿಸಿದ್ದಾರೆ. ನಿತ್ಯ ಇಂತಿಷ್ಟು ಗಂಟೆ ವ್ಯಾಯಾಮಕ್ಕೆ ಮೀಸಲಿಟ್ಟಿದ್ದಾರೆ. ನಾಲಿಗೆಗೆ ಕಡಿವಾಣ ಹಾಕಿದ್ದಾರೆ. ಎಣ್ಣೆ ಪದಾರ್ಥ ತ್ಯಜಿಸಿದ್ದಾರೆ. ಕೆಲವೇ ತಿಂಗಳಲ್ಲಿ ಸಪ್ತಮಿ ಗೌಡ ಇವರೇನಾ ಎನ್ನುವಷ್ಟು ಬದಲಾಗಿದ್ದಾರೆ. ಈಗಾಗಲೇ ಬಾಲಿವುಡ್‌ಗೆ ಹೋಗಿ ಬಂದಿದ್ದಾರೆ. ಬಹುಶಃ ತಮಿಳು ಸಿನಿಮಾದಲ್ಲೂ ನಟಿಸುತ್ತಿದ್ದಾರೆ. ಕನ್ನಡದ ಮತ್ತೊಂದು ಹುಡುಗಿ ಆಕಾಶದಲ್ಲಿ ಹಾರಾಡಲು ಸಜ್ಜಾಗಿದ್ದಾರೆ. ಸ್ಯಾಂಡಲ್‌ವುಡ್ ಬಾವುಟ ಪರಭಾಷೆಯಲ್ಲಿ ತೇಲಾಡಲು ಸಜ್ಜಾಗಿದೆ. ಹಾಗಾಗಿ ಡಯಟ್, ಜಿಮ್, ಫುಡ್ ಕಡೆ ಸಪ್ತಮಿ ನಿಗಾ ವಹಿಸುತ್ತಿದ್ದಾರೆ.

'ಕಾಂತಾರ' ಚಿತ್ರದ ಸಕ್ಸಸ್ ಅನ್ನು ನಟಿ ಸದುಪಯೋಗಪಡಿಸಿಕೊಂಡಿದ್ದಾರೆ. ಅದಷ್ಟೇ ಅಲ್ಲ, ಕನ್ನಡ ಕಿರುತೆರೆಯಲ್ಲೂ ಫುಲ್ ಡಿಮ್ಯಾಂಡ್ ಇದೆ. ಸತ್ಯ, ಅಮೃತಧಾರೆ, ಶ್ರೀರಸ್ತು ಶುಭಮಸ್ತು ಸೀರಿಯಲ್‌ಗಳಿಗೆ ಇತ್ತೀಚೆಗೆ ನಟಿ ಪ್ರಚಾರ ಮಾಡಿದ್ದರು.

ತೆಲುಗು ಅಂಗಳದಲ್ಲಿ ಮೊದಲೇ ಕನ್ನಡತಿಯರ ದರ್ಬಾರ್ ಜಾಸ್ತಿಯಾಗಿದೆ. ರಶ್ಮಿಕಾ ಮಂದಣ್ಣ, ಶ್ರೀಲೀಲಾ, ರುಕ್ಮಿಣಿ ವಸಂತ್ ಮಧ್ಯೆ ಸಪ್ತಮಿ ಕೂಡ ತಮ್ಮ ಚಾರ್ಮ್ ಉಳಿಸಿಕೊಂಡಿದ್ದಾರೆ.

# ಹಾಟ್ ಆಗಿ ಕಾಣಿಸಿಕೊಂಡ ಸಾರಾ ಅಣ್ಣಯ್ಯ



ಕನ್ನಡತಿ, ನಮ್ಮ ಲಚ್ಚಿ, ಅಮೃತಧಾರೆ ಸೀರಿಯಲ್ ಮೂಲಕ ಗಮನ ಸೆಳೆದ ಸಾರಾ ಅಣ್ಣಯ್ಯ ಅವರು ಸದ್ಯ ಹಾಟ್ ಫೋಟೋಶೂಟ್ ಮೂಲಕ ಪಡ್ಡೆಹುಡುಗರ ನಿದ್ದೆ ಕದ್ದಿದ್ದಾರೆ. ಎದೆಯ ಗೀಟು ಕಾಣುವಂತೆ ಸಖತ್ ಬೋಲ್ಡ್ ಆಗಿ ಸಾರಾ ಕಾಣಿಸಿಕೊಂಡಿದ್ದಾರೆ.

ಸಾರಾ ಸದ್ಯ ವೆಕೇಷನ್ ಮೂಡ್‌ನಲ್ಲಿದ್ದಾರೆ. ಕಡಲ ತೀರದ ರೆಸಾರ್ಟ್‌ವೊಂದರಲ್ಲಿ ಬಿಕಿನಿ ಧರಿಸಿ ಸಖತ್ ಹಾಟ್ ಆಗಿ ನಟಿ ಕಾಣಿಸಿಕೊಂಡಿದ್ದಾರೆ. 'ನಾನು ದಾಲ್ಚಿನ್ನಿಯಂತೆ ಸ್ವೀಟ್' ಅಂತ ಕ್ಯಾಪ್ಷನ್ ನೀಡಿ, ಸಾರಾ ಸೋಷಿಯಲ್ ಮೀಡಿಯಾದಲ್ಲಿ ಫೋಟೋ ಶೇರ್ ಮಾಡಿದ್ದಾರೆ. ಸಾರಾ ಲುಕ್ ನೋಡಿ ಹಾಟ್, ಕ್ಯೂಟ್, ಸೆಕ್ಸಿ ಅಂತೆಲ್ಲಾ ನೆಟ್ಟಿಗರು ಬಗೆ ಬಗೆಯ ಕಾಮೆಂಟ್‌ಗಳನ್ನು ಹಾಕಿದ್ದಾರೆ.

'ನಮ್ಮೂರ ಹೈಕ್ಳು' ಚಿತ್ರದ ಮೂಲಕ ನಾಯಕಿಯಾಗಿ ಸಾರಾ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟರು. ಆದರೆ ಮೊದಲ ಸಿನಿಮಾ ಅವರ ಕೈಹಿಡಿಯಲಿಲ್ಲ. ಚಿತ್ರರಂಗದಿಂದ ಈಗ ಹೇಳಿಕೊಳ್ಳುವಂತಹ ಅವಕಾಶ ಕೂಡ ಸಿಗುತ್ತಿಲ್ಲ. ಹಾಗಾಗಿ ಕಿರುತೆರೆಯಲ್ಲಿ ನಟಿ ಗುರುತಿಸಿಕೊಳ್ತಿದ್ದಾರೆ.

ರಂಜನಿ ರಾಘವನ್- ಕಿರಣ್ ನಟನೆ 'ಕನ್ನಡತಿ' ಸೀರಿಯಲ್ ವರೂಧಿನಿ ಪಾತ್ರದಲ್ಲಿ ಸಾರಾ ನಟಿಸಿದ್ದರು. ಇದು ಕೂಡ ಲೀಡ್ ಪಾತ್ರವೇ ಆಗಿತ್ತು. ಹೀರೋ ಹಿಂದೆ ಬೀಳುವ ಪಾತ್ರ ಇದಾಗಿದೆ.

ಈಗ ಜನಪ್ರಿಯ 'ಅಮೃತಧಾರೆ' ಸೀರಿಯಲ್‌ನಲ್ಲಿ ಹೀರೋ ಗೌತಮ್ ತಂಗಿ ಮಹಿಮಾ ಪಾತ್ರದ ಮೂಲಕ ಸಾರಾ ಗುರುತಿಸಿಕೊಳ್ತಿದ್ದಾರೆ. ಸಾರಾ ಪಾತ್ರಕ್ಕೆ ಪ್ರಾಮುಖ್ಯತೆ ಇದ್ದು, ಸೀರಿಯಲ್‌ನಲ್ಲಿ ಹಲವು ಟ್ವಿಸ್ಟ್‌ಗಳನ್ನು ಪಡೆದು ಮುನ್ನುಗ್ಗುತ್ತಿದೆ. ಅಂದಹಾಗೆ, ಅಮೃತಧಾರೆ ಸೀರಿಯಲ್‌ಗೆ ಎಂಟ್ರಿ ಕೊಡುವ ಮೂಲಕ 'ನಮ್ಮ ಲಚ್ಚಿ' ಸೀರಿಯಲ್‌ನಲ್ಲಿ ಸಾರಾ ನಟಿಸುತ್ತಿದ್ದರು. ನೆಗೆಟಿವ್ ಶೇಡ್‌ನಲ್ಲಿದ್ದ ಈ ಪಾತ್ರವನ್ನು ಕೆಲ ತಿಂಗಳುಗಳ ಹಿಂದೆ ಬಿಟ್ಟು 'ಅಮೃತಧಾರೆ' ತಂಡ ಸೇರಿಕೊಂಡರು ನಟಿ ಸಾರಾ.



# ಗೋಲ್ಡ್ ಕೇಕ್ ಕಟ್ ಮಾಡಿ ಸಂಭ್ರಮಿಸಿದ 'ಐರಾವತ' ನಟಿ

ಕನ್ನಡದ 'ಐರಾವತ' ನಟಿ ಊರ್ವಶಿ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ. ಸಿಂಗರ್ ಹನಿ ಸಿಂಗ್ ಉಪಸ್ಥಿತಿಯಲ್ಲಿ ಗೋಲ್ಡ್ ಕೇಕ್ ಕಟ್ ಮಾಡಿ ಹುಟ್ಟುಹಬ್ಬವನ್ನು ಅದ್ದೂರಿಯಾಗಿ ನಟಿ ಆಚರಿಸಿದ್ದಾರೆ. ಬರ್ತ್‌ಡೇಯ ಸುಂದರ ಫೋಟೋಗಳನ್ನು ನಟಿ ಹಂಚಿಕೊಂಡಿದ್ದಾರೆ.



ಸದ್ಯ ನಟಿ 'ಲವ್ ಡೋಸ್ 2' ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಈ ಸಿನಿಮಾದ ಸೆಟ್‌ನಲ್ಲಿ ಊರ್ವಶಿ ಬರ್ತ್‌ಡೇ ಸೆಲೆಬ್ರೇಶನ್ ನಡೆದಿದೆ. ಗೋಲ್ಡ್ ಪ್ಲೇಟೆಡ್ ಕೇಕ್ ಕತ್ತರಿಸಿ ನಟಿ ಸಂಭ್ರಮಿಸಿದ್ದಾರೆ. ಖ್ಯಾತ ಸಿಂಗರ್ ಹನಿ ಸಿಂಗ್ ಈ ಸಂಭ್ರಮದಲ್ಲಿ ಭಾಗಿಯಾಗಿದ್ದು ವಿಶೇಷ. ಹನಿ ಸಿಂಗ್‌ರನ್ನು ನಟಿ ತಬ್ಬಿಕೊಂಡಿರುವ ಫೋಟೋ ನೋಡಿ, ಹೊಸ ಬಾಯ್‌ಫ್ರೆಂಡ್ ಅಂತ ಸೋಷಿಯಲ್ ಮೀಡಿಯಾದಲ್ಲಿ ನೆಟ್ಟಿಗರು ಪ್ರಶ್ನೆ ಮಾಡಿದ್ದಾರೆ.

ನನ್ನ ಬಗ್ಗೆ ನಿಜವಾದ ಕಾಳಜಿ ನನ್ನ ವೃತ್ತಿಜೀವನದಲ್ಲಿ ಅದ್ಭುತ ಅಧ್ಯಾಯವನ್ನು ರಚಿಸಿದೆ. ನನ್ನ ಭಾವನೆಗಳ ಆಳವನ್ನು ನಿಮಗಾಗಿ ಹಿಡಿದಿರುತ್ತೇನೆ. ನಿಮ್ಮ ಸಮಯಕ್ಕಾಗಿ ಧನ್ಯವಾಗಳು ಎಂದು ಹನಿ ಸಿಂಗ್‌ಗೆ ಬರೆದಿದ್ದಾರೆ ಊರ್ವಶಿ.

ಈ ಹಿಂದೆ ಓವರ್ ಮೇಕಪ್ ಮಾಡಿರುವ ಫೋಟೋ ಶೇರ್ ಮಾಡ್ತಿದ್ದಂತೆ ಐರಾವತ ನಟಿಗೆ ನೆಟ್ಟಿಗರು ಕ್ಲಾಸ್ ತೆಗೆದುಕೊಂಡಿದ್ದಾರೆ. ಓವರ್ ಮೇಕಪ್ ಮಾಡಿಕೊಳ್ಳಬೇಡಿ. ಮಲಗುವಾಗಲೂ ಮೇಕಪ್ ತೆಗೆಯಲ್ಲ ಅನಿಸುತ್ತೆ ಎಂದೆಲ್ಲಾ ನೆಟ್ಟಿಗರು ಬಗೆ ಬಗೆಯ ಕಾಮೆಂಟ್ ಮಾಡಿದ್ದರು. ಒಟ್ನಲ್ಲಿ ಊರ್ವಶಿ ಹೊಸ ಲುಕ್ ಟ್ರೋಲಿಗರ ಬಾಯಿಗೆ ಆಹಾರವಾಗಿತ್ತು.

ಊರ್ವಶಿ ಸುಂದರವಾಗಿ ರೆಡಿಯಾಗಿದ್ದರು. ಅವರ ಓವರ್ ಮೇಕಪ್‌ಗೆ ಟ್ರೋಲ್ ಆಗ್ತಿದ್ದರು. ಅವರಿಗೆ ಟ್ರೋಲ್ ಆಗೋದು ಇದೇ ಮೊದಲ ಬಾರಿ ಏನೇನಲ್ಲ. ಸಿನಿಮಾಗಿಂತ ಊರ್ವಶಿ ಅವರು ಕಾಂಟ್ರವರ್ಸಿ, ಟ್ರೋಲ್‌ನಿಂದಲೇ ಹೆಚ್ಚೆಚ್ಚು ಸುದ್ದಿಯಾಗಿದ್ದಾರೆ.

ಡಿಬಾಸ್ ನಾಯಕಿ, 'ಐರಾವತ' ನಟಿ ಊರ್ವಶಿ ಅವರು ಕನ್ನಡ, ತೆಲುಗು, ಹಿಂದಿ ಸೇರಿದಂತೆ ಬಹುಭಾಷಾ ನಟಿಯಾಗಿ ಬ್ಯುಸಿಯಾಗಿದ್ದಾರೆ. ಸಾಕಷ್ಟು ಜಾಹೀರಾತುಗಳಿಗೆ ರೂಪದರ್ಶಿಯಾಗಿ ಕೂಡ ಕಾಣಿಸಿಕೊಂಡಿದ್ದಾರೆ.

## ಅಮೇಲಿಯಾ ಆಲ್‌ರೌಂಡರ್ ಆಟ

# ಮುಂಬೈಗೆ 5 ವಿಕೆಟ್‌ಗಳ ಜಯ

ಅಮೇಲಿಯಾ ಕೇರ್ ಆಲ್‌ರೌಂಡರ್ ಆಟ ಹಾಗೂ ಹರ್ಮನ್ ಪ್ರೀತ್ ಕೌರ್ ಜವಾಬ್ದಾರಿಯುತ ಬ್ಯಾಟಿಂಗ್ ನೆರವಿನಿಂದ ಮುಂಬೈ ಇಂಡಿಯನ್ಸ್ ಮಹಿಳಾ ತಂಡ ಗುಜರಾತ್ ಜೈಂಟ್ಸ್ ಮಹಿಳಾ ತಂಡದ ವಿರುದ್ಧ 5 ವಿಕೆಟ್‌ಗಳ ಜಯ ಸಾಧಿಸಿದೆ.



ಮಹಿಳಾ ಪ್ರೀಮಿಯರ್ ಲೀಗ್ ಮೊದಲ ಆವೃತ್ತಿಯಲ್ಲಿ ಸತತ ಗೆಲುವಿನೊಂದಿಗೆ ಟ್ರೋಫಿ ಮುಡಿಗೇರಿಸಿಕೊಂಡಿದ್ದ ಮುಂಬೈ ಇಂಡಿಯನ್ಸ್ 2ನೇ ಆವೃತ್ತಿಯಲ್ಲೂ ಜಯದ ಓಟ ಮುಂದುವರಿಸಿದೆ. ಆರಂಭಿಕ ಎರಡೂ ಪಂದ್ಯಗಳಲ್ಲೂ ಗೆಲುವು ಸಾಧಿಸಿದೆ.

ಇಲ್ಲಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಫೀಲ್ಡಿಂಗ್ ಆಯ್ದುಕೊಂಡ ಮುಂಬೈ, ಬ್ಯಾಟಿಂಗ್ ಮಾಡುವ ಅವಕಾಶವನ್ನು ಗುಜರಾತ್ ಜೈಂಟ್ಸ್ ಮಹಿಳಾ ತಂಡಕ್ಕೆ ಬಿಟ್ಟುಕೊಟ್ಟಿತು. ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ತಂಡ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 126 ರನ್ ಗಳಿಸಿತು. ಅಲ್ಪ ಮೊತ್ತದ ಗುರಿ ಬೆನ್ನತ್ತಿದ್ದ ಮುಂಬೈ 18.1 ಓವರ್‌ಗಳಲ್ಲೇ 129 ರನ್ ಬಾರಿಸಿ ಗೆಲುವಿನ ನಗೆ ಬೀರಿತು.

ಚೇಸಿಂಗ್ ಆರಂಭಿಸಿದ ಮುಂಬೈ ಒಂದೆಡೆ ರನ್ ಕಲೆಹಾಕಿದರೂ ಮತ್ತೊಂದೆಡೆ ವಿಕೆಟ್ ಕಳೆದುಕೊಳ್ಳುತ್ತಾ ಸಾಗಿತು. ಗುಜರಾತ್ ತಂಡ ಫೀಲ್ಡಿಂಗ್‌ನಲ್ಲಿ ಬಿಗಿ ಹಿಡಿತ ಸಾಧಿಸಿದ್ದರಿಂದ ಮುಂಬೈಗೆ ಗೆಲುವು ಕಷ್ಟವೆಂದೇ ಭಾವಿಸಲಾಗಿತ್ತು. ಈ ವೇಳೆ ಕ್ರೀಸ್‌ನಲ್ಲಿ ಭದ್ರವಾಗಿ ನೆಲೆಯೂರಿದ ನಾಯಕಿ ಹರ್ಮನ್‌ಪ್ರೀತ್ ಕೌರ್ ಹಾಗೂ ಅಮೆಲಿಯಾ ಕೆರ್ 50 ಎಸೆತಗಳಲ್ಲಿ 66 ರನ್‌ಗಳ ಜೊತೆಯಾಟ ನೀಡಿದರು. ಇದರಿಂದ ಗೆಲುವು ಮುಂಬೈ ತಂಡದತ್ತ ವಾಲಿತು.

ಮುಂಬೈ ಪರ ಹರ್ಮನ್ ಪ್ರೀತ್ ಕೌರ್ 46 ರನ್, ಅಮೇಲಿಯಾ ಕೇರ್ 31 ರನ್, ನಟಾಲಿ ಸ್ಕೀವರ್ ಬ್ರಂಟ್ 22 ರನ್, ಹೇಲಿ ಮ್ಯಾಥ್ಯೂಸ್ ಹಾಗೂ ಯಸ್ತಿಕಾ ಭಾಟಿಯಾ ತಲಾ 7 ರನ್, ಪೂಜಾ ವಸ್ತ್ರಕಾರ್ 1 ರನ್ ಗಳಿಸಿದರು. ಗುಜರಾತ್ ಜೈಂಟ್ಸ್ ಪರ ತನುಜಾ ಕನ್ವರ್ 2 ವಿಕೆಟ್ ಕಿತ್ತರೆ, ಕ್ಯಾಥರಿನ್ ಬ್ರೈಸ್ ಮತ್ತು ಲಿಯಾ ತಹುಹು ತಲಾ ಒಂದೊಂದು ವಿಕೆಟ್ ಪಡೆದರು.

ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ತಂಡ ಸ್ಫೋಟಕ ಆರಂಭ ಪಡೆಯುವ ನಿರೀಕ್ಷೆಯಲ್ಲಿತ್ತು. ಆದ್ರೆ ಆರಂಭದಿಂದಲೇ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೀಡಾಯಿತು. ಗುಜರಾತ್ ತಂಡದ ಪರ ನಾಯಕಿ ಬೆತ್ ಮೂನಿ 24 ರನ್, ತನುಜಾ ಕನ್ವರ್ 28 ರನ್, ಕ್ಯಾಥರಿನ್ ಬ್ರೈಸ್ 25 ರನ್, ಆಶ್ಲೀ ಗಾರ್ಡ್ನರ್ 15 ರನ್ ಗಳಿಸಿದ್ದು ಬಿಟ್ಟರೆ, ಉಳಿದೆಲ್ಲರೂ ಒಂದಕಿ ರನ್ ಗಳಿಸಿ ಪೆವಿಲಿಯನ್‌ಗೆ ಮರಳಿದರು. ಅಂತಿಮವಾಗಿ ಗುಜರಾತ್ ತಂಡ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ ಕೇವಲ 126 ರನ್ ಗಳಿಸಿತು.

ಮುಂಬೈ ಇಂಡಿಯನ್ಸ್ ಪರ ಅಮೆಲಿಯಾ ಕೆರ್ 4 ಓವರ್‌ಗಳಲ್ಲಿ ಕೇವಲ 17 ರನ್ ಬಿಟ್ಟುಕೊಟ್ಟು 4 ವಿಕೆಟ್ ಕಿತ್ತರೆ, ಶಬ್ನಿಮ್ ಇಸ್ಮಾಯಿಲ್ 3 ವಿಕೆಟ್, ನಟಾಲಿ ಸ್ಕೀವರ್ ಬ್ರಂಟ್ ಮತ್ತು ಹೇಲಿ ಮ್ಯಾಥ್ಯೂಸ್ ತಲಾ ಒಂದೊಂದು ವಿಕೆಟ್ ಪಡೆದು ಮಿಂಚಿದರು.

# 4,000 ರನ್ ಪೂರೈಸಿ ವಿಶೇಷ ಸಾಧನೆ ಮಾಡಿದ ಹಿಟ್‌ಮ್ಯಾನ್

ಇಲ್ಲಿ ನಡೆಯುತ್ತಿರುವ ಇಂಗ್ಲೆಂಡ್ ವಿರುದ್ಧದ 4ನೇ ಟೆಸ್ಟ್ ಪಂದ್ಯದ 3ನೇ ದಿನದಾಟದಲ್ಲಿ ಟೀಂ ಇಂಡಿಯಾ ನಾಯಕ ರೋಹಿತ್ ಶರ್ಮಾ ಟೆಸ್ಟ್ ಕ್ರಿಕೆಟ್‌ನಲ್ಲಿ 4,000 ರನ್‌ಗಳನ್ನು ಪೂರೈಸಿ ವಿಶೇಷ ಸಾಧನೆ ಮಾಡಿದ್ದಾರೆ.



ಈ ಮೂಲಕ 4000 ರನ್‌ಗಳನ್ನು ಪೂರೈಸಿದ ಟೀಂ ಇಂಡಿಯಾ 17ನೇ ಆಟಗಾರ ಹಾಗೂ ವೇಗವಾಗಿ 4,000 ರನ್ ಗಳಿಸಿದ ಭಾರತದ 11ನೇ ಆಟಗಾರ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ. ಟೀಂ ಇಂಡಿಯಾ ಮಾಜಿ ಕ್ರಿಕೆಟಿಗ ವೀರೇಂದ್ರ ಸೆಹ್ವಾಗ್ ಕೇವಲ 79 ಇನ್ನಿಂಗ್ಸ್‌ಗಳಲ್ಲಿ 4,000 ರನ್‌ಗಳಿಸಿದ ಸಾಧನೆ ಮಾಡಿದ್ದರು.

2013ರಲ್ಲಿ ಟೆಸ್ಟ್‌ಗೆ ಪಾದಾರ್ಪಣೆ ಮಾಡಿದ್ದ ರೋಹಿತ್ ಇದುವರೆಗೆ ಭಾರತ ಪರ 58 ಪಂದ್ಯಗಳನ್ನು ಆಡಿದ್ದಾರೆ. ಪ್ರಸ್ತುತ ಟೆಸ್ಟ್ ಕ್ರಿಕೆಟ್‌ನಲ್ಲಿ 44ಕ್ಕಿಂತ ಹೆಚ್ಚು ಸರಾಸರಿ ಹೊಂದಿದ್ದಾರೆ. ಅವರು 2019ರಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಗಳಿಸಿದ 212ರ ಅತ್ಯಧಿಕ ಸ್ಕೋರ್‌ನೊಂದಿಗೆ ದೀರ್ಘ ಸ್ವರೂಪದಲ್ಲಿ 11 ಶತಕಗಳು ಮತ್ತು 16 ಅರ್ಧಶತಕಗಳನ್ನು ಗಳಿಸಿದ್ದಾರೆ.

ಇಂಗ್ಲೆಂಡ್ ವಿರುದ್ಧ ನಡೆಯುತ್ತಿರುವ 4ನೇ ಪಂದ್ಯದಲ್ಲಿ ರೋಹಿತ್ 21 ರನ್ ಗಳಿಸುವ ಮೂಲಕ 4,000 ರನ್ ಗಡಿ ಮುಟ್ಟಿದರು. ಈ ಸಾಧನೆಯೊಂದಿಗೆ, ಇಂಗ್ಲೆಂಡ್ ವಿರುದ್ಧ 1,000 ರನ್‌ಗಳನ್ನು ಪೂರೈಸಿದ್ದಲ್ಲೇ ತವರಿನಲ್ಲಿ 2,200ಕ್ಕೂ ಹೆಚ್ಚು ರನ್‌ಗಳನ್ನು ಗಳಿಸಿದ ಸಾಧಕರೂ ಎನಿಸಿಕೊಂಡಿದ್ದಾರೆ. ರಾಜ್‌ಕೋಟ್‌ನಲ್ಲಿ ರೋಹಿತ್, ಇಂಗ್ಲೆಂಡ್ ವಿರುದ್ಧ ಟೆಸ್ಟ್ ಕ್ರಿಕೆಟ್‌ನಲ್ಲಿ ಮೂರನೇ ಶತಕ ಸಿಡಿಸಿದ್ದರು. ಟೆಸ್ಟ್‌ನ ಮೊದಲನೇ ದಿನ ಅವರು 196 ಎಸೆತಗಳಲ್ಲಿ 131 ರನ್ ಗಳಿಸಿದ್ದರು.

# ಮೋದಿ ಅವ್ರು ನನ್ನ ಪರವಾಗಿ ಕೆಲಸ ಮಾಡಿದ್ದಾರೆ

**ಬೆಂಗಳೂರು:** ಮೋದಿ ಅವರು ನನ್ನ ಪರವಾಗಿ ಕೆಲಸ ಮಾಡಿದ್ದಾರೆ. ಹಾಗಾಗಿ ಬೇರೆ ಯಾರಿಗೋ ಟಿಕೆಟ್ ಕೊಡ್ತಾರೆ ಅಂತ ಬಾವಿಸೋಕಾಗಲ್ಲ ಎಂದು ಸಂಸದೆ ಸುಮಲತಾ ಹೇಳಿದರು.



ನಗರದಲ್ಲಿ ಆಪ್ತರು ಹಾಗೂ ಕಾರ್ಯಕರ್ತರ ಜೊತೆ ಸಭೆ ನಡೆಸಿ ಬಳಿಕ ಮಾತನಾಡಿದ ಸುಮಲತಾ ಅವರು, ಬೆಂಬಲಿಗರ ಸಭೆ ನಡೆಸಿದ್ದೇವೆ. 5 ವರ್ಷಗಳ ಜರ್ನಿ ಮುಕ್ತಾಯ ಆಗ್ತಿದೆ. 5 ವರ್ಷಗಳ ನೆನಪುಗಳ ಬಗ್ಗೆ ಚರ್ಚೆ ಆಗಿದೆ. ಮುಂದಿನ ಲೋಕಸಭಾ ಚುನಾವಣೆಯನ್ನ ಯಾವ ರೀತಿ ನೋಡ್ತಾರೆ ಎಂಬುದು ಚರ್ಚೆ ಆಯ್ತು. ಸೋಶಿಯಲ್ ಮೀಡಿಯಾದಲ್ಲಿ ಬೇರೆ ಚರ್ಚೆ ಆಗ್ತಿತ್ತು. ಅದರ ಬಗ್ಗೆ ಸಭೆಯಲ್ಲಿ ಚರ್ಚೆ ಆಯ್ತು. ದರ್ಶನ್ ಅವರು ಕೂಡ ಸಭೆಯಲ್ಲಿ ಮಾತಾಡಿದ್ದಾರೆ. ಅವರು ಕೂಡ ನಮ್ಮ ಜೊತೆ ಇದ್ದು ದುಡಿದಿದ್ದವರು. ಎಲ್ಲರೂ ಜೊತೆಗೆ ಹೋಗೋಣ ಅಂತಾ ದರ್ಶನ್ ಮಾತಾಡಿದ್ದಾರೆ ಸಭೆಯಲ್ಲಿ ಎಂದು ತಿಳಿಸಿದರು.

ಸಚ್ಚಿದಾನಂದ ಸಂಧಾನ ವಿಚಾರ ಚರ್ಚೆ ಆಗ್ತಿರುವ ಬಗ್ಗೆ ಗೊತ್ತಿಲ್ಲ. ನಾವೆಲ್ಲ ಒಟ್ಟಾಗಿ ಇದ್ದೇವೆ. ಬೇರೆ ಆಗಿದ್ದೇವೆ ಅಂತಾ ಸಚ್ಚಿನೂ ಹೇಳಿಲ್ಲ, ನಾನು ಹೇಳಿಲ್ಲ. ಈ ಬಗ್ಗೆ ಗೊಂದಲ ಬೇಡ. ನಮ್ಮ ಜೊತೆನೆ ಇದ್ದಾರೆ. ಬಿಜೆಪಿಯಿಂದ ನಿಂತುಕೊಳ್ಳಿ ಅಂತಾ ಸಭೆಯಲ್ಲಿ ಬೆಂಬಲಿಗರು, ಆಪ್ತರು ಹೇಳಿದ್ದಾರೆ. ಪ್ರೋತ್ಸಾಹಕರವಾದ ಮಾತುಗಳನ್ನ ಆಡಿ ಕಳಿಸಿದ್ದಾರೆ. ಮಂಡ್ಯದಲ್ಲಿ ಪಕ್ಷವನ್ನ ಸ್ಟ್ರಾಂಗ್ ಮಾಡೋಣ ಅಂತಾ ಬೆಂಬಲಿಗರು ಹೇಳಿದ್ದಾರೆ. ಮಂಡ್ಯದಲ್ಲಿ ಬಿಜೆಪಿ ಸ್ಟ್ರಾಂಗ್ ಮಾಡಬೇಕು ಅಂತಾ ಬಿಜೆಪಿ ಪಕ್ಷದ ಶಾಸಕರಲ್ಲಿ ಇದೇ ಎಂದು ಹೇಳಿದರು.

ನಾನು ಪಕ್ಷೇತರವಾಗಿ ನಿಲ್ಲೋ ಬಗ್ಗೆ ಇನ್ನೂ ಆಲೋಚನೆ ಮಾಡಿಲ್ಲ. ಆದರೆ ಬೆಂಬಲಿಗರು, ಆಪ್ತರು ಮಂಡ್ಯ ಬಿಟ್ಟು ಹೋಗಬೇಡಿ ಎನ್ನುತ್ತಿದ್ದಾರೆ. ಒಂದು ತಿಂಗಳು ಅಷ್ಟೇ ಟೈಂ ಇದೆ ಅನ್ನೋದು ಎಲ್ಲರಿಗೂ ಗೊತ್ತಿದೆ. ಬಿಜೆಪಿಯವರು ಸೂಕ್ತ ಸಮಯದಲ್ಲಿ ಅನೌನ್ಸ್ ಮಾಡ್ತಾರೆ. ಪಾಸಿಟಿವ್ ಆಗಿ ಅನೌನ್ಸ್ ಇರುತ್ತೆ ಅಂತಾ ನಾನು ಅಂದುಕೊಂಡಿದ್ದೇನೆ ಎಂದು ಆಶಯ ವ್ಯಕ್ತಪಡಿಸಿದರು.

ಬೆಂಬಲಿಗರ ಅಭಿಪ್ರಾಯವನ್ನ ಹೈಕಮಾಂಡ್ ಗಮನಕ್ಕೆ ತರುತ್ತೀರಾ ಎಂಬ ಪ್ರಶ್ನೆಗೆ ಉತ್ತರಿಸಿ, ನನ್ನ ಕಡೆಯಿಂದ ಅವರ ಅಭಿಪ್ರಾಯ ಕಳಿಸುತ್ತೇನೆ. ಇದು ಗೊತ್ತಾಗೇ ಗೊತ್ತಾಗುತ್ತೆ. ಇಲ್ಲಿ ಎಲ್ಲಾ ಪಕ್ಷದವರು ಬಂದಿದ್ದಾರೆ. ಕಾಂಗ್ರೆಸ್, ಜೆಡಿಎಸ್, ಬಿಜೆಪಿ ಅವರು ಎಲ್ಲರೂ ಇದ್ದಾರೆ. ಅವರ ಅಭಿಪ್ರಾಯ ತಿಳಿಸಿದ್ದಾರೆ. ಟಿಕೆಟ್ ಜೆಡಿಎಸ್ ಪಾಲಾಗುವ ವಿಚಾರದ ಬಗ್ಗೆ ನಾನು ಆಲೋಚನೆ ಮಾಡಿಲ್ಲ. ಪಾಸಿಟಿವ್ ಆಗಿ ಇದೆ. ಅವರು ಮಂಡ್ಯ ಬಗ್ಗೆ ಮಾತ್ರ ಯೋಚನೆ ಮಾಡ್ತಿಲ್ಲ. ರಾಜ್ಯದ ಆಲೋಚನೆ ಮಾಡ್ತಾರೆ. ನಾನು ಮಂಡ್ಯ ಬಗ್ಗೆ ಮಾತ್ರ ಆಲೋಚನೆ ಮಾಡ್ತೇನೆ. ಚುನಾವಣೆಗೆ ಸ್ಪರ್ಧೆ ಮಾಡುವ ತಯಾರಿಯ ಮೊದಲ ಸಭೆನೇ ಇದು. ಇಲ್ಲಿಂದಲೇ ತಯಾರಿ ಮಾಡುತ್ತೇವೆ ಎಂದು ತಿಳಿಸಿದರು.

ದೇವೇಗೌಡರಿಗೆ ಮಂಡ್ಯ ಬಿಟ್ಟುಕೊಡ್ತೀವಿ ಅಂತಾ ಬಿಜೆಪಿ ಹೇಳಿದೆಯಂತೆ ನಿಮ್ಮ ಗಮನಕ್ಕೆ ಬಂದಿದೆಯಾ ಎಂದಿದ್ದಕ್ಕೆ, ನನ್ನ ಗಮನಕ್ಕೆ ಬಂದಿಲ್ಲ. ತಾಲ್ಲೂಕು ಮಟ್ಟದಲ್ಲೂ ಕಾರ್ಯಕರ್ತರ ಸಭೆ ಮಾಡ್ತೇನೆ. ಸಭೆ ಮಾಡಿ ಅಭಿಪ್ರಾಯ ಸಂಗ್ರಹ ಮಾಡ್ತೇನೆ. ಟಿಕೆಟ್ ಜೆಡಿಎಸ್ ಪಾಲಾಗುವ ಬಗ್ಗೆ ಗೊತ್ತಿಲ್ಲ. ನಾನು ಪಕ್ಷ ಅಲ್ಲ. ಅವರಿಗೆ ಕೇವಲ ಮಂಡ್ಯ ಅಲ್ಲ. ಅವರು ಯಾವ ರೀತಿ ಮೈತ್ರಿ ಮಾಡಿಕೊಳ್ತಾರೋ ಗೊತ್ತಿಲ್ಲ. ಆದ್ರೆ, ಅವರ ನಿರ್ಧಾರ ಏನಾಗಲಿದೆ ನೋಡಬೇಕು. ಈಗಾಗಲೇ ಮೈತ್ರಿ ಕೂಡ ಫಿಕ್ಸ್ ಇದೆ. 400+ ಸೀಟು ಗೆಲ್ಲುವ ಟಾರ್ಗೆಟ್ ಇದೆ. ಗೆಲ್ಲಬೇಕು ಅಂದಾಗ ಎಲ್ಲರ ನಿರ್ಧಾರ ಮುಖ್ಯ ಎಂದರು.

# ದೇವಾಲಯದ ಹಣ ಸರ್ಕಾರದ ಒಳ್ಳೆಯ ಕೆಲಸಕ್ಕೆ ಉಪಯೋಗ

**ಬೆಂಗಳೂರು:** ದೇವಾಲಯಗಳ ಹಣ ಒಳ್ಳೆಯ ಕೆಲಸಗಳಿಗೆ ಬಳಸಿಕೊಳ್ಳಲಾಗುತ್ತಿದ್ದು ಚುನಾವಣಾ ಹತ್ತಿರ ಬರುತ್ತಿದಂತೆ ಬಿಜೆಪಿಯವರು ಭಾವನೆಗಳ ಮೇಲೆ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಅರ್ಚಕರ ಸಂಘ ಕಿಡಿಕಾರಿದೆ.



ಧರ್ಮದಾಯ ದತ್ತಿಗಳ ತಿದ್ದುಪಡಿ ಮಸೂದೆಯನ್ನು ಬಿಜೆಪಿ ವಿರೋಧಿಸುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಆಗಮಿಕರು ಹಾಗೂ ಅರ್ಚಕರ ಸಂಘ ಸುದ್ದಿಗೋಷ್ಠಿ ನಡೆಸಿತು. ಅರ್ಚಕರ ಸಂಘದ ಪ್ರಧಾನ ಸಲಹೆಗಾರ ರಾಧಾಕೃಷ್ಣ ಮಾತನಾಡಿ, ರಾಜ್ಯದ ಎ ದರ್ಜೆಯ ದೇವಾಲಯಗಳ ಬಗ್ಗೆ ಅಪಪ್ರಚಾರ ನಡೆಯುತ್ತಿದೆ. ಕಾಂಗ್ರೆಸ್ ಸರ್ಕಾರದಿಂದ ದೇವಾಲಯಗಳ ಅಭಿವೃದ್ಧಿ ಕೆಲಸ ಮಾಡುತ್ತಿದೆ. ಎ ದರ್ಜೆಯ ದೇವಸ್ಥಾನಗಳಲ್ಲಿ ನೂರಾರು ಕೋಟಿ ವ್ಯವಹಾರ ನಡೆಯುತ್ತಿದೆ. ಈ ಅಭಿವೃದ್ಧಿ ಸಹಿಸಲಾಗದೇ ಬಿಜೆಪಿ ಈ ರೀತಿಯ ಕೆಲಸ ಮಾಡುತ್ತಿದೆ ಎಂದು ದೂರಿದರು.

ಚರ್ಚ್, ಮಸೀದಿಗಳಿಗೆ ಹಣ ಹೋಗುತ್ತಿದೆ ಎಂದು ಬಿಜೆಪಿ ಅಪಪ್ರಚಾರ ಮಾಡುತ್ತಿದೆ. ಹಿಂದೂ ಧರ್ಮವನ್ನು ಎತ್ತಿ ಹಿಡಿಯುವ ಕೆಲಸ ಎ ದರ್ಜೆಯ ದೇವಸ್ಥಾನಗಳಲ್ಲಿ ಆಗುತ್ತಿದೆ. ನಿತ್ಯವೂ ಕೋಟ್ಯಂತರ ರೂ. ಹಣ ಸಂಗ್ರಹಣೆ ಆಗುತ್ತಿದ್ದು ಇದನ್ನು ಬಿಜೆಪಿ ಸಹಿಸುತ್ತಿಲ್ಲ. ಇದೇ ಕಾರಣ ಇಟ್ಟುಕೊಂಡು ಚರ್ಚ್, ಮಸೀದಿಗಳಿಗೆ ಹೋಗುತ್ತಿದೆ ಎಂಬ ಅಪಪ್ರಚಾರ ನಡೆಯುತ್ತಿದೆ. ದೇವಸ್ಥಾನಗಳನ್ನ ರಾಜಕೀಯಕ್ಕೆ ಎಳೆಯುವುದನ್ನ ಬಿಡಿ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪ್ರಧಾನ ಕಾರ್ಯದರ್ಶಿ ಕೆಎಸ್‌ಎಸ್ ದೀಕ್ಷಿತ್ ಮಾತನಾಡಿ, ನಾವು ಪ್ರತಿ ಬಿಜೆಪಿಯವರ ಮನೆಗೆ ಹೋಗಿ ಪತ್ರಗಳನ್ನ ಕೊಟ್ಟು ಕಾಲಿಗೆ ಬಿದ್ದು ವಿರೋಧ ಮಾಡಬೇಡಿ ಎಂದು ಕೇಳಿಕೊಳ್ಳುತ್ತೇವೆ. ನಾವು ಯಾವುದೇ ಪ್ರತಿಭಟನೆ ಮಾಡುವುದಿಲ್ಲ. ನೇರವಾಗಿ ಭೇಟಿ ಮಾಡಿಯೇ ಮನವಿ ಮಾಡಿಕೊಳ್ಳುತ್ತೇವೆ ಎಂದು ಹೇಳಿದರು.

**ಸಂಘ ಹೇಳಿದ್ದೇನು?:** ರಾಜ್ಯದಲ್ಲಿ 50 ವರ್ಷದಿಂದ ಹೋರಾಟ ನಡೆಸುತ್ತಿದ್ದು 42 ಸಾವಿರ ದೇವಾಲಯಗಳು ಬೀದಿ ಪಾಲಾಗಿದ್ದವು. ಅದಕ್ಕೆ ಪರಿಹಾರವಾಗಿ ತಸ್ತಿಕ್ ನೀಡಲಾಗುತ್ತಿದೆ. ನಾವೂ ಆ ಹಣದಲ್ಲಿ ದೇವಾಲಯದ ಪೂಜೆಗಳನ್ನು ಮಾಡಬೇಕು. ರಾಮಲಿಂಗಾ ರೆಡ್ಡಿ ನಮ್ಮ ಹಲವು ಬೇಡಿಕೆ ಈಡೇರಿಸಿದ್ದಾರೆ.

ಈ ಹಿಂದಿನ ಸರ್ಕಾರ ನಮಗೆ ತಸ್ತಿಕ್ ಕೊಟ್ಟಿರಲಿಲ್ಲ. ಆದರೆ ಹೊಸ ಸರ್ಕಾರ ಬಂದ ತಕ್ಷಣ ಬೇಡಿಕೆ ಈಡೇರಿದೆ. ದೇವಾಲಯದ ಹಣ ಯಾರ ಹುಂಡಿಗೂ ಸೇರುತ್ತಿಲ್ಲ. ದೇವಾಲಯದ ಒಂದು ರೂಪಾಯಿ ಕೂಡ ಬೇರೆ ಧರ್ಮಕ್ಕೆ, ಚರ್ಚ್ ಮಸೀದಿಗೆ ಹೋಗುತ್ತಿಲ್ಲ. ನೂರಾರು ಕೋಟಿ ಚರ್ಚ್, ಮಸೀದಿಗೆ ಹೋಗುತ್ತಿದೆ ಎಂದು ಅಪಪ್ರಚಾರ ಮಾಡಲಾಗುತ್ತಿದೆ.

Printed, Published & Owned by N.Venugopal Krishna, Printed at DASHAPRAMATHI MUDRANALAYA, No.433/1, Chikkavitalenahalli Village, Thagachagere Post, Kasaba Hobli, Channapatna Taluk, Ramanagar District, Pin-562160. Published at No.15, Ground Floor, 12th Block, 5th Main, Kumara Park (West), Behind BDA Head Office, Bengaluru-560020. Editor: N.Venugopal Krishna, Mobile No.+91 94835 89085, email: sanjemugilu@gmail.com